# ಅಧ್ಯಾಯ ೬

# ಬ್ಯಾಂಕಿಂಗ್, ಹಣಕಾಸು ವ್ಯವಹಾರ, ವ್ಯಾಪಾರ ಮತ್ತು ವಾಣಿಜ್ಯ

ಸಾಮಾನ್ಯವಾಗಿ ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಬಂಡವಾಳವನ್ನು ಪೂರೈಸುವಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಬ್ಯಾಂಕಿಂಗ್ ವ್ಯವಹಾರವೆಂದರೆ ಬಂಡವಾಳದ ಸಂಗ್ರಹಣೆ ಮತ್ತು ವಿನಿಯೋಗ. ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಸಂಸ್ಥೆಗಳು ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿಗೆ ಬೇಕಾಗುವ ಬಂಡವಾಳವನ್ನು ಒದಗಿಸುವ ಸಾಂಸ್ಥಿಕ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಜನರಲ್ಲಿರುವ ಉಳಿತಾಯವನ್ನು ಸಂಗ್ರಹಿಸಿ, ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಾದ ಸಾಲವನ್ನು ಪೂರೈಸಿದರೆ, ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಉದ್ದೀಪನಗೊಳ್ಳುತ್ತವೆ. ಇತ್ತೀಚಿನ ದಶಕಗಳಲ್ಲಿ ಪರಿವರ್ತನೆಗೊಳ್ಳುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅನುಗುಣವಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಕೂಡ ಸಾಲನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಗ್ರಾಮಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸರ್ಕಾರದ ಆರ್ಥಿಕ ನೀತಿ ನಿರೂಪಣೆಗಳನ್ನು, ಆದ್ಯತೆಗಳನ್ನು ಕಾರ್ಯರೂಪದಲ್ಲಿ ತರಲು ಬ್ಯಾಂಕಿಂಗ್ ವ್ಯವಸ್ಥೆ ಸಹಾಯಕವಾಗುತ್ತಿದೆ. ರಾಜ್ಯದ ಇತರೇ ಭಾಗಗಳಲ್ಲಿ ಕಾಣುತ್ತಿರುವಂತೆ ಕೋಲಾರ ಜಿಲ್ಲೆಯಲ್ಲಿ ಸಹ ಬ್ಯಾಂಕಿಂಗ್ ವ್ಯವಸ್ಥೆಯು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಪ್ರಧಾನವಾದ ಪಾತ್ರ ವಹಿಸಿರುವುದನ್ನು ಕಾಣಬಹುದು.

## ಬ್ಯಾಂಕಿಂಗ್ ಮತ್ತು ಹಣಕಾಸು

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪುಗೊಳ್ಳುವ ಪೂರ್ವದಲ್ಲಿ ವ್ಯವಸಾಯಕ್ಕಾಗಿ ಮತ್ತು ಅದರ ಅಭಿವೃದ್ಧಿಗಾಗಿ, ಅಲ್ಲದೆ ವ್ಯಾಪಾರ ಮತ್ತು ವಾಣಿಜ್ಯ ಉದ್ದೇಶಗಳಿಗೂ ಅಸಂಘಟಿತ ವಲಯದ ಖಾಸಗಿ ಸಾಹುಕಾರರಿಂದ ಸಾಲ ಪಡೆಯುವ ಪದ್ಧತಿ ಬಹುಹಿಂದಿನಿಂದಲೂ ರೂಢಿಯಲ್ಲಿತ್ತು. ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ದೊರೆಯುತ್ತಿದ್ದ ಸಾಲದ ವ್ಯವಸ್ಥೆ ಯಾವ ರೀತಿಯಲ್ಲಿತ್ತೆಂದು ತಿಳಿಸಲು ಸಾಧ್ಯವಾಗದಾದರೂ, ಗ್ರಾಮೀಣ ಜನಸಂಖ್ಯೆಯಲ್ಲಿ ಅಧಿಕ ಸಂಖ್ಯೆಯಲ್ಲಿರುವ ರೈತಾಪಿ ಜನರು ಮಾತ್ರ ತಮಗೆ ಅಗತ್ಯವಿದ್ದ ಸಾಲಕ್ಕಾಗಿ ಅನಿವಾರ್ಯವಾಗಿ

ಹಳ್ಳಿಯ ಸಾಹುಕಾರರು ಮತ್ತು ದಲ್ಲಾಳಿಗಳನ್ನೇ ಅವಲಂಬಿಸಿದ್ದರೆಂದು ಹೇಳಬಹುದು. ಅಂದಿನ ದಿನಗಳಲ್ಲಿ ಲೇವಾದೇವಿ ವ್ಯವಹಾರಕ್ಕೆ ಯಾವುದೇ ಕಾನೂನಿನ ನಿರ್ಬಂಧಗಳು, ನಿಯಂತ್ರಣಗಳು ಇಲ್ಲದ್ದರಿಂದ, ಸಣ್ಣ ಬಂಡವಾಳಗಾರರು ಸಹ ಸಾಲದ ವ್ಯವಹಾರದಿಂದ ದುರ್ಲಾಭ ಪಡೆಯುತ್ತಿದ್ದರು. ಬೇಸಾಯಕ್ಕಾಗಿ ಅಗತ್ಯವಿದ್ದ ಸಾಲಕ್ಕಾಗಿ ಸಾಮಾನ್ಯವಾಗಿ ರೈತರು ಜಮೀನಿನಂತಹ ಸ್ಥಿರಾಸ್ತಿ ಮತ್ತು ಆಭರಣ ಮುಂತಾದವನ್ನು ಸಾಹುಕಾರರ ಬಳಿ ಒತ್ತೆಯಿಟ್ಟು ಸಾಲವನ್ನು ಪಡೆಯಬೇಕಾಗಿತ್ತು. ಪ್ರತಿಯೊಂದು ಹಳ್ಳಿಯಲ್ಲೂ ಸ್ಥಳೀಯರಿಗೆ ಪರಿಚಯವಿದ್ದ ಕೆಲವರಾದರೂ ಲೇವಾದೇವಿಗಾರರು ಇರುತ್ತಿದ್ದರು. ಸ್ಥಳೀಯರ ಸ್ವಭಾವ ಮತ್ತು ಅವರ ಸೊತ್ತಿನ ಬಗ್ಗೆ ಸ್ಪಷ್ಟ ಅರಿವು ಹೊಂದಿರುತ್ತಿದ್ದ ಈ ಲೇವಾದೇವಿಗಾರರು ನಿಗದಿತ ಬಡ್ಡೀದರದ ಮೇಲೆ ಸಾಲವನ್ನು ನೀಡುತ್ತಿದ್ದು, ಅಸಲು ಮತ್ತು ಬಡ್ಡಿಯ ವಸೂಲಿಗಾಗಿ ಸಾಲಗಾರರ ಮನೆ ಬಾಗಿಲಿಗೂ ಹೋಗುತ್ತಿದ್ದರು. ಸಾಲವನ್ನು ತೀರಿಸಲಾಗದವರು ತಮ್ಮ ಒತ್ತೆಯ ಸ್ವತ್ತನ್ನು ಕಳೆದುಕೊಳ್ಳಬೇಕಿತ್ತು. ಬಹುಪಾಲು ರೈತರು ಅನಕ್ಷರಸ್ಥರಾಗಿದ್ದ ಕಾರಣ ಲೇವಾದೇವಿಗಾರರ ವಂಚನೆಗೆ ಸುಲಭವಾಗಿ ಬಲಿಯಾಗುತ್ತಿದ್ದರು. ಹಣದ ತುರ್ತು ಅಗತ್ಯವಿದ್ದ ರೈತರಿಗೆ ಸಾಲ ನೀಡುವುದೇ ಲೇವಾದೇವಿಗಾರರ ವೃತ್ತಿಯಾಗಿತ್ತು. ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದ ಕೆಲ ಶ್ರೀಮಂತ ಲೇವಾದೇವಿಗಾರರೂ ಸಹ ಹಳ್ಳಿಯ ರೈತರಿಗೆ ಆಗಾಗ ಸಾಲವನ್ನು ನೀಡುತ್ತಿದ್ದು, ಸಾಲ ವಸೂಲಿಗೆ ಅವರು ಒತ್ತಾಯ, ಒತ್ತಡ ಮುಂತಾದ ವಿಧಾನಗಳನ್ನು ಅನುಸರಿಸುವ ಮೂಲಕ ರೈತರನ್ನು ಶೋಷಿಸುತ್ತಿದ್ದರು. ಸುಗ್ಗಿಯ ಕಾಲದಲ್ಲಿ ಅವರು ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ದೊಡ್ಡ ಪ್ರಮಾಣದಲ್ಲಿ ಖರೀದಿಸಿದ ದವಸಧಾನ್ಯಗಳನ್ನು ತಮ್ಮ ಉಗ್ರಾಣಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಮಾರುಕಟ್ಟೆಯಲ್ಲಿ ದವಸಧಾನ್ಯಗಳ ಕೊರತೆಯುಂಟಾಗಿ ಧಾರಣೆ ಹೆಚ್ಚಿದಾಗ ತಮ್ಮ ಸಂಗ್ರಹದಲ್ಲಿದ್ದ ಮಾಲನ್ನು ಹೆಚ್ಚಿನ ಬೆಲೆಗೆ ಮಾರಿ ಅಧಿಕ ಲಾಭ ಗಳಿಸುತ್ತಿದ್ದರು.

ವಿಜಯನಗರ ಸಾಮ್ರಾಜ್ಯದ ಪ್ರಾಂತ್ಯಾಧಿಕಾರಿಯ ಆಡಳಿತದ ಕಾಲದಲ್ಲಿ ಇತರೆಡೆಯಂತೆ ಕೋಲಾರ ಜಿಲ್ಲಾ ಪ್ರದೇಶದಲ್ಲೂ ಪಾಳುಭೂಮಿ ಬೇಸಾಯವನ್ನು ಪ್ರೋತ್ಸಾಹಿಸಲು ಸರ್ಕಾರ ರೈತರಿಗೆ ವ್ಯವಸಾಯೋಪಕರಣ, ಜಾನುವಾರು ಮುಂತಾದವನ್ನು ಕೊಳ್ಳಲು ಹಣಕಾಸಿನ ನೆರವನ್ನು ನೀಡುವ ವ್ಯವಸ್ಥೆ ಕೈಗೊಂಡಿತ್ತು. ಬೇಡಿಕೆಯಲ್ಲಿದ್ದ ವಾಣಿಜ್ಯ ಬೆಳೆಗಳ ವ್ಯವಸಾಯ ಮತ್ತು ವಾಣಿಜ್ಯ ವಸ್ತುಗಳ ಉತ್ಪಾದನಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಸಂಬಂಧ ಸರ್ಕಾರ ಬಿತ್ತನೆ ಬೀಜ, ಸಸಿ, ಆರಂಭ ವೆಚ್ಚ ಮುಂತಾದವನ್ನು ಒದಗಿಸುವ ವ್ಯವಸ್ಥೆ ಸಹ ಮಾಡಿತ್ತು. ಮುಂದೆ ಆಂತರಿಕ ಕಲಹ ಮತ್ತು ಯುದ್ಧದ ಕಾರಣದಿಂದಾಗಿ ಸರ್ಕಾರ ಅಂತಹ ಸವಲತ್ತುಗಳನ್ನು ನಿಲ್ಲಿಸಿದ್ದರಿಂದ ಆ ಪ್ರದೇಶಗಳಲ್ಲಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದವರು ಹೆಚ್ಚು ಶ್ರೀಮಂತರಾದರು. ಪರಸ್ಪರ ನಂಬಿಕೆ ಮತ್ತು ವಿಶ್ವಾಸದ ಮೇಲೆ ಲೇವಾದೇವಿಗಾರರು ಸಾಲಗಾರರಿಗೆ ಸಾಲ ನೀಡುತ್ತಿದ್ದುದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಲೇವಾದೇವಿ ಸಹ ಒಂದು ಪ್ರಮುಖ ವೃತ್ತಿಯಾಗಿತ್ತು. ಸಾಲದ ನಿರ್ವಹಣೆ ಒಪ್ಪಂದದಂತೆ ಒಂದು ನಿರ್ದಿಷ್ಟ ಅವಧಿಗೂ ಅಥವಾ ಕಂತಿನ ಲೆಕ್ಕದಲ್ಲಿ ನಡೆಯುತ್ತಿತ್ತು. ಚಕ್ರಬಡ್ಡಿ ವಿಧಿಸುವ ಪದ್ಧತಿ ಸಹ ಬಹಳವಾಗಿ ರೂಢಿಯಲ್ಲಿತ್ತು.

ಕೋಲಾರ ಚಿನ್ನದ ಗಣಿ ಪ್ರದೇಶದ ಉರಗಾಂವ್‌ನಲ್ಲಿ ೧೯೧೧ರಲ್ಲಿ ಮೈಸೂರು ಬ್ಯಾಂಕಿನ (ಇಂದಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ಶಾಖೆಯ ಸ್ಥಾಪನೆಯಿಂದಾಗಿ ಜಿಲ್ಲೆಯಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಗೆ ಚಾಲನೆ ದೊರೆತಂತಾಯಿತು. ಈ ಬ್ಯಾಂಕಿನ ಸ್ಥಾಪನೆಗೂ ಪೂರ್ವದಲ್ಲಿ ಈ ಪ್ರದೇಶದ ಉಳಿತಾಯದ ವಿಪುಲ ಹಣ ಫಲಪ್ರದ ಯೋಜನೆಗಳಲ್ಲಿ ಬಳಕೆಯಾಗುತ್ತಿರಲಿಲ್ಲ. ಅಂತೆಯೇ, ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಉದ್ದೇಶಕ್ಕಾಗಿ ಸರಳ ಬಡ್ಡಿಯ ಆರ್ಥಿಕ ಸಹಾಯಕ್ಕಾಗಿ ಹಾತೊರೆಯುತ್ತಿದ್ದ ರೈತರ ದೊಡ್ಡ ಸಮೂಹವೇ ಇತ್ತು. ಈ ಬಗ್ಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ ಕೆ. ಶೇಷಾದ್ರಿ ಐಯ್ಯರ್ ೧೮೯೪ರಲ್ಲಿ ಮೈಸೂರು ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡುವಾಗ "ಸಾಮಾನ್ಯ ರೈತ ಕೃಷಿ

ಉದ್ದೇಶಕ್ಕಾಗಿ ದುಬಾರಿ ಬಡ್ಡಿ ಸಾಲ ಪಡೆದು ಅನುಭವಿಸುತ್ತಿದ್ದ ಬವಣೆಯ"ಬಗ್ಗೆ ಆತಂಕವನ್ನೂ ವ್ಯಕ್ತಪಡಿಸಿದ್ದರು. ರೈತರ ಈ ಸಾಲ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ೧೯೨೪ರಲ್ಲೇ ವ್ಯವಸಾಯ ಬ್ಯಾಂಕುಗಳನ್ನೂ ಸ್ಥಾಪಿಸಲು ಪ್ರಾರಂಭಿಸಿತು. ಇವು ಸಹಕಾರ ತತ್ವದನ್ವಯ ಕಾರ್ಯಮಾಡುವ ಭೂಹಿಡುವಳಿದಾರರ ಸಂಸ್ಥೆಗಳಾಗಿದ್ದವು. ಲಾಭದ ಹಂಚಿಕೆ ಇವುಗಳ ಉದ್ದೇಶವಾಗಿರಲಿಲ್ಲ. ಸಾಗುವಳಿ ಕೈಗೊಳ್ಳಲು, ಭೂಮಿಯನ್ನು ಅಭಿವೃದ್ಧಿಪಡಿಸಲು, ಇಲ್ಲವೇ ಹಳೆಯ ಸಾಲ ತೀರಿಸಲು ಇವು ಸಾಲವನ್ನು ನೀಡುತ್ತಿದ್ದವು. ಮೈಸೂರು ಸಂಸ್ಥಾನದಲ್ಲಿ (ಕೋಲಾರ ಜಿಲ್ಲೆ ಸೇರಿದಂತೆ) ೧೯೨೮ರ ಸಮಯದಲ್ಲಿ ಇಂತಹ ೬೪ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದವು. ಕಡಿಮೆ ಬಡ್ಡಿದರ, ಸ್ಥಳೀಯ ಸಂಪನ್ಮೂಲಗಳನ್ನು ಆಕರ್ಷಿಸಲು ಪ್ರೋತ್ಸಾಹದ ಅಭಾವ ಇವೆಲ್ಲ ಕಾರಣಗಳಿಂದಾಗಿ ವ್ಯವಸಾಯ ಬ್ಯಾಂಕುಗಳು ಪ್ರಗತಿ ಸಾಧಿಸಲು ಅಸಮರ್ಥವಾದವು. ಕೋಲಾರ ಜಿಲ್ಲೆಯಲ್ಲಿ ೧೯೧೪ರಲ್ಲಿ ಇಂತಹ ನಾಲ್ಕು ಬ್ಯಾಂಕುಗಳು ಹೊಂಗೇನಹಳ್ಳಿ (ಮಾಲೂರು ತಾ.), ಮುದುವಟ್ಟಿ (ಕೋಲಾರ ತಾ.), ತಿಪ್ಪೇನಹಳ್ಳಿ (ಚಿಕ್ಕಬಳ್ಳಾಪುರ ತಾ.), ಸಬ್ಬೆನಹಳ್ಳಿ (ಗೌರಿಬಿದನೂರು ತಾ.) ಅಸ್ತಿತ್ವದಲ್ಲಿದ್ದರೂ, ಹೊಂಗೇನಹಳ್ಳಿಯ ಬ್ಯಾಂಕು ಮಾತ್ರ ಆವರೆಗೆ ಸರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಸರ್ಕಾರದಿಂದ ಪಡೆದ ಸಾಲವನ್ನು ವಾಪಸ್ಸು ಮಾಡಿತ್ತು. ಉಳಿದ ಮೂರು ಬ್ಯಾಂಕುಗಳು ಮೊದಲಿನಿಂದಲೂ ಸಮರ್ಥವಾಗಿ ಕೆಲಸ ನಿರ್ವಹಿಸುವಲ್ಲಿ ವಿಫಲವಾದ ಕಾರಣ, ಅವನ್ನು ವಿಸರ್ಜಿಸಲಾಯಿತು. ಏತನ್ಮಧ್ಯೆ ೧೯೦೫ರ ಸಹಕಾರಿ ಸಂಘಗಳ ನೋಂದಣಿ ಕಾಯ್ದೆಯನ್ವಯ ರಾಜ್ಯದಲ್ಲಿ ಆರಂಭವಾದ ಸಹಕಾರಿ ಆಂದೋಲನವು ಸಹಕಾರಿ ಬ್ಯಾಂಕುಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಈ ಸಹಕಾರಿ ಬ್ಯಾಂಕುಗಳು ವ್ಯವಸಾಯ ಬ್ಯಾಂಕುಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವ ಸಂಸ್ಥೆಗಳಾಗಿದ್ದವು. ಮೊದಲ ವಿಶ್ವ ಸಮರದ ತರುವಾಯ ಉಳಿತಾಯ ಮತ್ತು ಮಿತವ್ಯಯದ ಅರಿವು ಜನರಲ್ಲಿ ಮೂಡಿದ ಪರಿಣಾಮವಾಗಿ ಉಳಿತಾಯ ಠೇವಣಾತಿಗಳು ಕ್ರಮೇಣ ಏರತೊಡಗಿದವು. ವೈಯಕ್ತಿಕ ಅಥವಾ ರಾಜ್ಯದ ಉಳಿತಾಯದಲ್ಲಿ ಕಂಡ ಸ್ತಿಮಿತ ಬೆಳವಣಿಗೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ಅದರ ವಿನಿಯೋಗವೇ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪುಗೊಳ್ಳುವುದಕ್ಕೆ ದಾರಿಯಾಯಿತು. ಆ ವೇಳೆಗಾಗಲೇ ಕೋಲಾರ ಜಿಲ್ಲೆಯ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಮೈಸೂರು ಸರ್ಕಾರದ ಸೇವಿಂಗ್ಸ್ ಬ್ಯಾಂಕುಗಳಲ್ಲದೇ, ಅಂಚೆ ಉಳಿತಾಯ ಬ್ಯಾಂಕುಗಳು ಮತ್ತು ಕೆ.ಜಿ.ಎಫ್.ನ ಉರಗಾಂವ್‌ನಲ್ಲಿ ಸ್ಥಾಪಿತವಾದ ಮೈಸೂರು ಬ್ಯಾಂಕಿನ ಶಾಖೆ ಜಿಲ್ಲೆಯ ಜನರಿಗೆ ಉಳಿತಾಯ ಖಾತೆಯ ಸೌಲಭ್ಯವನ್ನು ಒದಗಿಸಿದ್ದವು. ಮೈಸೂರು ಬ್ಯಾಂಕು ೧೯೪೫ರ ವೇಳೆಗೆ ಬಂಗಾರಪೇಟೆ, ಚಿಂತಾಮಣಿ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಈ ಸ್ಥಳಗಳಲ್ಲೂ ಶಾಖೆಗಳನ್ನು ತೆರೆದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿತು. ಕೋಲಾರ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆಯಲ್ಲಿ ೧೯೧೩–೧೪ರವರೆಗೆ ಸಂಗ್ರಹವಾದ ರೂ.೩,೯೪,೬೦೦ಅನ್ನು ಗಮನಿಸಿದರೆ, ಜಿಲ್ಲೆಯಲ್ಲಿ ವ್ಯವಸ್ಥಿತ ಹಣಕಾಸು ಸಂಸ್ಥೆಗಳು ಸ್ಥಾಪನೆಯಾಗುವ ಪೂರ್ವದಲ್ಲೂ ಉಳಿತಾಯದ ಬಗ್ಗೆ ಜನರಲ್ಲಿ ಜಾಗೃತಿ ಇತ್ತೆಂಬುದು ತಿಳಿದುಬರುತ್ತದೆ. ಆನಂತರದ ವ್ಯವಸ್ಥಿತ ಹಣಕಾಸು ಸಂಸ್ಥೆಗಳ ಸೌಕರ್ಯಗಳ ಹೆಚ್ಚಳದಿಂದಾಗಿ, ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಿಗೂ ಅದರ ಪ್ರಯೋಜನ ಲಭಿಸುವಂತಾಯಿತು. ಬ್ಯಾಂಕುಗಳು ನೀಡುವ ಸಾಲ ವ್ಯವಸ್ಥೆಯಲ್ಲಿ ಉಂಟಾದ ವಿಸ್ತರಣೆ ಮತ್ತು ಕ್ರಮೇಣವಾಗಿ ಬ್ಯಾಂಕು ಶಾಖೆಗಳ ವಿಸ್ತರಣೆಯಂತಹ ಸೌಲಭ್ಯಗಳು ಹೆಚ್ಚುತ್ತಾ ಹೋದಂತೆಲ್ಲಾ ಪ್ರದೇಶದ ಆರ್ಥಿಕ ಪ್ರಗತಿಯೂ ಸುಧಾರಿಸುವಂತಾಯಿತು.

### ಲೇವಾದೇವಿ ವ್ಯವಸ್ಥೆ

ವ್ಯವಸಾಯದ ಉದ್ದೇಶಗಳಿಗೆ ಯಾವಾಗಲೂ ಸಾಲದ ಬೇಡಿಕೆ ಇದ್ದು, ಕೃಷಿ ನಿರ್ವಹಣೆಗಾಗಿ ಮತ್ತು ಆಗಾಗಿನ ಕೌಟುಂಬಿಕ ಅವಶ್ಯಕತೆಗಳಿಗೂ ರೈತರು ಬಹಳವಾಗಿ ಸ್ಥಳೀಯ ಸಾಹುಕಾರರಿಂದಲೇ ಸಾಲವನ್ನು

ಪಡೆಯುತ್ತಿದ್ದರು. ಖಾಸಗಿ ಲೇವಾದೇವಿಗಾರರ ದುಬಾರಿ ಬಡ್ಡಿಯ ಸಾಲವೇ ಆ ದಿನಗಳಲ್ಲಿ ಸಾಲದ ಮೂಲವಾಗಿದ್ದಿತು. ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿನ ಸಾಲಗಾರರು ಇಂತಹ ದುಬಾರಿ ಬಡ್ಡಿಯ ಸಾಲದ ಹೊರೆಯಿಂದಾಗಿ ನರಳುತ್ತಿದುದು ಸರ್ವೇಸಾಮಾನ್ಯವಾಗಿತ್ತು. ದುಬಾರಿ ಬಡ್ಡಿಯ ಸಾಲವನ್ನು ತೀರಿಸುವಲ್ಲಿ ಅಸಮರ್ಥರಾದ ಬಹುಸಂಖ್ಯಾತ ರೈತರು ತಮ್ಮ ಭೂಮಿಯ ಒಡೆತನವನ್ನು ಕಳೆದುಕೊಂಡು ಹಳ್ಳಿಯಲ್ಲೇ ರೈತ ಕಾರ್ಮಿಕರಾಗಿ ಇಲ್ಲವೇ ಪೇಟೆ ಪಟ್ಟಣಗಳಲ್ಲಿ ಕಾರ್ಮಿಕರಾಗಿ ದುಡಿಯಬೇಕಾಗುತ್ತಿತ್ತು. ಅನಿಶ್ಚಿತ ಮಳೆ ಮತ್ತು ನೀರಾವರಿ ಸೌಲಭ್ಯಗಳ ಕೊರತೆಯಿಂದಾಗಿ ಆಗುವ ಬೆಳೆಹಾನಿ, ಹಳೆಯ ಹಾಗೂ ಅವೈಜ್ಞಾನಿಕ ಸಾಗುವಳಿ ಪದ್ಧತಿ, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ಹೀಗೆ ಹಲವಾರು ಕಾರಣಗಳಿಂದಾಗಿ ರೈತರ ಮೇಲಿನ ಸಾಲದ ಹೊರೆ ಹೆಚ್ಚುತ್ತಲೇ ಇತ್ತು.

ಕೋಲಾರ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಖಾಸಗೀ ಲೇವಾದೇವಿಗಾರರಲ್ಲದೇ ಬಹುಮಂದಿ ಶ್ರೀಮಂತರೂ ಸಾಲ ನೀಡುವ ವೃತ್ತಿಯಲ್ಲಿ ತೊಡಗಿದ್ದರು. ಸಾಲ ನೀಡುವುದು ಒಂದು ಅತ್ಯಂತ ಲಾಭದಾಯಕ ಮತ್ತು ಗೌರವಯುತ ವೃತ್ತಿಯಾಗಿತ್ತು. ಈ ಸಾಲಗಾರರು ಸಾಲದ ಬೇಡಿಕೆ ಹೆಚ್ಚಾಗಿ ಇರುವ ಪ್ರದೇಶಗಳಲ್ಲೇ ಇರುತ್ತಿದ್ದು, ಹಳ್ಳಿಯ ಬಡ ಸಾಲಗಾರರ ಆರ್ಥಿಕ ದುಸ್ಥಿತಿಯ ಲಾಭವನ್ನು ಪಡೆಯುತ್ತಿದುದು ಸಾಮಾನ್ಯವಾಗಿತ್ತು. ಜಮೀನು, ಮನೆ ಮುಂತಾದ ಸ್ಥಿರಾಸ್ತಿಗಳ ಭದ್ರತೆಯನ್ನು ಪಡೆದೇ ಸಾಲವನ್ನು ಕೊಡುತ್ತಿದ್ದರು.

### ಲೇವಾದೇವಿ ನಿಯಂತ್ರಣ

ರೈತರಿಗೆ ಸಕಾಲದಲ್ಲಿ ಸುಲಭ ಬಡ್ಡೀದರದ ಸಾಲಸೌಲಭ್ಯ ಒದಗಿಸಿ, ಅವರ ಮೇಲಿನ ಸಾಲದ ಹೊರೆ ಇಳಿಸಲು ಹಿಂದಿನ ಮೈಸೂರು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿತ್ತು. ಅದರಂತೆ ವ್ಯವಸಾಯ ಸಾಲ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ದೊರೆಯುವಂತಾಯಿತು. ಇದರಿಂದಾಗಿ ರೈತರ ಶೋಷಣೆ ಸ್ವಲ್ಪ ಮಟ್ಟಿಗಾದರೂ ಕಡಿಮೆ ಆಯಿತೆನ್ನಬಹುದು (ಈ ಸಹಕಾರ ಸಂಘಗಳ ಬಗ್ಗೆ ಮುಂದೆ ವಿವರವಾಗಿ ತಿಳಿಸಲಾಗಿದೆ). ಋಣಗ್ರಸ್ತತೆಯ ದುಷ್ಪರಿಣಾಮವನ್ನು ತಡೆಯುವ ಮತ್ತು ರೈತರನ್ನು ಲೇವಾದೇವಿಗಾರರ ಹಿಡಿತದಿಂದ ರಕ್ಷಿಸುವ ಉದ್ದೇಶದಿಂದ ಸರ್ಕಾರ ೧೯೩೯ರಲ್ಲಿ ಮೈಸೂರು ಲೇವಾದೇವಿಗಾರರ ಕಾನೂನನ್ನು ಜಾರಿಗೊಳಿಸಿ ಎಲ್ಲಾ ವರ್ಗದ ಲೇವಾದೇವಿಗಾರರನ್ನು ಈ ಕಾನೂನಿನ ವ್ಯಾಪ್ತಿಗೆ ಒಳಪಡಿಸಿತು. ಈ ಕಾಯ್ದೆಯನ್ವಯ ಸರ್ಕಾರ ಲೇವಾದೇವಿ ವ್ಯವಹಾರದ ಮೇಲೆ ಹಲವಾರು ನಿರ್ಬಂಧಗಳನ್ನು ಹೇರಿತು. ಲೇವಾದೇವಿಗಾರರು ವಿಧಿಸುತ್ತಿದ್ದ ಬಡ್ಡಿ ದರವನ್ನು ನಿಯಂತ್ರಿಸಲಾಯಿತಲ್ಲದೇ, ಸಾಲ ವ್ಯವಹಾರದ ಲೆಕ್ಕಪತ್ರಗಳನ್ನು ಇಡುವುದು ಮತ್ತು ಅವನ್ನು ತಪಾಸಣೆಗೆ ಒಳಪಡಿಸುವುದನ್ನು ಕಡ್ಡಾಯ ಮಾಡಲಾಯಿತು. ಕಾಯ್ದೆಯ ಉಲ್ಲಂಘನೆಗೆ ದಂಡ ವಿಧಿಸಲಾಗುತ್ತಿತ್ತು. ೧೯೩೯ರ ಲೇವಾದೇವಿ ಕಾನೂನಿನ ಜಾರಿ ಮತ್ತು ರೈತರ ಸಾಲ ಪರಿಹಾರ ಕಾನೂನಿನ ಘೋಷಣೆ ಹಾಗೂ ಕೆಲವೆಡೆ ಋಣ ಒಡಂಬಡಿಕೆ ಬೋರ್ಡುಗಳ (ಡೆಟ್ ಕನ್ಸಿಲಿಯೇಷನ್ ಬೋರ್ಡ್ಸ್) ರಚನೆಯಂತಹ ಕ್ರಮಗಳಿಂದಾಗಿ ರೈತರ ಸಾಲದ ಸಮಸ್ಯೆಗೆ ಒಂದಿಷ್ಟು ಪರಿಹಾರ ದೊರೆಯುವಂತಾದರೂ, ಅದು ಲೇವಾದೇವಿಗಾರರ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದುಹಾಕುವಲ್ಲಿ ಫಲಕಾರಿಯಾಗಲಿಲ್ಲ. ಇದರಿಂದಾಗಿ ಲೇವಾದೇವಿ ವ್ಯವಹಾರದಲ್ಲಿ ಸಾಧಾರಣ ಅಡಮಾನ ಪದ್ಧತಿ ಕಡಿಮೆಯಾಗಿ ಸ್ವಾಧೀನತೆಯಿರುವ ಅಡಮಾನ ಮತ್ತು ಷರತ್ತಿನ ವಿಕ್ರಯ ಮುಂತಾದ ವಿಧಾನಗಳು ಹೆಚ್ಚುವಂತಾದವು. ಇಂತಹ ವ್ಯವಹಾರಗಳಲ್ಲಿ ಕರಾರಿನಲ್ಲಿ ತಿಳಿಸಿದ ಬಡ್ಡಿದರಕ್ಕಿಂತ ವಾಸ್ತವದಲ್ಲಿ ಹೆಚ್ಚಿನ ಬಡ್ಡಿಯನ್ನು ವಸೂಲಿ ಮಾಡಲಾಗುತ್ತಿದುದರಿಂದ, ಶಾಸನ ರಚಿತ ಕಾನೂನುಗಳಿಂದ ಅಂತಹ ವ್ಯವಹಾರಗಳನ್ನು ಸಂಪೂರ್ಣವಾಗಿ ತಡೆಯುವುದು ಸಾಧ್ಯವಾಗದಾಯಿತು. ಲೇವಾದೇವಿ ಕಾನೂನು ೧೯೩೯ರ ಅನ್ವಯ ಆಧಾರ ಸಾಲಕ್ಕೆ ಶೇ.೯ ಮತ್ತು ಆಧಾರ ರಹಿತ ಸಾಲಕ್ಕೆ ಶೇ.೧೨ರ ಬಡ್ಡಿ ನಿಗದಿ

ಪಡಿಸಿತ್ತಾದರೂ, ವಾಸ್ತವದಲ್ಲಿ ಪಡೆಯಲಾಗುತ್ತಿದ್ದ ಬಡ್ಡಿ ದರ ಯಾವಾಗಲೂ ಹೆಚ್ಚಿರುತ್ತಿತ್ತು. ಸ್ಥಿರ ಮತ್ತು ಚರಸ್ವತ್ತಿನ ಅಡಮಾನ ಸಾಲ, ಪ್ರೋನೋಟು ಸಾಲ ಮತ್ತು ಋಣ ಪತ್ರ (ಮನಿ ಬಾಂಡ್ಸ್) ಇವು ಸಾಲ ವ್ಯವಹಾರದ ಪ್ರಮುಖ ವಿಧಾನಗಳಾಗಿದ್ದು, ಲೇವಾದೇವಿ ಕಾನೂನಿನ ವ್ಯಾಪ್ತಿಗೆ ಒಳಪಟ್ಟಿದ್ದವು. ಫಸಲು (ಬೆಳೆ) ಆಧಾರ ಸಾಲ ಸಹ ಲೇವಾದೇವಿ ಎಂದೇ ಪರಿಗಣಿಸಲಾಗುತ್ತಿತ್ತು. ಮೇಲಿನ ಕಾನೂನಿನ್ವಯ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಮತ್ತು ವ್ಯವಹಾರವನ್ನು ನಡೆಸಲು ಪರವಾನಗಿಯನ್ನು ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿತ್ತು. ಅಗತ್ಯಾನುಸಾರ ೧೯೫೫ ಮತ್ತು ೧೯೫೬ರಲ್ಲಿ ಈ ಕಾನೂನಿಗೆ ತಿದ್ದುಪಡಿಗಳನ್ನು ತರಲಾಯಿತು.

ರಾಜ್ಯ ಪುನರ್‌ವಿಂಗಡಣೆಯ ನಂತರ ಸಮಗ್ರ ಕರ್ನಾಟಕಕ್ಕೆ ಅನ್ವಯವಾಗುವಂತೆ ಕರ್ನಾಟಕ ಲೇವಾದೇವಿ ಕಾಯ್ದೆ ೧೯೬೧ ಹಾಗೂ ನಿಯಮಗಳು ೧೯೬೬ ಮತ್ತು ಕರ್ನಾಟಕ ಗಿರವಿದಾರರ ಕಾಯ್ದೆ ೧೯೬೧ ಹಾಗೂ ನಿಯಮಗಳು ೧೯೬೬ ಇವುಗಳನ್ನು ರಾಜ್ಯಾದ್ಯಂತ ೧೯೬೬ರಿಂದ ಜಾರಿಗೆ ತರಲಾಯಿತು. ಈ ಕಾನೂನಿನ್ವಯ ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರ ಸಂಘಗಳ ನಿಬಂಧಕರನ್ನು ಪದನಿಮಿತ್ತ ಲೇವಾದೇವಿಗಾರರ ರಿಜಿಸ್ಟ್ರಾರ್ ಜನರಲ್ ಎಂದೂ ನೇಮಿಸಲಾಯಿತು. ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಪದನಿಮಿತ್ತ ಲೇವಾದೇವಿಗಾರರ ರಿಜಿಸ್ಟ್ರಾರ್ ಎಂದೂ ನೇಮಿಸಿ ಅವರಿಗೆ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರಸ್ತುತ ಮೇಲಿನ ಕಾನೂನಿನನ್ವಯ ಜಿಲ್ಲೆಯಲ್ಲಿ ಲೇವಾದೇವಿ ವ್ಯವಹಾರವನ್ನು ನಡೆಸಲು ಜಿಲ್ಲೆಯ ಲೇವಾದೇವಿಗಾರರ ರಿಜಿಸ್ಟ್ರಾರ್‌ರಿಂದ ಪರವಾನಿಗಿಯನ್ನು ಪಡೆಯಬೇಕಿದೆ. ಪರವಾನಿಗಿ ಇಲ್ಲದೇ ಲೇವಾದೇವಿ ವ್ಯವಹಾರವನ್ನು ಕೈಗೊಳ್ಳುವುದು ಕಾನೂನಿನ್ವಯ ಅಪರಾಧವಾಗಿದೆ. ಸರ್ಕಾರ ೧೯೬೫ರಲ್ಲಿ ಅಧಿಸೂಚನೆ ಹೊರಡಿಸಿ ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿದರವನ್ನು ಒತ್ತೆ ಸಾಲಕ್ಕೆ ಶೇ.೧೫ ಹಾಗೂ ಒತ್ತೆರಹಿತ ಸಾಲಕ್ಕೆ ಶೇ.೧೮ ಎಂದು ನಿಗದಿಪಡಿಸಿತ್ತು.

ಸಹಕಾರ ಇಲಾಖೆಯ ಆಡಳಿತವನ್ನು ೧೯೬೬ರಲ್ಲಿ ಪುನರ್‌ರಚಿಸಲಾಯಿತು. ಅದರಂತೆ ಜಿಲ್ಲೆಯ ಸಹಕಾರ ಸಂಘಗಳ ನಿಬಂಧಕರನ್ನು ಸಹಕಾರ ಸಂಘಗಳ ಉಪನಿಬಂಧಕರೆಂದು ಹಾಗೂ ಉಪವಿಭಾಗದ ಮುಖ್ಯಸ್ಥರನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರೆಂದು ಪುನರ್ ನಾಮಕರಣ ಮಾಡಲಾಯಿತು. ಅಂದಿನಿಂದ ಈ ಅಧಿಕಾರಿಗಳು ೧೯೬೧ರ ಕರ್ನಾಟಕ ಲೇವಾದೇವಿ ಕಾಯ್ದೆ ಮತ್ತು ಕರ್ನಾಟಕ ಗಿರಿವಿದಾರರ ಕಾಯ್ದೆಯನ್ನಲ್ಲದೇ, ೧೯೮೨ರಿಂದ ಚಿಟ್‌ಫಂಡ್ ಕಾಯ್ದೆ ೧೯೮೨ ಮತ್ತು ಚಿಟ್‌ಫಂಡ್ (ಕರ್ನಾಟಕ) ನಿಯಮಾವಳಿ ೧೯೮೨ನ್ನು ಸಹಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿಯ ದರವನ್ನು ೧೯೯೨ರಲ್ಲಿ ಪರಿಷ್ಕರಿಸಿ ಆಧಾರಿತ ಸಾಲದ ಮೇಲೆ ಶೇ.೨೧ ಮತ್ತು ಆಧಾರರಹಿತ ಸಾಲದ ಮೇಲೆ ಶೇ.೨೩ ಎಂದು ರಾಜ್ಯ ಸರ್ಕಾರ ನಿಗದಿಪಡಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಸತತ ಮೂರು ವರ್ಷ ರಾಜ್ಯ ಅನುಭವಿಸಿದ ತೀವ್ರ ಬರ ಪರಿಸ್ಥಿತಿಯನ್ನು ಪರಿಗಣಿಸಿ ಸರ್ಕಾರ ಸಾಲದ ಬಡ್ಡಿದರವನ್ನು ಪುನರ್‌ನಿಗದಿಗೊಳಿಸಿದೆ. ಅದರಂತೆ ಸರ್ಕಾರ ೨೦೦೩ರಲ್ಲಿ ಮತ್ತೆ ಅಧಿಸೂಚನೆ ಹೊರಡಿಸಿ, ಬಡ್ಡಿಯ ದರವನ್ನು ಆಧಾರ ಸಾಲಕ್ಕೆ ಶೇ.೧೪ ಮತ್ತು ಆಧಾರರಹಿತ ಸಾಲಕ್ಕೆ ಶೇ.೧೬ ಎಂದು ನಿಗದಿಪಡಿಸಿದೆ.

ಕೋಲಾರ ಜಿಲ್ಲೆಯಲ್ಲಿ ೧೯೮೫–೮೬ರಲ್ಲಿ ಪರವಾನಿಗಿ ಪಡೆದ ೭೫ ಲೇವಾದೇವಿಗಾರರು, ೩೪೨ ಗಿರವಿದಾರರು; ೧೯೯೦–೯೧ರಲ್ಲಿ ೬೫ ಲೇವಾದೇವಿಗಾರರು, ೩೫೬ ಗಿರವಿದಾರರು; ೧೯೯೫–೯೬ರಲ್ಲಿ ೭೦ ಲೇವಾದೇವಿಗಾರರು, ೩೦೧ ಗಿರವಿದಾರರು; ೨೦೦೧–೦೨ರಲ್ಲಿ ೮೦ ಲೇವಾದೇವಿಗಾರರು, ೩೦೬

ಗಿರವಿದಾರರು ಮತ್ತು ೨೦೦೨-೦೩ರಲ್ಲಿ ೧೧೨ ಲೇವಾದೇವಿಗಾರರು, ೩೧೯ ಗಿರವಿದಾರರು ಇದ್ದರು. ವರ್ಷ ೧೯೯೯-೨೦೦೦ ದಿಂದ ೨೦೦೩-೦೪ರವರೆಗೆ ಲೇವಾದೇವಿಗಾರರು ನೀಡಿದ ಸಾಲದ ಮೊತ್ತ ಕ್ರಮವಾಗಿ ೩೨ ಲಕ್ಷ ರೂ., ೭೫.೧೯ ಲಕ್ಷ ರೂ., ೯೯.೨೦ ಲಕ್ಷ ರೂ., ೬.೮೦ ಲಕ್ಷ ರೂ. ಮತ್ತು ೨೬.೦೭ಲಕ್ಷ ರೂ. ಆಗಿದ್ದಿತು. ಗಿರವಿದಾರರು ನೀಡಿದ ಸಾಲ ಆಯಾ ವರ್ಷಗಳಲ್ಲಿ ಕ್ರಮವಾಗಿ ೪೧.೮೦ ಲಕ್ಷ ರೂ., ೮೮.೩೫ ಲಕ್ಷ ರೂ., ೧೧೫.೭೨ ಲಕ್ಷ ರೂ., ೮.೮೫ ಲಕ್ಷ ರೂ. ಮತ್ತು ೨೭.೭೨ ಲಕ್ಷ ರೂ. ಆಗಿದ್ದಿತು. ಲೇವಾದೇವಿಗಾರರು ಮತ್ತು ಇತರರಿಂದ ಸರ್ಕಾರ ಸಂಗ್ರಹಿಸಿದ ಲೈಸನ್ಸ್ ಫೀ ಮತ್ತು ಭದ್ರತಾ ಠೇವಣಿ ಮೊತ್ತ ಕ್ರಮವಾಗಿ ೧೯೯೯-೨೦೦೦ ದಲ್ಲಿ ೨೧.೯೧ ಲಕ್ಷ ರೂ. ಮತ್ತು ೬೪.೮೦ ಲಕ್ಷ ರೂ; ೨೦೦೦-೦೧ರಲ್ಲಿ ೨೪.೧೩ ಲಕ್ಷ ರೂ. ಮತ್ತು ೬೫.೩೪ ಲಕ್ಷ ರೂ; ೨೦೦೧-೦೨ ರಲ್ಲಿ ೨೬.೧೬ ಲಕ್ಷ ರೂ ಮತ್ತು ೬೮.೮೮ ಲಕ್ಷ ರೂ; ೨೦೦೨-೦೩ರಲ್ಲಿ ೩.೧೩ ಲಕ್ಷ ರೂ. ಮತ್ತು ೭೫.೧೫ ಲಕ್ಷ ರೂ; ೨೦೦೩-೦೪ರಲ್ಲಿ ೫.೮೭ ಲಕ್ಷ ರೂ ಮತ್ತು ೭೯.೮೧ ಲಕ್ಷ ರೂ. ಆಗಿದ್ದಿತು. ಸರ್ಕಾರದ ಇತ್ತೀಚಿನ ಆದೇಶದಂತೆ ಲೇವಾದೇವಿಗಾರರು ಮತ್ತು ಗಿರವಿದಾರರು ಪ್ರತಿ ಐದು ವರ್ಷಕ್ಕೊಮ್ಮೆ ತಮ್ಮ ಪರವಾನಿಗಿಯನ್ನು ನವೀಕರಿಸಬೇಕಿದೆ.

ಖಾಸಗೀ ಲೇವಾದೇವಿಗಾರರು, ಶ್ರೀಮಂತ ಜಮೀನ್ದಾರರು, ಹಣವಂತರು ಮತ್ತು ವ್ಯಾಪಾರಿಗಳು ಸರ್ಕಾರದ ಪರವಾನಿಗಿ ಪಡೆಯದೇ ಒಂದು ಸೀಮಿತ ವಲಯದಲ್ಲಿ ಸಾಲ ವ್ಯವಹಾರವನ್ನು ರಹಸ್ಯವಾಗಿ ಮಾಡುವುದು ಸಹ ಸರ್ವೇಸಾಮಾನ್ಯವಾಗಿರುತ್ತದೆ. ಇಂತಹವರು ವಿಧಿಸುವ ಬಡ್ಡಿದರವು ತಿಂಗಳಿಗೆ ಶೇಕಡ ಎರಡರಿಂದ ಐದರವರೆಗೆ ಇರುತ್ತದೆ. ಈ ವ್ಯವಹಾರಗಳಿಗೆ ಪರಸ್ಪರ ವಿಶ್ವಾಸ ಮತ್ತು ನಂಬಿಕೆಯೇ ಆಧಾರವಾಗಿರುತ್ತದೆ. ಇವರಲ್ಲಿ ಕೆಲವರು ಹಲವು ಬಗೆಯ ಚೀಟಿ ನಡೆಸುವ ವ್ಯವಹಾರವನ್ನೂ ಮಾಡುತ್ತಾರೆ. ಈ ವ್ಯವಹಾರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮೋಸ, ವಂಚನೆ ಪ್ರಕರಣಗಳು ವರದಿಯಾಗಿರುವುದೂ ಉಂಟು.

**ಹಣಕಾಸು ಸಂಸ್ಥೆಗಳು**

ಅಸಂಘಟಿತ ಹಣದ ಮಾರುಕಟ್ಟೆಯಲ್ಲಿ ಖಾಸಗೀ ಸಾಲಿಗರು ಹಾಗೂ ಗಿರವಿದಾರರಲ್ಲದೆ, ಹಲವಾರು ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳು, ಚಿಟ್‌ಫಂಡ್‌ಗಳು ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ನಗರ ಪ್ರದೇಶ ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಇಂತಹ ಸಂಸ್ಥೆಗಳು ವಾಣಿಜ್ಯ ವ್ಯಾಪಾರ, ಉದ್ದಿಮೆ, ವಾಹನ ಖರೀದಿ ಮುಂತಾದವುಗಳಿಗೆ ಅಡಮಾನ ಸಾಲವನ್ನು ಒದಗಿಸುತ್ತವೆ. ಮಧ್ಯಮ ವರ್ಗದ ಜನರ ಉಳಿತಾಯವನ್ನು ಹಲವಾರು ಆಕರ್ಷಕ ಯೋಜನೆಗಳ ಮೂಲಕ, ಹೆಚ್ಚಿನ ಬಡ್ಡಿಯನ್ನು ನೀಡುವ ಮೂಲಕ ಹಾಗೂ ನಗದು ಬಹುಮಾನಗಳನ್ನು ಕೊಡುವ ಆಮಿಷಗಳ ಮೂಲಕ ಆಕರ್ಷಿಸಿ ಈ ಸಂಸ್ಥೆಗಳು ತಮ್ಮ ಠೇವಣಿ ಸಂಗ್ರಹವನ್ನು ಹೆಚ್ಚಿಸುತ್ತವೆ. ಇವುಗಳಿಂದ ಸಾಲದ ನೆರವನ್ನು ಪಡೆಯುವವರಲ್ಲಿ ಹೆಚ್ಚಿನವರು ಸಣ್ಣ ವ್ಯಾಪಾರಿಗಳು, ನೌಕರವರ್ಗದವರು ಹಾಗೂ ಮೋಟಾರು ಸಾರಿಗೆ ಉದ್ದಿಮೆಯಲ್ಲಿ ತೊಡಗಿರುವವರು. ಈ ಹಣಕಾಸಿನ ಸಂಸ್ಥೆಗಳು ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಬೆಳಸುವಲ್ಲಿ ಶಕ್ತವಾದರೂ, ಅವುಗಳ ಅನಿರ್ಬಂಧಿತ ಬೆಳವಣಿಗೆ ಹಲವೊಮ್ಮೆ ಅವುಗಳ ಪತನಕ್ಕೆ ಕಾರಣವಾಗುವುದು. ಈ ಸಂಸ್ಥೆಗಳು ಸಾಮಾನ್ಯವಾಗಿ ಭಾರತೀಯ ಪಾಲುದಾರಿಕೆ ಕಾನೂನು ೧೯೩೨ ಅಥವ ಕಂಪನಿ ಕಾಯ್ದೆ ೧೯೫೬ರನ್ವಯ ನೋಂದಾಯಿತ ಸಂಸ್ಥೆಗಳಾಗಿರುತ್ತವೆ. ಕರ್ನಾಟಕ ಲೇವಾದೇವಿ ಕಾನೂನು ೧೯೬೧ರ ಅನ್ವಯ ಸಹಕಾರ ಇಲಾಖೆ ಈ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿರುತ್ತದೆ. ಕೋಲಾರ ಜಿಲ್ಲೆಯಲ್ಲಿ ೧೯೮೫-೮೬ರಲ್ಲಿ ೩೦೨; ೧೯೯೦-೯೧ರಲ್ಲಿ ೩೧೫; ೧೯೯೫-೯೬ರಲ್ಲಿ ೩೪೦; ೨೦೦೧-೦೨ರಲ್ಲಿ ೧೮೩ ಮತ್ತು ೨೦೦೨-೦೩ರಲ್ಲಿ ೨೦೬ ಹಣಕಾಸು ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ಈ ಹಣಕಾಸು ಸಂಸ್ಥೆಗಳು ೧೯೯೯-೨೦೦೦ ದಿಂದ ೨೦೦೩-೦೪ರವರಗೆ ಸಂಗ್ರಹಿಸಿದ ಠೇವಣಿ ಮೊತ್ತ ಕ್ರಮವಾಗಿ ೪೭.೦೬ ಲಕ್ಷ ರೂ;

೨.೩೬ ಲಕ್ಷ ರೂ., ೨.೩೬ ಲಕ್ಷ ರೂ., ೨.೯೧ ಲಕ್ಷ ರೂ. ಮತ್ತು ೩.೧೧ ಲಕ್ಷ ರೂ.ಆಗಿದ್ದಿತು. ಈ ಸಂಸ್ಥೆಗಳು ನೀಡುವ ಬಹುಪಾಲು ಸಾಲ ಆಧಾರಸಹಿತವಾಗಿದ್ದು, ಕೃಷಿಯೇತರ ಉದ್ದೇಶಗಳಿಗೇ ಸಂಬಂಧಪಟ್ಟಿರುತ್ತವೆ. ವರ್ಷ ೧೯೯೯–೨೦೦೦ದಿಂದ ೨೦೦೩–೦೪ರವರೆಗೆ ಈ ಸಂಸ್ಥೆಗಳು ನೀಡಿದ ಆಯಾ ವರ್ಷಗಳಲ್ಲಿನ ಸಾಲ ಕ್ರಮವಾಗಿ ೩೦.೮೨ ಲಕ್ಷ ರೂ, ೬೪.೭೫ ಲಕ್ಷ ರೂ, ೧೦೦.೦೩ ಲಕ್ಷ ರೂ., ೧೧.೭೯ ಲಕ್ಷ ರೂ., ೩೬.೯೯ ಲಕ್ಷ ರೂ. ಆಗಿದ್ದಿತು. ಚಿಟ್‌ಫಂಡ್ ಕಾಯ್ದೆ ೧೯೮೨ರ ಅನ್ವಯ ಕೋಲಾರ ಜಿಲ್ಲೆಯಲ್ಲಿ ಚಿಟ್‌ಫಂಡ್ ವ್ಯವಹಾರ ನಡೆಸಲು ಪರವಾನಿಗಿ ಪತ್ರ ಪಡೆದ ಹಣಕಾಸು ಸಂಸ್ಥೆಗಳ ಸಂಖ್ಯೆ ೧೯೯೯–೨೦೦೦ ದಿಂದ ೨೦೦೩–೦೪ರವರೆಗೆ ಕ್ರಮವಾಗಿ ೫೦೮, ೫೫೧, ೫೭೦, ೫೯೦ ಮತ್ತು ೨೯೨ ಆಗಿದ್ದಿತು ಹಾಗೂ ಅವುಗಳ ಚಿಟ್‌ಫಂಡ್ ವ್ಯವಹಾರದ ಮೊತ್ತ ಕ್ರಮವಾಗಿ ೬೨.೨೧ ಲಕ್ಷ ರೂ.; ೭೬.೦೩ ಲಕ್ಷ ರೂ.; ೭೮.೦೧ ಲಕ್ಷ ರೂ.; ೭೯.೮೪ ಲಕ್ಷ ರೂ. ಮತ್ತು ೭೯.೩೧ ಲಕ್ಷ ರೂ. ಆಗಿದ್ದಿತು.

## ಜೀತಗಾರಿಕೆ – ಪದ್ಧತಿ (ನಿರ್ಮೂಲನ) ಕಾಯ್ದೆ

ಕೇಂದ್ರ ಸರ್ಕಾರವು ೧೯೭೬ರಲ್ಲಿ ಪ್ರಪ್ರಥಮವಾಗಿ ಜೀತಗಾರಿಕೆ ಪದ್ಧತಿ (ನಿರ್ಮೂಲನ) ಕಾಯ್ದೆಯನ್ನು ಜಾರಿಯಲ್ಲಿ ತಂದು, ಜೀತದಾಳುಗಳನ್ನು ಜೀತಪದ್ಧತಿಯಿಂದ ಮುಕ್ತಗೊಳಿಸಲು ಕ್ರಮ ಕೈಗೊಂಡಿತು. ಈ ಕಾಯ್ದೆಯನ್ವಯ ಜೀತ ಪದ್ಧತಿಯಿಂದ ಬಿಡುಗಡೆಯಾದವರು ತಾವು ಪಡೆದಿದ್ದ ಸಾಲದ ಹಣ ಮತ್ತು ಅದರ ಮೇಲಿನ ಬಡ್ಡಿಯನ್ನು ಪಾವತಿ ಮಾಡುವುದರಿಂದ ಸಂಪೂರ್ಣವಾಗಿ ವಿಮುಕ್ತಿ ಹೊಂದಿರುತ್ತಾರೆ. ಜೀತ ವಿಮುಕ್ತರ ಪುನರ್ವಸತಿ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಆರ್ಥಿಕ ನೆರವು ಯೋಜನೆಗಳನ್ನು ರೂಪಿಸಿವೆ. ಈ ಯೋಜನೆಯನ್ವಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇ. ೫೦:೫೦ರ ಅನುಪಾತದಲ್ಲಿ ೧೯೭೯–೮೦ರಿಂದ ಪುನರ್ವಸತಿ ವೆಚ್ಚವನ್ನು ಭರಿಸುತ್ತಿವೆ. ಜೀತದಾಳುಗಳನ್ನು ಗುರುತಿಸಿ, ಅವರಿಗೆ ಪುನರ್ವಸತಿ ಒದಗಿಸುವ ಕೆಲಸವನ್ನು ಕ್ಷೇತ್ರಮಟ್ಟದಲ್ಲಿ ಕಂದಾಯ ಇಲಾಖೆ ಹಾಗೂ ಪಂಚಾಯತ್‌ರಾಜ್ ಸಂಸ್ಥೆಗಳು ಸಂಯುಕ್ತವಾಗಿ ನಿರ್ವಹಿಸುತ್ತಿವೆ. ಈ ಫಲಾನುಭವಿಗಳಿಗೆ ಮನೆ, ಕೃಷಿ ಭೂಮಿ ಹಾಗೂ ಪರಿಕರಗಳಲ್ಲದೇ ಹಸು, ಎಮ್ಮೆ, ಹಂದಿ ಮುಂತಾದವುಗಳನ್ನೂ ಸರ್ಕಾರ ನೀಡುತ್ತಿದೆ.

ಜೀತಗಾರಿಕೆ ಪದ್ಧತಿ (ನಿರ್ಮೂಲನ) ಕಾಯ್ದೆಯು ಜಾರಿಗೆ ಬಂದಂದಿನಿಂದ ೨೦೦೪ರ ಮಾರ್ಚ್ ಅಂತ್ಯದವರೆಗೆ ಕೋಲಾರ ಜಿಲ್ಲೆಯಲ್ಲಿ ಒಟ್ಟು ೨,೯೩೮ ಜೀತದಾಳುಗಳನ್ನು ಗುರುತಿಸಿ, ಅವರನ್ನು ಜೀತ ಪದ್ಧತಿಯಿಂದ ಬಿಡುಗಡೆಗೊಳಿಸಲಾಗಿದೆ. ಆ ಪೈಕಿ ೨,೬೧೮ ಜೀತದಾಳುಗಳಿಗೆ ಒಟ್ಟು ೧,೧೦,೯೪,೫೦೦ ರೂ. ವೆಚ್ಚದಲ್ಲಿ ಪುನರ್ವಸತಿಯನ್ನು ಕಲ್ಪಿಸಲಾಗಿದೆ. ಉಳಿದ (೩೨೦) ಜೀತದಾಳುಗಳು ಜಿಲ್ಲೆಯಿಂದ ವಲಸೆ ಹೋದ ಕಾರಣ, ಅಂಥವರಿಗೆ ಪುನರ್ವಸತಿಯನ್ನು ಕಲ್ಪಿಸಲು ಸಾಧ್ಯವಾಗಿಲ್ಲ. ತಾಲೂಕುವಾರು ಜೀತವಿಮುಕ್ತರ ಸಂಖ್ಯೆ ಹಾಗೂ ಪುನರ್ವಸತಿ ಪಡೆದವರ ಸಂಖ್ಯೆ (ಕಂಸದಲ್ಲಿ) ಈ ಮುಂದಿನಂತಿದೆ. ಕೋಲಾರ ೫೨೩ (೪೫೯); ಮಾಲೂರು ೫೦೭ (೪೧೮); ಬಂಗಾರಪೇಟೆ ೧೬೮ (೧೪೮); ಶ್ರೀನಿವಾಸಪುರ ೨೧೩ (೧೫೫); ಮುಳಬಾಗಿಲು ೨೭೪ (೨೬೪); ಚಿಕ್ಕಬಳ್ಳಾಪುರ ೧೧೪ (೧೦೨); ಚಿಂತಾಮಣಿ ೯೮ (೯೫); ಶಿಡ್ಲಘಟ್ಟ ೭೪(೬೯); ಗುಡಿಬಂಡೆ ೧೪೦(೧೨೧); ಬಾಗೇಪಲ್ಲಿ ೪೮೫(೪೮೦); ಗೌರಿಬಿದನೂರು ೩೪೨ (೩೨೭).

## ವಾಣಿಜ್ಯ ಬ್ಯಾಂಕುಗಳು

ಆಧುನಿಕ ಜೀವನ ವ್ಯವಸ್ಥೆಯಲ್ಲಿ ಬ್ಯಾಂಕಿಂಗ್ ಸೇವೆಯನ್ನು ಸಹ ಒಂದು ಜನಪ್ರಿಯ ವ್ಯವಹಾರವೆಂದು ಪರಿಗಣಿಸಲಾಗಿದೆ. ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಜೀವನದಲ್ಲಿ ಬ್ಯಾಂಕುಗಳ ಪಾತ್ರ ಬಹಳ ಮಹತ್ವದ್ದು, ಜನತೆಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಉತ್ತಮಗೊಂಡಂತೆಲ್ಲ ಬ್ಯಾಂಕುಗಳ

ಅವಶ್ಯಕತೆಯೂ ಹೆಚ್ಚುತ್ತದೆ. ಬ್ಯಾಂಕುಗಳು ಜನಸಮುದಾಯದ ಉಳಿತಾಯವನ್ನು ಸಂಗ್ರಹಿಸಿ ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ವ್ಯವಸಾಯ ಕ್ಷೇತ್ರಗಳಿಗೂ ಹಾಗೂ ಸರ್ಕಾರದ ನಾನಾ ಉತ್ಪಾದನಾ ಯೋಜನೆಗಳ ಉದ್ದೇಶಗಳಿಗೂ ಹಣವನ್ನು ಒದಗಿಸುತ್ತವೆ.

**ಕೋಲಾರ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಉದ್ಯಮದ ಪ್ರಗತಿ**

ಕೋಲಾರ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಉದ್ಯಮದ ಪ್ರಾರಂಭ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಆಯಿತು. ಜಿಲ್ಲೆಯ ಮೊಟ್ಟಮೊದಲ ಕೂಡು ಬಂಡವಾಳ ಬ್ಯಾಂಕಿಂಗ್ ಕಂಪನಿ ದ ಕೋಲಾರ ಬ್ಯಾಂಕ್ (ಲಿ) ೧೮೬೯ರ ಸೆಪ್ಟೆಂಬರ್ ೧೬ರಲ್ಲಿ ನೋಂದಣಿಯಾಯಿತು. ನಂತರ ದ ಶ್ರೀನಿವಾಸಪುರ ಸೇವಿಂಗ್ಸ್ ಬ್ಯಾಂಕ್ (ಲಿ) ೧೮೭೧ರ ಅಕ್ಟೋಬರ್ ೧೨ರಲ್ಲಿ; ದ ಕೋಲಾರ ಮ್ಯೂಚ್ಯುಯಲ್ ಬೆನಿಫಿಟ್ ಫಂಡ್ (ಲಿ) ೧೮೭೧ರ ಡಿಸೆಂಬರ್ ೨೦ರಲ್ಲಿ ಹಾಗೂ ದ ಶ್ರೀನಿವಾಸಪುರ ಮುನ್ಸಿಫ್ ಬ್ಯಾಂಕ್ (ಲಿ) ೧೮೭೨ರ ಫೆಬ್ರವರಿ ೧೯ರಲ್ಲಿ ನೋಂದಣಿ ಪಡೆದವು. ಆಯಾ ಸ್ಥಳಗಳಲ್ಲೇ ಖಾಸಗೀ ಮಾಲಿಕತ್ವದಲ್ಲಿ ಸ್ಥಾಪನೆಯಾದ ಈ ನಾಲ್ಕು ಬ್ಯಾಂಕುಗಳು ತಲಾ ೨೦,೦೦೦ ರೂ. ಬಂಡವಾಳವನ್ನು (ಮೂಲಧನ) ಹೊಂದಿದ್ದವು. ವೈಯಕ್ತಿಕ ಹಾಗೂ ಇತರ ಭದ್ರತೆಯ ಮೇರೆಗೆ ವಾರ್ಷಿಕ ಶೇ.೯ರಿಂದ ೨೪ರ ಬಡ್ಡಿಯ ಮೇಲೆ ಈ ಬ್ಯಾಂಕುಗಳು ಸಾಲವನ್ನು ನೀಡುತ್ತಿದ್ದವು. ಈ ಬಡ್ಡಿದರ ದುಬಾರಿ ಎನಿಸಿದ್ದರೂ, ಅದು ಖಾಸಗೀ ಸಾಹುಕಾರರು ವಿಧಿಸುತ್ತಿದ್ದ ಅತಿ ದುಬಾರಿ ಬಡ್ಡಿದರಕ್ಕಿಂತ ಬಹುಪಾಲು ಕಡಿಮೆ ಎಂದೇ ಹೇಳಬಹುದು. ಈ ಎಲ್ಲ ಬ್ಯಾಂಕುಗಳೂ ಕೆಲವೇ ವರ್ಷ ವ್ಯವಹಾರ ನಡೆಸಿ, ನಂತರ ಒಂದೊಂದಾಗಿ ವಿಸರ್ಜನೆಗೊಂಡಂತೆ ಕಂಡುಬರುತ್ತದೆ. ನಂತರದ ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಸ್ಥಾಪಿತವಾದ ಹಲವಾರು ಬ್ಯಾಂಕಿಂಗ್ ಸಂಸ್ಥೆಗಳ ವಿವರವನ್ನು ಕೋಷ್ಟಕ ೬.೧ರಲ್ಲಿ ತೋರಿಸಲಾಗಿದೆ.

ಆ ಬ್ಯಾಂಕುಗಳ ಪೈಕಿ ಚಿಕ್ಕಬಳ್ಳಾಪುರ ಅದಾಲತ್ ಬ್ಯಾಂಕ್ ಲಿ., ಚಿಕ್ಕಬಳ್ಳಾಪುರ ಶುಭಾದಿಕರ್ಮ ಸಹಾಯ ಧನಾಭಿವರ್ಧಿನಿ ಬ್ಯಾಂಕ್ ಲಿ., ಚಿಕ್ಕಬಳ್ಳಾಪುರ ರಾಜಧಾನಿ ಬ್ಯಾಂಕ್ ಲಿ., ಗುಡಿಬಂಡೆ ಉಪ್ಪಾರಹಳ್ಳಿ ಶ್ರೀ ಹನುಮಂತರಾಯ ಸ್ವಾಮಿ ಬ್ಯಾಂಕ್ ಲಿ., ಶಿಡ್ಲಘಟ್ಟ ಸೂರ್ಯನಾರಾಯಣ ಸ್ವಾಮಿ ಬ್ಯಾಂಕ್ ಲಿ., ಇವುಗಳು ೧೯೧೩ರಲ್ಲೂ; ಚಿಕ್ಕಬಳ್ಳಾಪುರ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ಯಾಂಕ್ ಲಿ., ಶಿಡ್ಲಘಟ್ಟ ರಾಜಧಾನಿ ಬ್ಯಾಂಕ್ ಲಿ., ಶಿಡ್ಲಘಟ್ಟ ಲಕ್ಷ್ಮೀ ಸಹಾಯ ಬ್ಯಾಂಕ್ ಲಿ., ಶಿಡ್ಲಘಟ್ಟ ವೆಂಕಟರಮಣಸ್ವಾಮಿ ಬ್ಯಾಂಕು ಲಿ., ಗೌರಿಬಿದನೂರು ಶ್ರೀ ವೆಂಕಟರಮಣಸ್ವಾಮಿ ಬ್ಯಾಂಕ್ ಲಿ, ಕೋಲಾರ್ ಬ್ಯಾಂಕಿಂಗ್ ಅಂಡ್ ಟ್ರೇಡಿಂಗ್ ಕಂಪನಿ ಲಿ., ಇವು ೧೯೨೪ರಲ್ಲೂ; ಚಿಕ್ಕಬಳ್ಳಾಪುರ ಕಸಬ ದ್ರವ್ಯಾಭಿವರ್ಧಿನಿ ಬ್ಯಾಂಕ್ ಲಿ., ಗೌರಿಬಿದನೂರ್ ತಾಲೂಕ್
ವ ೆ ೧ ೦ ಚ ೆ ೀ ನ ೆ ಹ ೆ ಳಿ ೂ
ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ಬ್ಯಾಂಕ್ ಲಿ., ಶಿಡ್ಲಘಟ್ಟ ಸಾಹುಕಾರ್ ಬ್ಯಾಂಕ್ ಲಿ, ಶಿಡ್ಲಘಟ್ಟ ಆಂಜನೇಯ ಸ್ವಾಮಿ ಬ್ಯಾಂಕ್ ಲಿ. ಇವು ೧೯೪೮ರಲ್ಲೂ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ದಾಖಲಿತ ವರದಿಗಳಿವೆ.

ಕೋಲಾರ ಜಿಲ್ಲೆಯಲ್ಲಿ ೨೦ನೇ ಶತಮಾನದ ಆರಂಭದ ದಶಕಗಳಿಂದಲೇ ಠೇವುಗಳ ರೂಪದಲ್ಲಿ ಹಣ ಸಂಗ್ರಹಿಸಿ ಬಂಡವಾಳವನ್ನು ಬೆಳೆಸುವಲ್ಲಿ ಬ್ಯಾಂಕಿಂಗ್ ಉದ್ಯಮ ಒಂದು ಪ್ರಮುಖ ಚಟುವಟಿಕೆಯಾಗಿ ಬೆಳೆದುಬಂದಿತು. ಜಿಲ್ಲೆಯಲ್ಲಿ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಮುಂತಾದ ಆರ್ಥಿಕ

ಚಟುವಟಿಕೆಗಳು ಹೆಚ್ಚುತ್ತಾ ಹೋದಂತೆ, ಜಿಲ್ಲೆಯ ಹೊರಗೆ ಸ್ಥಾಪಿತವಾದ ಪ್ರಮುಖ ವಾಣಿಜ್ಯ ಬ್ಯಾಂಕುಗಳೂ ತಮ್ಮ ಶಾಖೆಗಳನ್ನು ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ತೆರೆಯಲು ಪ್ರಾರಂಭಿಸಿದವು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಬೃಹತ್ ಬ್ಯಾಂಕಿಂಗ್ ಉದ್ಯಮಕ್ಕೆ ಚಾಲನೆ ನೀಡಿದ ಮೈಸೂರು ಬ್ಯಾಂಕ್, ನಿಯಮಿತ (ಇಂದಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ೧೯೧೩ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಕೋಲಾರ ಜಿಲ್ಲೆಯವರೇ (ಮುದ್ದೇನಹಳ್ಳಿ) ಆದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಇದರ ಸಂಸ್ಥಾಪಕರು. ಅಂದಿನ ಸರ್ಕಾರದ ಪ್ರೋತ್ಸಾಹದಿಂದಲೇ ಸ್ಥಾಪಿತವಾದ ಈ ಬ್ಯಾಂಕು ಕೋಲಾರ ಜಿಲ್ಲೆಯ ತನ್ನ ಮೊದಲ ಶಾಖೆಯನ್ನು ೧೯೧೮ರಲ್ಲಿ ಕೋಲಾರ ಚಿನ್ನದ ಗಣಿ ಪ್ರದೇಶ ಉರಗಾಂವ್‌ನಲ್ಲಿ ಸ್ಥಾಪಿಸಿತು. ಮುಂದೆ ಈ ಬ್ಯಾಂಕು ೧೯೨೭ರಲ್ಲಿ ಕೋಲಾರದಲ್ಲಿ ಮತ್ತು ಚಿಕ್ಕಬಳ್ಳಾಪುರದಲ್ಲಿ ಒಂದೊಂದು ಶಾಖೆಯನ್ನು, ೧೯೨೮ರಲ್ಲಿ ಚಿಂತಾಮಣಿ ಶಾಖೆ, ೧೯೪೫ರಲ್ಲಿ ಬಂಗಾರಪೇಟೆ ಶಾಖೆ, ೧೯೬೩ರಲ್ಲಿ ಮಾಲೂರು ಶಾಖೆ, ೧೯೬೪ರಲ್ಲಿ ಗೌರಿಬಿದನೂರು ಶಾಖೆ, ೧೯೬೫ರಲ್ಲಿ ಮುಳಬಾಗಿಲು ಶಾಖೆ, ೧೯೬೭ರಲ್ಲಿ ಶ್ರೀನಿವಾಸಪುರ ಶಾಖೆ, ೧೯೬೭ರಲ್ಲಿ ಶಿಡ್ಲಘಟ್ಟ ಶಾಖೆ ಹೀಗೆ ೧೯೬೯ರ ಜುಲೈ ವೇಳೆಗೆ ಒಟ್ಟು ಹತ್ತು ಶಾಖೆಗಳನ್ನು ಸ್ಥಾಪಿಸಿತು. ಈ ಎಲ್ಲ ಬ್ಯಾಂಕು ಶಾಖೆಗಳು ಆಯಾ ಪ್ರದೇಶದ ವ್ಯಾಪ್ತಿಯಲ್ಲಿನ ಜನರಿಂದ ಉಳಿತಾಯ ಠೇವುಗಳನ್ನು ಆಕರ್ಷಿಸುವುದರೊಂದಿಗೆ ಅಲ್ಲಿನ ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಸಾಧಾರಣ ಹಣಕಾಸಿನ ಸಾಲವನ್ನು ನೀಡುತ್ತಿದ್ದವು. ಕಡೆಯ ಮೂರು ಶಾಖೆಗಳನ್ನು

**ಕೋಷ್ಟಕ ೬.೧: ಕೋಲಾರ ಜಿಲ್ಲೆಯಲ್ಲಿ ಸ್ಥಾಪನೆಯಾದ ಖಾಸಗಿ ಬ್ಯಾಂಕುಗಳ ವಿವರ**

| | ಬ್ಯಾಂಕಿನ ಹೆಸರು | ನೋಂದಣಿ ದಿನಾಂಕ/ವರ್ಷ | ಸ್ಥಳ | ಉದ್ದೇಶ |
|---|---|---|---|---|
| ೧ | ದ ಕೋಲಾರ್ ಬ್ಯಾಂಕ್ ಲಿಮಿಟೆಡ್ | ೧೬-೦೯-೧೮೬೯ | ಕೋಲಾರ | – |
| ೨ | ದ ಶ್ರೀನಿವಾಸಪುರ ಸೇವಿಂಗ್ಸ್ ಬ್ಯಾಂಕ್ ಲಿಮಿಟೆಡ್ | ೧೨-೧೦-೧೮೭೧ | ಶ್ರೀನಿವಾಸಪುರ | – |
| ೩ | ದ ಕೋಲಾರ್ ಮ್ಯೂಚ್ಯುಯಲ್ ಬೆನಿಫಿಟ್ ಫಂಡ್ ಲಿಮಿಟೆಡ್ | ೨೦-೧೨-೧೮೭೧ | ಕೋಲಾರ | – |
| ೪ | ದ ಶ್ರೀನಿವಾಸಪುರ್ ಮುನ್ಸಿಫ್ಸ್ ಬ್ಯಾಂಕ್ ಲಿಮಿಟೆಡ್ | ೧೯-೦೨-೧೮೭೨ | ಶ್ರೀನಿವಾಸಪುರ | – |
| ೫ | ದ ಕೋಲಾರ್ ವಿಕ್ಟೋರಿಯಾ ಬ್ಯಾಂಕ್ ಲಿಮಿಟೆಡ್ | ೧೮೭೨ | ಕೋಲಾರ | ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ |
| ೬ | ದ ಕೋಲಾರ್ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್ | ೧೮೭೨ | ಕೋಲಾರ | ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ |
| ೭ | ದ ಬೌರಿಂಗ್‌ಪೇಟ್ ಬ್ಯಾಂಕ್ ಲಿಮಿಟೆಡ್ | ೧೮೭೩ | ಬೌರಿಂಗ್‌ಪೇಟೆ | ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ |
| ೮ | ದ ದೊಡ್ಡಪೇಟೆ ಸಾಹುಕಾರ್ಸ್ ಬ್ಯಾಂಕ್ ಲಿಮಿಟೆಡ್ | ೧೮೭೩ | ಕೋಲಾರ | ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ |

**೯ ದ ಅಮ್ಮನವರಪೇಟೆ ಮಹಾರಾಜಾಸ್ ಬ್ಯಾಂಕ್ ಲಿಮಿಟೆಡ್** ೧೮೭೩ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೦ ದ ಚಾಮರಾಜ ಒಡೆಯರ್ ಬಹಾದೂರ್ ಬ್ಯಾಂಕ್ ಲಿಮಿಟೆಡ್** ೧೮೭೩ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೧ ದ ಬನಾರಸ್ ಬ್ಯಾಂಕ್ ಲಿಮಿಟೆಡ್** ೧೮೭೩ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೨ ಸರ್ ಮಾರ್ಕ್ ಕಬ್ಬನ್ಸ್ ಬ್ಯಾಂಕ್ ಲಿಮಿಟೆಡ್** ೧೮೭೩ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೩ ದ ಮಾಲೂರ್ ಬ್ಯಾಂಕ್ ಲಿಮಿಟೆಡ್** ೧೮೭೩ ಮಾಲೂರು
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೪ ದ ಚಿಕ್ಕಬಳ್ಳಾಪುರ್ ಅದಾಲತ್ ಬ್ಯಾಂಕ್ ಲಿಮಿಟೆಡ್** ೧೦-೦೨-೧೮೭೪ ಚಿಕ್ಕಬಳ್ಳಾಪುರ
ಬ್ಯಾಂಕಿಂಗ್
**೧೫ ದ ಬೌರಿಂಗ್‌ಪೇಟ್ ಧನಾಭಿವೃದ್ಧಿ ಬ್ಯಾಂಕ್ ಲಿಮಿಟೆಡ್** ೧೮೭೪
ಬೌರಿಂಗ್‌ಪೇಟ್ ಬ್ಯಾಂಕಿಂಗ್ ಮತ್ತು ವ್ಯಾಪಾರ
ನಿರ್ವಹಣೆ
**೧೬ ದ ಕರ್ನಾಟಿಕ್ ಬ್ಯಾಂಕ್ ಲಿಮಿಟೆಡ್** ೧೮೭೪ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೭ ಶ್ರೀ ಗಣೇಶ್ ಬ್ಯಾಂಕ್ ಲಿಮಿಟೆಡ್** ೧೮೭೪ ಮಾಲೂರು
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೮ ದ ಕರ್ನಾಟಿಕ್ ಕಳಾನಿಧಿ ಬ್ಯಾಂಕ್ ಲಿಮಿಟೆಡ್** ೧೮೭೪ ಶಿಡ್ಲಘಟ್ಟ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೧೯ ದ ಟೌನ್ ಬ್ಯಾಂಕ್ ಲಿಮಿಟೆಡ್** ೧೮೭೪ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೦ ದ ರಾಜಧಾನಿ ಬ್ಯಾಂಕ್ ಲಿಮಿಟೆಡ್** ೧೮೭೪ ಮಾಲೂರು
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೧ ದ ಲಕ್ಷ್ಮೀವೆಂಕಟರಮಣಸ್ವಾಮಿ ಬ್ಯಾಂಕ್ ಲಿಮಿಟೆಡ್** ೧೮೭೪ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೨ ದ ಚಿಕ್ಕಬಳ್ಳಾಪುರ್ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ**
**ಬ್ಯಾಂಕ್ ಲಿಮಿಟೆಡ್** ೦೨-೦೩-೧೮೭೫ ಚಿಕ್ಕಬಳ್ಳಾಪುರ
ಬ್ಯಾಂಕಿಂಗ್
**೨೩ ದ ಚಿಕ್ಕಬಳ್ಳಾಪುರ್ ಕಸಬ ದ್ರವ್ಯಾಭಿವರ್ಧಿನಿ ಬ್ಯಾಂಕ್ ಲಿಮಿಟೆಡ್** ೦೪-೦೫-೧೮೭೫ ಚಿಕ್ಕಬಳ್ಳಾಪುರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೪ ದ ಚಿಕ್ಕಬಳ್ಳಾಪುರ್ ಶುಭಾಧಿಕರ್ಮ ಸಹಾಯ** ೦೧-೦೫-೧೮೭೫ ಚಿಕ್ಕಬಳ್ಳಾಪುರ
ಬ್ಯಾಂಕಿಂಗ್ ಮತ್ತು
**ಧನಾಭಿವರ್ಧಿನಿ ಬ್ಯಾಂಕ್ ಲಿಮಿಟೆಡ್**
ವ್ಯಾಪಾರ ನಿರ್ವಹಣೆ
**೨೫ ದ ಬೇತಮಂಗಲ ಬ್ಯಾಂಕ್ ಲಿಮಿಟೆಡ್** ೧೮೭೫ ಬೇತಮಂಗಲ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೬ ದ ನಾಮದೇವ ಬ್ಯಾಂಕ್ ಲಿಮಿಟೆಡ್** ೧೮೭೫ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೭ ದ ಕಲ್ಯಾಣಪುರಿ ಬ್ಯಾಂಕ್ ಲಿಮಿಟೆಡ್** ೧೮೭೫ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ

**೨೮ ದ ಕೋದಂಡರಾಮಸ್ವಾಮಿ ಬ್ಯಾಂಕ್ ಲಿಮಿಟೆಡ್** ೧೮೭೫ ಚಿಕ್ಕಬಳ್ಳಾಪುರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೨೯ ದ ಹಿಂದೂ ಬ್ಯಾಂಕ್ ಲಿಮಿಟೆಡ್** ೧೮೭೫ ಶ್ರೀನಿವಾಸಪುರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೩೦ ಶ್ರೀ ರಾಮೇಶ್ವರಸ್ವಾಮಿ ಬ್ಯಾಂಕ್ ಲಿಮಿಟೆಡ್** ೧೮೭೫ ಗುಡಿಬಂಡೆ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೩೧ ಶ್ರೀಕಂಠೇಶ್ವರಸ್ವಾಮಿ ಬ್ಯಾಂಕ್ ಲಿಮಿಟೆಡ್** ೧೮೭೬ ಶಿಡ್ಲಘಟ್ಟ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೩೨ ದ ಶಿಡ್ಲಘಟ್ಟ ರಾಜಧಾನಿ ಬ್ಯಾಂಕ್ ಲಿಮಿಟೆಡ್** ೧೩-೧೧-೧೮೮೬ ಶಿಡ್ಲಘಟ್ಟ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೩೩ ದ ಚಿಕ್ಕಬಳ್ಳಾಪುರ್ ರಾಜಧಾನಿ ಬ್ಯಾಂಕ್ ಲಿಮಿಟೆಡ್** ೧೭-೧೧-೧೮೮೮ ಚಿಕ್ಕಬಳ್ಳಾಪುರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೩೪ ದ ಗೌರಿಬಿದನೂರ್ ತಾಲೂಕ್ ಮಂಚೇನಹಳ್ಳಿ**
**ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ಬ್ಯಾಂಕ್ ಲಿಮಿಟೆಡ್** ೧೦-೧೨-೧೮೮೮ ಮಂಚೇನಹಳ್ಳಿ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೩೫ ದ ಶಿಡ್ಲಘಟ್ಟ ಸಾಹುಕಾರ್ ಬ್ಯಾಂಕ್ ಲಿಮಿಟೆಡ್** ೦೮-೦೨-೧೮೯೮ ಶಿಡ್ಲಘಟ್ಟ
ಬ್ಯಾಂಕಿಂಗ್
**೩೬ ದ ಚಿಕ್ಕಬಳ್ಳಾಪುರ ಕಂದಾವರ್‌ಪೇಟ್ ಶ್ರೀ ವೆಂಕಟರಮಣಸ್ವಾಮಿ ಬ್ಯಾಂಕ್ ಲಿ.** ೦೩-೦೬-
೧೯೯೦ ಚಿಕ್ಕಬಳ್ಳಾಪುರ ಬ್ಯಾಂಕಿಂಗ್
ಮತ್ತು ವ್ಯಾಪಾರ ನಿರ್ವಹಣೆ
**೩೭ ದ ಗುಡಿಬಂಡ ಉಪ್ಪಾರಹಳ್ಳಿ ಶ್ರೀ ಹನುಮಂತರಾಯಸ್ವಾಮಿ ಬ್ಯಾಂಕ್ ಲಿ.** ೦೮-೦೭-
೧೯೯೦ ಗುಡಿಬಂಡೆ ಬ್ಯಾಂಕಿಂಗ್
**೩೮ ದ ಶಿಡ್ಲಘಟ್ಟ ಲಕ್ಷ್ಮೀ ಸಹಾಯ ಬ್ಯಾಂಕ್ ಲಿಮಿಟೆಡ್** ೧೬-೦೯-೧೯೯೦ ಶಿಡ್ಲಘಟ್ಟ
ಬ್ಯಾಂಕಿಂಗ್
**೩೯ ದ ಶಿಡ್ಲಘಟ್ಟ ವೆಂಕಟರಮಣಸ್ವಾಮಿ ಬ್ಯಾಂಕ್ ಲಿಮಿಟೆಡ್** ೨೫-೦೪-೧೯೯೨ ಶಿಡ್ಲಘಟ್ಟ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೪೦ ದ ಗೌರಿಬಿದನೂರ್ ಶ್ರೀ ವೆಂಕಟರಮಣಸ್ವಾಮಿ ಬ್ಯಾಂಕ್ ಲಿಮಿಟೆಡ್** ೨೭-೦೮-೧೯೯೫
ಗೌರಿಬಿದನೂರು ಬ್ಯಾಂಕಿಂಗ್ ಮತ್ತು ವ್ಯಾಪಾರ
ನಿರ್ವಹಣೆ
**೪೧ ದ ಶಿಡ್ಲಘಟ್ಟ ಆಂಜನೇಯಸ್ವಾಮಿ ಬ್ಯಾಂಕ್ ಲಿಮಿಟೆಡ್** ೧೧-೦೪-೧೯೦೪ ಶಿಡ್ಲಘಟ್ಟ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೪೨ ದ ಶಿಡ್ಲಘಟ್ಟ ಸೂರ್ಯನಾರಾಯಣಸ್ವಾಮಿ ಬ್ಯಾಂಕ್ ಲಿಮಿಟೆಡ್** ೨೪-೦೩-೧೯೦೬ ಶಿಡ್ಲಘಟ್ಟ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೪೩ ದ ಕೋಲಾರ್ ಬ್ಯಾಂಕಿಂಗ್ ಅಂಡ್ ಟ್ರೇಡಿಂಗ್ ಕಂಪನಿ ಲಿಮಿಟೆಡ್** ೦೮-೦೨-೧೯೨೧ ಕೋಲಾರ
ಬ್ಯಾಂಕಿಂಗ್ ಮತ್ತು ವ್ಯಾಪಾರ ನಿರ್ವಹಣೆ
**೪೪ ದ ಸಿಟಿಜನ್ ಬ್ಯಾಂಕ್ ಲಿಮಿಟೆಡ್** ೧೦-೦೪-೧೯೩೭
ರಾಬರ್ಟ್‌ಸನ್‌ಪೇಟೆ ಬ್ಯಾಂಕಿಂಗ್ (೧೯೬೩ರಲ್ಲಿ
ಸಿಂಡಿಕೇಟ್

ಬ್ಯಾಂಕಿನಲ್ಲಿ ವಿಲೀನ)

---

**ಆಧಾರ:** (1) Mysore Administrative Report, 1871-72; (2) Statistical Abstract of Mysore, 1915; (3) Supplement to the Statistical Abstract of Mysore State, 1926; (4) Statistical Abstract of Mysore

from 1923-24 to 1947-1948, Commissioner of Economic Development and Planning in Mysore, 1951.

ಹೊರತುಪಡಿಸಿ ಉಳಿದ ಏಳು ಶಾಖೆಗಳ ಒಟ್ಟು ಠೇವುಗಳು ಮತ್ತು ಮುಂಗಡಗಳು ೧೯೬೬ರ ಜೂನ್ ಅಂತ್ಯಕ್ಕೆ ಕ್ರಮವಾಗಿ ೧೨೭.೭೬ ಲಕ್ಷ ಮತ್ತು ೧೮.೩೧ ಲಕ್ಷ ರೂ. ಆಗಿದ್ದಿತು. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನೀಡಲಾಗುವ ಬ್ಯಾಂಕಿನ ಉದಾರ ಸಾಲ ನೀತಿಯಡಿಯಲ್ಲಿ ಜಿಲ್ಲೆಯಲ್ಲಿನ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ೧.೭೯ ಲಕ್ಷ ರೂ. ಸಾಲವನ್ನು ನೀಡಿದ್ದವು. ಈ ಎಲ್ಲ ಶಾಖೆಗಳು ಸರ್ಕಾರದ ಪರವಾಗಿ ಖಜಾನೆ ವ್ಯವಹಾರವನ್ನು ಸಹ ನಡೆಸುತ್ತಿದ್ದವು.

ಬೆಂಗಳೂರಿನಲ್ಲಿ ಪ್ರಧಾನ ಕಚೇರಿ (೧೯೩೦) ಹೊಂದಿರುವ ರಾಜ್ಯದ ಖಾಸಗೀ ಕ್ಷೇತ್ರದಲ್ಲಿನ ಪ್ರತಿಷ್ಠಿತ ವಾಣಿಜ್ಯ ಬ್ಯಾಂಕುಗಳಲ್ಲಿ ಒಂದಾದ ವೈಶ್ಯಬ್ಯಾಂಕು ೧೯೪೫ರಲ್ಲಿ ಚಿಂತಾಮಣಿ ಮತ್ತು ಬಂಗಾರಪೇಟೆಗಳಲ್ಲಿ ಒಂದೊಂದು ಶಾಖೆಯನ್ನು, ೧೯೪೬ರಲ್ಲಿ ಚಿಕ್ಕಬಳ್ಳಾಪುರ ಮತ್ತು ಮುಳಬಾಗಿಲು ಶಾಖೆಗಳನ್ನು ಮತ್ತು ೧೯೬೩ರಲ್ಲಿ ಗೌರಿಬಿದನೂರು ಶಾಖೆಯನ್ನೊಳಗೊಂಡಂತೆ ೧೯೬೯ರ ಜುಲೈ ವೇಳೆಗೆ ಒಟ್ಟು ಐದು ಶಾಖೆಗಳನ್ನು ಕೋಲಾರ ಜಿಲ್ಲೆಯಲ್ಲಿ ಸ್ಥಾಪಿಸಿತು. ಈ ಬ್ಯಾಂಕ್ ಶಾಖೆಗಳು ಜಿಲ್ಲೆಯಲ್ಲಿ ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರ ಮಾಡುವುದರೊಂದಿಗೆ ವ್ಯಾಪಾರ, ವಾಣಿಜ್ಯಕ್ಕೆ ಹಣಕಾಸಿನ ಸಾಲವನ್ನೂ ಒದಗಿಸಿದ್ದವು. ಗ್ರಾಹಕರಿಗೆ ಉಳಿತಾಯ ಠೇವಣಿ ಮತ್ತು ಸಂಚಿತ ಠೇವಣಿ ಯೋಜನೆಯನ್ನೂ ರೂಪಿಸಿದ್ದವು. ಐದು ಶಾಖೆಗಳ ಒಟ್ಟು ಠೇವುಗಳು ಮತ್ತು ಮುಂಗಡಗಳು ೧೯೬೬ರ ನವೆಂಬರ್‌ಗೆ ಕ್ರಮವಾಗಿ ೪೭.೦೯ ಮತ್ತು ೨೦.೬೧ ಲಕ್ಷ ರೂ. ಆಗಿದ್ದಿತು. ದೇಶದ ಬೃಹತ್ ವಾಣಿಜ್ಯ ಬ್ಯಾಂಕುಗಳಲ್ಲಿ ಒಂದಾದ ಉಡುಪಿ ಮೂಲದ ಸಿಂಡಿಕೇಟ್ ಬ್ಯಾಂಕ್ (ಹಿಂದಿನ ಕೆನರ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ–೧೯೨೫) ೧೯೬೩ರಲ್ಲಿ ಕೋಲಾರ ಜಿಲ್ಲೆಯ ರಾಬರ್ಟ್‌ಸನ್ ಪೇಟೆಯಲ್ಲಿನ ಸಿಟಿಜ಼ನ್ ಬ್ಯಾಂಕ್‌ನ್ನು ತನ್ನಲ್ಲಿ ವಿಲೀನಗೊಳಿಸುವುದರೊಂದಿಗೆ ಜಿಲ್ಲೆಯ ತನ್ನ ಮೊದಲ ಶಾಖೆಯನ್ನು ಸ್ಥಾಪಿಸಿತು. ಮಂಗಳೂರು ಮೂಲದ (೧೯೩೧) ದೇಶದ ಮತ್ತೊಂದು ದೊಡ್ಡ ಬ್ಯಾಂಕಾದ ವಿಜಯಾ ಬ್ಯಾಂಕ್ ಕೋಲಾರ ಪಟ್ಟಣದಲ್ಲಿ ಜುಲೈ ೧೯೬೩ರಲ್ಲಿ ಶಾಖಾ ಕಚೇರಿಯನ್ನು ತೆರೆಯುವ ಮೂಲಕ ಮೊದಲ ಬಾರಿಗೆ ಕೋಲಾರ ಜಿಲ್ಲೆಗೆ ಪ್ರವೇಶಿಸಿತು. ದೇಶದ ಮತ್ತೊಂದು ಬೃಹತ್ ವಾಣಿಜ್ಯ ಬ್ಯಾಂಕಾದ ಮಂಗಳೂರು ಮೂಲದ ಕೆನರ ಬ್ಯಾಂಕು (೧೯೦೬) ಕೋಲಾರ ಪಟ್ಟಣದಲ್ಲಿ ೧೯೬೮ರಲ್ಲಿ ಜಿಲ್ಲೆಯ ತನ್ನ ಮೊದಲ ಶಾಖೆಯನ್ನು ಸ್ಥಾಪಿಸಿತು. ಒಟ್ಟಿನಲ್ಲಿ ೧೯೬೯ರ ಜೂನ್ ಅಂತ್ಯಕ್ಕೆ ಕೋಲಾರ ಜಿಲ್ಲೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಹತ್ತು ಶಾಖೆಗಳು, ವೈಶ್ಯ ಬ್ಯಾಂಕಿನ ಐದು ಶಾಖೆಗಳು, ವಿಜಯ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರ ಬ್ಯಾಂಕ್‌ಗಳ ತಲಾ ಒಂದೊಂದು ಶಾಖೆ ಹೀಗೆ ಒಟ್ಟು ೧೮ ಬ್ಯಾಂಕ್ ಶಾಖೆಗಳು ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುತ್ತಿದ್ದವು.

ದೇಶದ ೧೪ ದೊಡ್ಡ ವಾಣಿಜ್ಯ ಬ್ಯಾಂಕುಗಳನ್ನು ೧೯೬೯ರ ಜುಲೈ ೧೯ರಂದು ಪ್ರಥಮ ಬಾರಿಗೆ ರಾಷ್ಟ್ರೀಕರಣಗೊಳಿಸುವುದರೊಂದಿಗೆ ಬ್ಯಾಂಕಿಂಗ್ ಇತಿಹಾಸದಲ್ಲಿ ಹೊಸ ಅಧ್ಯಾಯವೇ ಪ್ರಾರಂಭವಾಯಿತು. ಖಾಸಗೀ ವಲಯದ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನು ಸರ್ಕಾರಿ ಒಡೆತನಕ್ಕೆ ತರುವಲ್ಲಿ ಅದು ಪ್ರಥಮ ದಿಟ್ಟ ಕ್ರಮವಾಗಿತ್ತು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗುವಂತೆ ಮತ್ತು ಅದುವರೆಗೆ ಅಲಕ್ಷ್ಯಕ್ಕೆ ಒಳಗಾಗಿದ್ದ ಸಮಾಜದ ದುರ್ಬಲ ವರ್ಗಗಳಿಗೆ ಆರ್ಥಿಕ, ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ಸಹಕಾರಿಯಾಗುವಂತೆ ಈ ಹಣಕಾಸು ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಸರ್ಕಾರ ಸಮರ್ಥವಾಯಿತು. ಅದುವರೆಗೆ ಬ್ಯಾಂಕಿಂಗ್ ಸೇವೆಗಳಿಂದ ವಂಚಿತರಾಗಿದ್ದ ಜನಸಮುದಾಯದ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಸುಲಭ ಸಾಲ ಸೌಲಭ್ಯಗಳನ್ನು ನೀಡಲಾಯಿತು. ಅಭಿವೃದ್ಧಿಯ

ಮುಖ್ಯವಾಹಿನಿಯಲ್ಲಿ ಅಸಂಘಟಿತ ವಲಯವೂ ಸೇರುವಂತಾಯಿತು. ಅದುವರೆಗೆ ಕೆಲವು ನಿರ್ಧಿಷ್ಟ ವರ್ಗಕ್ಕೆ (ಕ್ಲಾಸ್) ಸೀಮಿತವಾಗಿದ್ದ ಬ್ಯಾಂಕಿಂಗ್ ಸೇವೆಗಳು ವ್ಯಾಪಕ (ಮಾಸ್) ವರ್ಗಕ್ಕೆ ಲಭ್ಯವಾಗುವಂತೆ ಸರ್ಕಾರವು ತನ್ನ ಧೋರಣೆಗಳನ್ನು, ನೀತಿ ನಿರೂಪಣೆಗಳನ್ನು ರೂಪಿಸಿಕೊಂಡಿತು. ಗ್ರಾಮೀಣ ಪ್ರದೇಶಗಳಲ್ಲಿ ಕೆಳಹಂತಗಳಲ್ಲಿ ಆರ್ಥಿಕ, ಸಾಮಾಜಿಕ ಬದಲಾವಣೆಗಳನ್ನು ತರಲು ಸಹಾಯಕವಾಗುವಂತೆ ಸುಲಭ ಸಾಲದ ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಯಲ್ಲಿ ತಂದಿರುವುದಲ್ಲದೇ ರಾಷ್ಟ್ರೀಕೃತ ಬ್ಯಾಂಕುಗಳು ಈ ಗುರಿಯನ್ನು ಸಾಧಿಸಲು ಸಾಲಸೌಲಭ್ಯಗಳನ್ನು ಒದಗಿಸುವುದನ್ನು ಕಡ್ಡಾಯ ಮಾಡಲಾಯಿತು. ಕೆಲವು ಸಂದರ್ಭಗಳಲ್ಲಿ ಇಂತಹ ಅತೀ ಉದಾರ ಸಾಲ ನೀತಿಯ ದುರುಪಯೋಗವೂ ಆದ ಉದಾಹರಣೆಗಳು ಉಂಟು.

ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಳವಡಿಸಲಾದ ತೀವ್ರತರ ಬದಲಾವಣೆಗಳು, ಹೊಸ ಆಯಾಮಗಳು, ಬದ್ಧತೆಗಳು, ಸಾಲ ಮುಂಗಡಗಳಲ್ಲಿನ ಸಾಮಾಜಿಕ ಕಳಕಳಿ ಅಂದರೆ ಮಾರ್ಗದರ್ಶಿ ಬ್ಯಾಂಕ್ ಯೋಜನೆ (೧೯೬೯), ಆದ್ಯತಾ ವಲಯ ಸಾಲ, ವ್ಯತ್ಯಸ್ಥ ಬಡ್ಡಿ ಸಾಲ, ಗ್ರಾಮೀಣ ಬ್ಯಾಂಕುಗಳ ಸ್ಥಾಪನೆ (೧೯೭೬), ಸಾಮಾಜಿಕ ಬ್ಯಾಂಕಿಂಗ್, ಅಂತ್ಯೋದಯ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮುಂತಾದವುಗಳು ಮತ್ತು ೧೯೮೦ರಲ್ಲಿ ಜಾರಿಗೆ ತರಲಾದ ಎರಡನೆಯ ಬ್ಯಾಂಕ್ ರಾಷ್ಟ್ರೀಕರಣ, ಇವುಗಳು ಬ್ಯಾಂಕಿಂಗ್ ಸೇವೆಯು ಮತ್ತಷ್ಟು ವಿಸ್ತೃತಗೊಳ್ಳಲು ಸಹಾಯಕವಾಯಿತು. ರಾಷ್ಟ್ರೀಕರಣ ನಂತರದ ದಶಕದಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖಾ ವಿಸ್ತರಣೆ ತೀವ್ರಗತಿಯಲ್ಲಿ ಹೆಚ್ಚಿತು. ಠೇವುಗಳ ಹೆಚ್ಚಳವೂ ಗಮನಾರ್ಹವಾಗಿತ್ತು. ಅದೇ ರೀತಿ ಮುಂಗಡವೂ ಹೆಚ್ಚಿತು. ಜಿಲ್ಲೆಯ ಈ ವಿವರಗಳನ್ನು ಮುಂದಿನ ಕೋಷ್ಟಕದಿಂದ ತಿಳಿಯಬಹುದಾಗಿದೆ.

**ಕೋಷ್ಟಕ ೬.೨**

| ವಿವರ | ವರ್ಷ | | | | | | |
|---|---|---|---|---|---|---|---|
| | ೧೯೬೯ | ೧೯೭೨ | ೧೯೭೩ | ೧೯೭೪ | ೧೯೭೫ | ೧೯೭೮ | ೧೯೭೯-೮೦ |
| **ಬ್ಯಾಂಕ್ ಶಾಖೆಗಳು** (ಸಂಖ್ಯೆ) | ೨೦ | ೪೬ | ೪೯ | ೫೦ | ೫೨ | ೫೨ | ೭೭ |
| **ಠೇವುಗಳು** (ಕೋಟಿ ರೂ.) | ೩.೦೦ | ೭.೮೨ | ೮.೫೦ | ೧೦.೦೨ | ೧೨.೦೫ | ೨೩.೫೫ | ೩೩.೯೮ |
| **ಮುಂಗಡಗಳು** (ಕೋಟಿ ರೂ.) | ೧.೦೦ | ೩.೪೨ | ೫.೧೪ | ೬.೨೨ | ೭.೪೩ | ೧೪.೫೨ | ೧೮.೦೪ |

ಬ್ಯಾಂಕ್ ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಬೇಡಿಕೆ ಹೆಚ್ಚುತ್ತಿರುವ ಬ್ಯಾಂಕಿಂಗ್ ಸೇವೆಗಳನ್ನು ಪೂರೈಸಲು ರಾಷ್ಟ್ರೀಕೃತ ಮತ್ತು ಖಾಸಗೀ ಬ್ಯಾಂಕುಗಳು ಹೊಸದಾಗಿ ಶಾಖೆಗಳನ್ನು ಪ್ರಾರಂಭಿಸುವ ಮೂಲಕ ಹಾಗೂ ಇದ್ದ ಶಾಖೆಗಳ ವ್ಯವಹಾರವನ್ನು ಅಭಿವೃದ್ಧಿಪಡಿಸುವ ಮೂಲಕ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ವಿಶೇಷವಾಗಿ ವಿಸ್ತರಿಸಿವೆ. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಜಿಲ್ಲೆಗೆ ಪಾದಾರ್ಪಣ ಮಾಡಿದ ಬ್ಯಾಂಕುಗಳಲ್ಲಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಾದ ದೇನಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾರ್ಪೋರೇಶನ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಖಾಸಗೀ ಕ್ಷೇತ್ರದ ಬ್ಯಾಂಕುಗಳಾದ ಕರ್ನಾಟಕ ಬ್ಯಾಂಕ್ ಮತ್ತು ಕರೂರ್ ವೈಶ್ಯ ಬ್ಯಾಂಕ್ ಸೇರಿವೆ. ಜಿಲ್ಲೆಯಲ್ಲಿ ೧೯೮೩ರಲ್ಲಿ ಕೋಲಾರ ಗ್ರಾಮೀಣ ಬ್ಯಾಂಕನ್ನು ಪ್ರಾರಂಭಿಸಿದ ನಂತರ ಮುಂದಿನ ಒಂದು ದಶಕದ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಬ್ಯಾಂಕಿಂಗ್ ಸೇವೆಗಳು ಹೆಚ್ಚಳಗೊಂಡವು. ಇದರಿಂದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ

**ಕೋಷ್ಟಕ ೬.೬: ೨೦೦೪ರ ಮಾರ್ಚ್ ಅಂತ್ಯದಲ್ಲಿದ್ದಂತೆ ಕೋಲಾರ ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಸಾಧಿಸಿದ ಪ್ರಗತಿ** (ಮೊತ್ತ ಲಕ್ಷ ರೂ.ಗಳಲ್ಲಿ)

| ಜಿಲ್ಲೆಯ ಬ್ಯಾಂಕುಗಳು | ಬ್ಯಾಂಕುಗಳ ಶಾಖೆಗಳು (ಸಂಖ್ಯೆ) | ಠೇವುಗಳು (ರೂ.) | ಮುಂಗಡಗಳು (ರೂ.) | ಸಾಲ–ಠೇವಣಿಗಳ ನಿಷ್ಪತ್ತಿ (ಶೇಕಡ) | ಆದ್ಯತಾ ವಲಯ ಸಾಲಗಳು (ರೂ.) | ಒಟ್ಟು ಸಾಲಗಳಲ್ಲಿ ಆದ್ಯತಾ ವಲಯ ಸಾಲಗಳ ಪ್ರಮಾಣ (ಶೇಕಡ) | ವ್ಯತ್ಯಸ್ತ ಬಡ್ಡಿ (ಡಿ.ಐ.ಆರ್.) ಸಾಲಗಳು (ರೂ.) | ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ನೀಡಲಾದ ಸಾಲಗಳು (ರೂ.) | ದುರ್ಬಲ ವರ್ಗಕ್ಕೆ ಸಾಲ (ರೂ.) | ನೇರ ಕೃಷಿ ಸಾಲ (ರೂ.) | ಸಣ್ಣ ಕೈಗಾರಿಕೆ ಸಾಲ (ರೂ.) | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಸಾಲ (ರೂ.) |
|---|---|---|---|---|---|---|---|---|---|---|---|---|
| ಕರ್ನಾಟಕ ಬ್ಯಾಂಕ್ | ೩ | ೪೪೦೪.೨೫ | ೧೦೮೫.೩೫ | ೨೪.೬೪ | ೫೬೯.೧೩ | ೫೨.೪೪ | ೦.೧೬ | ೨.೭೬ | ೧೩೬.೭೨ | ೧೨೫.೭೧ | ೨೮.೩೪ | ೨೨.೩೪ |
| ಕರೂರ್ ವೈಶ್ಯ ಬ್ಯಾಂಕ್ | ೧ | ೧೭೦೪.೭೩ | ೩೦೫೦.೪೭ | ೧೭೮.೯೪ | ೨೯೪೮.೫೯ | ೯೬.೬೬ | – | – | ೪.೮೯ | ೩.೧೫ | – | ೧.೭೪ |
| ಕಾರ್ಪೋರೇಶನ್ ಬ್ಯಾಂಕ್ | ೫ | ೪೫೭೧.೫೨ | ೨೮೧೮.೧೬ | ೬೧.೬೫ | ೧೮೯೮.೨೩ | ೬೭.೩೬ | ೧೦೮.೩೪ | ೧೪.೭೬ | ೫೨೯.೭೫ | ೮೪೫.೨೯ | ೬೯.೦೩ | ೧೪೮.೭೦ |
| ಕೆನರಾ ಬ್ಯಾಂಕ್ | ೩೮ | ೨೫೦೯೩.೮೦ | ೧೯೪೫೫.೫೦ | ೭೭.೫೩ | ೧೫೮೩೫.೯೪ | ೮೧.೪೦ | ೧೦.೧೭ | ೧೨೪.೪೦ | ೪೦೭೬.೯೮ | ೮೪೫೭.೬೬ | ೧೫೮೭.೪೯ | ೧೪೪೦.೪೪ |
| ದೇನಾ ಬ್ಯಾಂಕ್ | ೧ | ೧೩೬.೨೮ | ೧೦೬.೯೨ | ೭೮.೪೬ | ೭೯.೩೨ | ೭೪.೧೯ | ೦.೧೪ | ೨.೬೬ | ೧೧.೦೧ | ೬೩.೬೮ | ೧.೩೮ | ೯.೬೧ |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | ೨ | ೨೦೯.೭೪ | ೩೮೨.೪೭ | ೧೮೨.೩೫ | ೩೪೩.೭೬ | ೮೯.೮೮ | ೦.೩೨ | ೬.೭೫ | ೯೫.೫೦ | ೧೯೩.೪೧ | ೧.೯೧ | ೮೯.೦೯ |
| ಬ್ಯಾಂಕ್ ಆಫ್ ಇಂಡಿಯಾ | ೨ | ೨೯೪.೦೮ | ೬೧೯.೩೫ | ೨೧೦.೬೧ | ೪೦೮.೭೧ | ೬೫.೯೯ | ೦.೩೫ | ೫೪.೧೨ | ೯೪.೭೦ | ೨೧೪.೪೮ | ೮೬.೪೬ | ೪೬.೬೮ |
| ಬ್ಯಾಂಕ್ ಆಫ್ ಬರೋಡ | ೩ | ೬೨೦.೩೮ | ೫೭೦.೨೬ | ೯೧.೯೨ | ೪೦೬.೪೬ | ೭೧.೨೮ | – | ೨.೦೨ | ೨೨೬.೬೨ | ೨೬೧.೮೭ | ೧೨.೬೪ | ೫೯.೪೯ |
| ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | ೧ | ೪೨೮.೧೮ | ೨೭೦.೬೩ | ೬೩.೨೦ | ೨೩೪.೯೦ | ೮೬.೮೦ | – | – | ೪೮.೩೬ | ೧೬೯.೮೧ | ೨.೩೮ | ೭.೩೮ |
| ವಿಜಯಾ ಬ್ಯಾಂಕ್ | ೧೪ | ೪೯೬೮.೧೮ | ೩೮೧೧.೩೬ | ೭೬.೭೨ | ೨೪೦೫.೬೨ | ೬೩.೧೨ | ೦.೯೮ | ೭೨.೦೧ | ೧೨೩೦.೨೨ | ೧೨೮೭.೫೧ | ೧೦೯.೮೪ | ೩೦೩.೯೭ |
| ವೈಶ್ಯ ಬ್ಯಾಂಕ್ | ೮ | ೧೧೭೯೯.೩೬ | ೪೦೩೨.೭೯ | ೩೪.೧೮ | ೨೭೫೪.೪೦ | ೬೮.೩೦ | ೦.೭೧ | ೭.೫೯ | ೩೬೧೧.೯೫ | ೧೮೯೬.೮೫ | ೧೦೦.೨೪ | ೧೭೧.೫೯ |
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೮ | ೩೬೭೫.೦೬ | ೩೬೧೬.೨೧ | ೯೮.೪೦ | ೨೭೭೪.೨೦ | ೭೬.೭೨ | – | ೯.೨೬ | ೧೫೮.೫೫ | ೧೫೫೩.೮೬ | ೩೨೪.೧೬ | ೮೫.೨೬ |
| ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ | ೨೯ | ೨೬೦೪೭.೦೦ | ೧೧೨೩೮.೦೦ | ೪೩.೧೫ | ೬೩೭೦.೦೦ | ೫೬.೬೮ | ೮೭.೦೦ | – | ೫೩೯೬.೦೦ | ೩೨೭೦.೦೦ | ೭೪೧.೦೦ | ೯೨.೦೦ |
| ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | ೨ | ೨೫೮.೦೦ | ೫೭೪.೦೦ | ೨೨೨.೪೮ | ೪೧೧.೮೨ | ೭೧.೭೫ | – | ೬.೦೦ | ೬೮.೫೦ | ೪೧೦.೦೦ | ೧೩.೦೦ | ೬೧.೨೦ |
| ಸಿಂಡಿಕೇಟ್ ಬ್ಯಾಂಕ್ | ೩ | ೪೧೩೧.೧೨ | ೨೧೧೯.೨೨ | ೫೧.೩೦ | ೧೧೨೨.೮೧ | ೫೨.೯೮ | – | ೫.೩೪ | ೩೨೩.೯೯ | ೪೦೯.೩೨ | ೬೭.೮೪ | ೩೧.೯೦ |
| ಒಟ್ಟು | ೧೨೦ | ೮೮೩೪೧.೬೮ | ೫೩೭೫೦.೬೯ | ೬೦.೮೪ | ೩೮೫೬೩.೮೯ | ೭೧.೭೫ | ೨೦೮.೧೭ | ೩೦೭.೬೭ | ೧೬೦೧೩.೭೪ | ೧೯೧೬೨.೬೦ | ೩೧೪೫.೭೧ | ೨೫೭೧.೩೯ |
| ಕೋಲಾರ ಗ್ರಾಮೀಣ ಬ್ಯಾಂಕ್ | ೬೨ | ೨೦೧೪೯.೦೦ | ೧೪೯೪೪.೦೦ | ೭೪.೧೭ | ೧೧೧೬೧.೦೦ | ೭೪.೬೯ | ೦.೫೦ | ೧೧೯.೦೦ | ೮೫೭೮.೦೦ | ೭೪೨೮.೦೦ | ೯೦೬.೦೦ | ೧೧೪೨.೦೦ |
| ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ | ೧೨ | ೮೧೭೩.೬೧ | ೧೪೬೯೮.೮೪ | ೧೭೯.೮೩ | ೧೪೫೫೦.೨೫ | ೯೮.೯೯ | – | ೩೮೯.೫೫ | ೬೩೨೪.೪೦ | ೧೨೫೪೯.೯೨ | ೩೨.೯೭ | ೧೮೬೬.೦೦ |
| ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ | ೧೧ | – | ೮೩೨೨.೦೪ | – | ೮೩೨೨.೦೪ | ೧೦೦.೦೦ | – | ೬೬೫.೭೬ | ೬೬೫೭.೬೩ | ೭೦೦೯.೦೦ | – | ೧೩೩೧.೫೨ |
| ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ.) | ೧ | – | ೬೩೮೬.೨೫ | – | ೬೩೮೬.೨೫ | ೧೦೦ | – | – | – | – | ೫೯೯೪.೭೨ | ೬.೮೪ |
| ಎಲ್ಲಾ ಸೇರಿ ಒಟ್ಟು | ೨೦೬ | ೧೧೬೬೬೪.೨೯ | ೯೮೧೦೧.೮೨ | ೮೪.೦೯ | ೭೮೯೮೩.೪೩ | ೮೦.೫೧ | ೨೦೮.೬೭ | ೧೪೮೧.೯೮ | ೩೭೫೭೩.೭೭ | ೪೬೧೪೯.೫೨ | ೧೦೦೭೯.೪೦ | ೬೯೧೭.೭೫ |

ಆಧಾರ: ಮಾರ್ಗದರ್ಶಿ ಬ್ಯಾಂಕ್ (ಕೆನರಾ ಬ್ಯಾಂಕ್), ಕೋಲಾರ

ಸಹಾಯಕವಾಯಿತಲ್ಲದೇ ಗ್ರಾಮೀಣ ಜನರಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸಲೂ ಸಹಾಯಕವಾಯಿತು. ಗ್ರಾಮೀಣ ಬ್ಯಾಂಕು ಗ್ರಾಮ ಮತ್ತು ಅರೆ-ನಗರ ಪ್ರದೇಶಗಳಲ್ಲಿ ತನ್ನ ವ್ಯವಹಾರಗಳನ್ನು ವಿಸ್ತರಿಸುವ ಮೂಲಕ ವ್ಯವಸಾಯ ಮತ್ತು ವ್ಯವಸಾಯ ಆಧಾರಿತ ಕೈಗಾರಿಕೆಗಳು, ಆದ್ಯತಾ ವಲಯದ ಸಾಲ, ಸ್ವಯಂ ಉದ್ಯೋಗ, ಗ್ರಾಮೀಣ ಸಾರಿಗೆ ಮುಂತಾದವುಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ವ್ಯವಸಾಯದೊಂದಿಗೆ ಪೂರಕವಾಗಿ ಇತರೆ ಆರ್ಥಿಕ ಚಟುವಟಿಕೆಗಳು ಚುರುಕುಗೊಳ್ಳಲು ಸಹಾಯಕವಾಯಿತು. ಜಿಲ್ಲೆಯಲ್ಲಿ ೧೯೮೦ರ ದಶಕದ ಕೆಲವು ವರ್ಷಗಳಲ್ಲಿ ಬ್ಯಾಂಕ್ ಉದ್ಯಮದಲ್ಲಾದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೩**

| ವಿವರ | ವರ್ಷ | | | | |
|---|---|---|---|---|---|
| | ೧೯೮೦-೮೧ | ೧೯೮೩-೮೪* | ೧೯೮೪-೮೫* | ೧೯೮೮-೮೯* | ೧೯೮೯-೯೦* |
| **ಬ್ಯಾಂಕ್ ಶಾಖೆಗಳು** (ಸಂಖ್ಯೆ) | ೮೩ | ೧೨೫ | ೧೫೨ | ೧೬೩ | ೧೭೫ |
| **ಠೇವುಗಳು** (ಕೋಟಿ ರೂ.) | ೩೪.೧೦ | ೫೯.೪೯ | ೭೧.೦೦ | ೧೩೮.೬೩ | ೧೬೪.೦೦ |
| **ಮುಂಗಡಗಳು** (ಕೋಟಿ ರೂ.) | ೧೮.೪೧ | ೪೯.೭೫ | ೬೩.೦೦ | ೧೨೩.೫೬ | ೧೪೦.೦೦ |

* ಗ್ರಾಮೀಣ ಬ್ಯಾಂಕ್ ಶಾಖೆಗಳು ಸೇರಿದಂತೆ

೧೯೯೦ರ ದಶಕದಲ್ಲಿ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದಲ್ಲಿ ಹೊಸ ತಿರುವು ಕಂಡುಬಂದಿತು. ಸಂಖ್ಯಾತ್ಮಕ ಬೆಳವಣಿಗೆಗಿಂತ ಗುಣಾತ್ಮಕ ಬೆಳವಣಿಗೆಗೆ ಹೆಚ್ಚು ಒತ್ತು ನೀಡಲಾಯಿತು. ಶಾಖೆಗಳ ವಿಸ್ತರಣೆಯನ್ನು ತಡೆಹಿಡಿಯಲಾಯಿತು. ಆದರೆ ಠೇವಣಿ ಹೆಚ್ಚಳಕ್ಕೆ ಮತ್ತು ಮುಂಗಡಗಳ ವೈವಿಧ್ಯತೆಗೆ ಪ್ರಾಮುಖ್ಯತೆಯನ್ನು ಕೊಡಲಾಯಿತು. ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದಲ್ಲಿ ೧೯೯೧ ರಿಂದ ಕಂಡುಬಂದ ಬೆಳವಣಿಗೆಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೪**

| ವಿವರ | ವರ್ಷ | | | | | | | |
|---|---|---|---|---|---|---|---|---|
| | ೧೯೯೦-೯೧ | ೧೯೯೨-೯೩ | ೧೯೯೩-೯೪ | ೧೯೯೫-೯೬ | ೧೯೯೬-೯೭ | ೧೯೯೭-೯೮ | ೨೦೦೧-೦೨ | ೨೦೦೨-೦೩ |
| **ಬ್ಯಾಂಕ್** ಶಾಖೆಗಳು(ಸಂಖ್ಯೆ) | ೧೮೫ | ೧೮೬ | ೧೮೬ | ೧೮೬ | ೧೮೭ | ೧೮೫ | ೧೮೩ | ೧೮೨ |
| **ಠೇವುಗಳು** (ಕೋಟಿ ರೂ.) | ೨೨೨ | ೨೫೧ | ೩೦೨ | ೪೧೩ | ೪೭೩ | ೫೪೭ | ೮೨೯ | ೧೦೧೮ |
| **ಮುಂಗಡಗಳು** (ಕೋಟಿ ರೂ.) | ೧೬೩ | ೧೮೦ | ೨೫೪ | ೨೬೪ | ೩೨೦ | ೩೫೪ | ೪೮೫ | ೫೬೯ |

## ಮಾರ್ಗದರ್ಶಿ ಬ್ಯಾಂಕ್ ಮತ್ತು ಪತ್ತಿನ ಕ್ರಿಯಾ ಯೋಜನೆ (ಕ್ರೆಡಿಟ್ ಪ್ಲಾನ್)

ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಬ್ಯಾಂಕು ಸೌಲಭ್ಯವನ್ನು ಉಪಯೋಗಿಸಲು ಮಾರ್ಗದರ್ಶಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಮಾರ್ಗದರ್ಶಿ ಯೋಜನೆಯನ್ನು ಶ್ರೀ ನಾರಿಮನ್ ಸಮಿತಿ ಶಿಫಾರಸ್ಸು ಮಾಡಿತ್ತು. ಈ ಸಮಿತಿಯ ವರದಿಯನ್ನಾಧರಿಸಿ

೧೯೬೯ರ ಡಿಸೆಂಬರ್‌ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯ ಮುಖ್ಯ ಉದ್ದೇಶ ದೇಶದ ಎಲ್ಲ ಜಿಲ್ಲೆಗಳಿಗೂ ಬ್ಯಾಂಕಿಂಗ್ ಸೌಕರ್ಯವನ್ನು ವಿಸ್ತರಿಸುವುದಾಗಿತ್ತು. ಈ ಹೊಣೆಗಾರಿಕೆಯನ್ನು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಗೆ ವಿಧಿಸಿ, ಪ್ರತಿಯೊಂದು ಜಿಲ್ಲೆಗೂ ಒಂದೊಂದು ಬ್ಯಾಂಕನ್ನು ಮಾರ್ಗದರ್ಶಿ ಬ್ಯಾಂಕ್ ಎಂದು ನಿಯುಕ್ತಗೊಳಿಸಲಾಯಿತು. ಈ ಬ್ಯಾಂಕುಗಳು ತಮಗೆ ವಹಿಸಿದ ಜಿಲ್ಲೆಯ ಸಾಮಾಜಿಕ-ಆರ್ಥಿಕ ಸರ್ವೇಕ್ಷಣೆ ನಡೆಸಿ, ಆ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳ ಸಾಧ್ಯತೆ, ಇರುವ ಸಂಪನ್ಮೂಲಗಳು, ಅಗತ್ಯವಾದ ಸಾಲ-ಮುಂಗಡಗಳ ಪ್ರಮಾಣ ಇವುಗಳೆಲ್ಲವನ್ನು ಪರಿಶೀಲಿಸುವ ಕಾರ್ಯ ನಡೆಸಿವೆ. ಜಿಲ್ಲೆಯ ಎಲ್ಲ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನೊಳಗೊಂಡಂತೆ ಆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅದರಲ್ಲೂ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಹಿಂದುಳಿದ ಪ್ರದೇಶದ ಬೆಳವಣಿಗೆಗೆ ನೆರವು ನೀಡಿರುವುದು ರಾಷ್ಟ್ರೀಕರಣಾನಂತರ ಬ್ಯಾಂಕಿಂಗ್ ವ್ಯವಸ್ಥೆ ಮಾಡಿರುವ ಮುಖ್ಯ ಸಾಧನೆಗಳಲ್ಲೊಂದಾಗಿದೆ. ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಜಿಲ್ಲೆಯ ಶಾಖಾ ಬ್ಯಾಂಕುಗಳಿಗೆ ಆಯ್ಕೆ ಮಾಡಿದ ಹಲವಾರು ಗ್ರಾಮಗಳ ಸಂಪೂರ್ಣ ಅಭಿವೃದ್ಧಿಗೆ 'ಸೇವಾಕ್ಷೇತ್ರ' ಎಂಬ ಹೊಸ ಯೋಜನೆಯನ್ನು ೧೯೮೯ರಿಂದ ರೂಪಿಸಲಾಗಿದೆ. ಶಾಖಾವಾರು ಸಾಲಯೋಜನೆ ಮತ್ತು ಕ್ರಿಯಾಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಮಾರ್ಗದರ್ಶಿ ಬ್ಯಾಂಕು ಶ್ರಮಿಸುತ್ತಿದೆ.

ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ವಯ ಕೋಲಾರ ಜಿಲ್ಲೆಗೆ ೧೯೭೦ ರಿಂದಲೇ ಕೆನರಾ ಬ್ಯಾಂಕಿಗೆ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಿನ ಹೊಣೆಗಾರಿಕೆಯನ್ನು ವಹಿಸಲಾಗಿದೆ. ಕೆನರ ಬ್ಯಾಂಕ್ ಕೋಲಾರ ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ವಾರ್ಷಿಕ ಜಿಲ್ಲಾ ಸಾಲ ಯೋಜನೆಗಳನ್ನು ತಯಾರಿಸಿ ಅದನ್ನು ಅನುಷ್ಠಾನಕ್ಕೆ ತರುತ್ತಿದೆ. ಈ ರೀತಿಯಾದ ಸಾಲ ಯೋಜನೆಗಳು ಕಾರ್ಯರೂಪಕ್ಕೆ ಬಂದುದರಿಂದ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸಾಲ-ಸೌಲಭ್ಯಗಳು ದೊರಕುವಂತಾಗಿದೆ.

ಕೋಲಾರ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ೧೯೯೮-೯೯ ರಿಂದ ೨೦೦೨-೦೩ರವರೆಗೆ ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೫**

(ಮೊತ್ತ ಲಕ್ಷ ರೂ.ಗಳಲ್ಲಿ)

| ವಿವರಗಳು | ವರ್ಷ | | | | |
|---|---|---|---|---|---|
| | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ |
| **ಠೇವುಗಳು** | ೬೮೩೭೮.೮೦ | ೭೯೪೫೬.೪೮ | ೯೧೭೩೧.೯೧ | ೯೦೫೨೨.೦೫ | ೧೦೯೮೨೯.೫೨ |
| **ಸಾಲಮುಂಗಡಗಳು** | ೬೧೭೬೪.೭೭ | ೬೯೩೨೧.೨೦ | ೭೫೮೩೫.೩೨ | ೭೬೬೯೬.೯೨ | ೮೧೮೭೫.೭೪ |
| **ಸಾಲ-ಠೇವಣಿ ನಿಷ್ಪತ್ತಿ** | ೯೦% | ೮೭% | ೮೩% | ೮೫% | ೭೫% |
| **ಆದ್ಯತಾವಲಯ ಸಾಲಗಳು** | ೪೯೨೦೦.೪೧ | ೫೪೪೬೪.೨೭ | ೫೮೪೯೯.೩೭ | ೬೧೩೨.೦೧ | ೬೫೦೭೯.೯೧ |
| **ಆದ್ಯೇತರವಲಯ ಸಾಲಗಳು** | ೧೨೫೬೪.೩೬ | ೧೪೮೫೬.೯೩ | ೧೭೩೭೫.೯೫ | ೧೫೩೬೪.೯೧ | |

| | | | | | |
|---|---|---|---|---|---|
| | ೧೬೭೯೫.೮೩ | | | | |
| **ವ್ಯತ್ಯಸ್ತ ಬಡ್ಡಿ (ಡಿ.ಐ.ಆರ್.) ಸಾಲಗಳು** | ೧೧೭.೨೧ | ೧೧೮.೦೧ | ೧೭೨.೩೨ | ೧೬೮.೫೫ | ೧೧೯.೨೭ |
| **ದುರ್ಬಲವರ್ಗಗಳ ಸಾಲಗಳು** | ೨೩೫೮೯.೧೫ | ೨೪೦೪೭.೦೦ | ೨೪೬೫೪.೯೮ | ೨೪೭೯೨.೪೫ | ೨೧೬೩೬.೬೧ |
| **ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಸಾಲಗಳು** | ೪೬೦೩.೫೧ | ೪೭೭೧.೦೫ | ೫೦೦೯.೪೮ | ೪೯೬೬.೮೬ | ೫೮೫೫.೬೩ |

ಆಧಾರ: ಮಾರ್ಗದರ್ಶಿ ಬ್ಯಾಂಕ್ (ಕೆನರಾ ಬ್ಯಾಂಕ್), ಕೋಲಾರ

ಕೋಲಾರ ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ೨೦೦೪ರ ಮಾರ್ಚ್ ಅಂತ್ಯದಲ್ಲಿದ್ದಂತೆ ಸಾಧಿಸಿದ ಪ್ರಗತಿಯನ್ನು ಕೋಷ್ಟಕ ೬.೬ರಲ್ಲಿ ನೀಡಲಾಗಿದೆ.

## ಗ್ರಾಮೀಣ ಬ್ಯಾಂಕುಗಳು

೧೯೭೬ರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಶಾಸನದ ಪ್ರಕಾರ ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪ್ರವರ್ತಕ ಬ್ಯಾಂಕು (೫೦:೩೫:೧೫), ಇವುಗಳ ಸಹಭಾಗಿತ್ವದಲ್ಲಿ ಪ್ರತೀ ಒಂದು ಅಥವಾ ಎರಡು ಜಿಲ್ಲಾ ವ್ಯಾಪ್ತಿಯನ್ನು ಹೊಂದಿದಂತೆ ಗ್ರಾಮೀಣ ಬ್ಯಾಂಕುಗಳನ್ನು ದೇಶಾದ್ಯಂತ ಸ್ಥಾಪಿಸಲಾಯಿತು. ಗ್ರಾಮೀಣ ಜನರ ಆರ್ಥಿಕ ಸ್ಥಿತಿಗತಿಗಳನ್ನು, ಉದ್ಯೋಗ, ಕಸುಬು ಮುಂತಾದವುಗಳನ್ನು ಉತ್ತಮಪಡಿಸುವುದಕ್ಕೆ ವಾಣಿಜ್ಯ ಬ್ಯಾಂಕುಗಳು ಪೂರ್ಣವಾಗಿ ಹೊರೆಯನ್ನು ಹೊರಲಾರವೆಂದು ಸರ್ಕಾರ ತೀರ್ಮಾನಿಸಿ, ಗ್ರಾಮೀಣ ಪರಿಸ್ಥಿತಿಗಳಿಗೇ ಹೊಂದಿಕೊಳ್ಳುವ ಪ್ರತ್ಯೇಕವಾದ ಬ್ಯಾಂಕುಗಳನ್ನು ಸ್ಥಾಪಿಸಲು ಮುಂದಾಯಿತು. ಗ್ರಾಮಸ್ಥರ ಹಣದ ಬೇಡಿಕೆಗಳನ್ನು ಪೂರೈಸುವುದಕ್ಕೆ ಈ ಬ್ಯಾಂಕುಗಳು ಮೀಸಲಾಗಿವೆ. ಗ್ರಾಮದ ಆರ್ಥಿಕ ಚಟುವಟಿಕೆಗಳಿಗೆ ಈ ಬ್ಯಾಂಕುಗಳು ಪೂರ್ಣವಾಗಿ ಹಣದ ಸೌಲಭ್ಯವನ್ನು ಒದಗಿಸುತ್ತವೆ. ಹಣವು ಗ್ರಾಮಸ್ಥರಿಗೆ ದೊರೆಯುವುದಕ್ಕೆ ಯಾವ ವಿಳಂಬವೂ ಆಗುವುದಿಲ್ಲ. ಗ್ರಾಮಸ್ಥರು ತಮ್ಮ ಆರ್ಥಿಕ ವ್ಯವಹಾರಗಳಿಗೆ ವಾಣಿಜ್ಯ ಬ್ಯಾಂಕುಗಳನ್ನು ಅವಲಂಬಿಸುವುದು ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಯಿಂದ ತಪ್ಪುತ್ತದೆ. ಗ್ರಾಮಸ್ಥರ ಕುಂದುಕೊರತೆಗಳನ್ನು ಅರ್ಥಮಾಡಿಕೊಂಡು ಅವರ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುವುದೇ ಗ್ರಾಮೀಣ ಬ್ಯಾಂಕುಗಳ ಮುಖ್ಯ ಉದ್ದೇಶವಾಗಿದೆ.

ಕೋಲಾರ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಾದ ಕೆನರ ಬ್ಯಾಂಕಿನಿಂದ ಪ್ರಾಯೋಜಿತಗೊಂಡ ಕೋಲಾರ ಗ್ರಾಮೀಣ ಬ್ಯಾಂಕನ್ನು ೧೯೮೩ರ ಫೆಬ್ರವರಿ ೧೬ ರಂದು ಸ್ಥಾಪಿಸಲಾಯಿತು. ಕೋಲಾರ ಜಿಲ್ಲೆಯ ಗ್ರಾಮೀಣ ಜನರ ಅಭ್ಯುದಯಕ್ಕಾಗಿ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಈ ಬ್ಯಾಂಕು ಉತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ. ಗ್ರಾಮೀಣ ಜನರ ಸಮಗ್ರ ಅಭಿವೃದ್ಧಿ, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಹಳ್ಳಿಗಳಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡುವುದು, ಮೊದಲಾದವು ಬ್ಯಾಂಕಿನ ಮೂಲಭೂತ ಗುರಿಗಳಾಗಿದ್ದು, ಅವುಗಳನ್ನು ಸಾಧಿಸುವಲ್ಲಿ ಬ್ಯಾಂಕ್ ಯಶಸ್ವಿಯಾಗಿದೆ. ಈ ಗ್ರಾಮೀಣ ಬ್ಯಾಂಕಿನ ಮೊದಲ ಶಾಖೆಯನ್ನು ಮಂಡಿಕಲ್-ಎ ನಲ್ಲಿ ೧೭-೦೨-೮೩ರಲ್ಲಿ ಸ್ಥಾಪಿಸಲಾಯಿತು. ಎರಡನೇ ಶಾಖೆಯನ್ನು ಮಿಟ್ಟೇಮರಿಯಲ್ಲಿ ೨೧-೦೨-೮೩ರಲ್ಲಿ ಸ್ಥಾಪಿಸಲಾಯಿತು. ಡಿಸೆಂಬರ್ ೧೯೮೩ರ ಅಂತ್ಯಕ್ಕೆ ಜಿಲ್ಲೆಯಲ್ಲಿದ್ದ ಒಟ್ಟು ಶಾಖೆಗಳ ಸಂಖ್ಯೆ ೩೦ ಇದ್ದು, ಠೇವು ೮೫.೭೭ ಲಕ್ಷ ರೂ. ಮತ್ತು ಮುಂಗಡ ೮೩.೩೧ ಲಕ್ಷ

ರೂ.ಗಳಾಗಿತ್ತು. ಜಿಲ್ಲೆಯಲ್ಲಿ ಮಾರ್ಚ್ ೧೯೮೪ರ ವೇಳೆಗೆ ಒಟ್ಟು ೫೦ ಶಾಖೆಗಳು ಮತ್ತು ೧೯೮೫ರ ಮಾರ್ಚ್ ಅಂತ್ಯಕ್ಕೆ ಒಟ್ಟು ೬೫ ಗ್ರಾಮೀಣ ಬ್ಯಾಂಕಿನ ಶಾಖೆಗಳಿದ್ದವು. ಕೋಲಾರ ಗ್ರಾಮೀಣ ಬ್ಯಾಂಕಿನ ಪ್ರಗತಿಯ ಪಥವನ್ನು ಮುಂದಿನ ಕೋಷ್ಟಕ ೬.೭ರಲ್ಲಿ ತಿಳಿಸಲಾಗಿದೆ.

**ಕೋಷ್ಟಕ ೬.೭**

| ವಿವರಗಳು | ವರ್ಷ | | | | | | |
|---|---|---|---|---|---|---|---|
| | ೧೯೮೫-೮೬ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ |
| **ಗ್ರಾಮೀಣ ಬ್ಯಾಂಕಿನ ಶಾಖೆಗಳು** | | ೬೫ | ೬೬ | ೬೬ | ೬೧ | ೬೩ | ೬೨೬೧ |
| **ಠೇವುಗಳು (ಲಕ್ಷ ರೂ.)** | ೫೨೯ | ೧೮೩೦ | ೫೬೦೨ | ೧೨೮೮೦ | ೧೫೪೩೫ | ೧೭೫೦೨ | ೨೦೧೪೯ |
| **ಮುಂಗಡಗಳು (ಲಕ್ಷ ರೂ):** | | | | | | | |
| **೧. ಆದ್ಯತಾ ವಲಯ** | ೭೬೬ | ೨೪೦೧ | ೩೬೧೭ | ೫೫೬೫ | ೭೧೨೮ | ೯೨೬೬ | ೧೧೧೬೧ |
| **೨. ಆದ್ಯೇತರ ವಲಯ** | ೫೯ | ೨೫೨ | ೮೭೨ | ೩೦೩೮ | ೨೯೯೮ | ೩೩೯೦ | ೩೭೮೩ |
| **ಒಟ್ಟು** | **೮೨೫** | **೨೬೫೩** | **೪೪೮೯** | **೮೬೦೩** | **೧೦೦೨೬** | **೧೨೬೫೬** | **೧೪೯೪೪** |

ಆಧಾರ: ಕೋಲಾರ ಗ್ರಾಮೀಣ ಬ್ಯಾಂಕ್, ಕೋಲಾರ

## ಜೀವ ವಿಮೆ

### ಭಾರತೀಯ ಜೀವ ವಿಮಾ ನಿಗಮ

ಭಾರತ ಸರ್ಕಾರವು ೧೯೫೬ರಲ್ಲಿ ರಾಷ್ಟ್ರದಲ್ಲಿನ ಎಲ್ಲಾ ಜೀವ ವಿಮಾ ಕಂಪನಿಗಳನ್ನು ರಾಷ್ಟ್ರೀಕರಣಗೊಳಿಸಿ ಭಾರತೀಯ ಜೀವ ವಿಮಾ ನಿಗಮವನ್ನು ಸ್ಥಾಪಿಸಿತು. ಇದಕ್ಕೂ ಪೂರ್ವದಲ್ಲಿ ಕೆಲ ದೇಶಿಯ ಹಾಗೂ ವಿದೇಶಿ ವಿಮಾ ಕಂಪನಿಗಳು, ಬೆಂಗಳೂರು ಅಥವಾ ತಮ್ಮ ಪ್ರಧಾನ ಕಚೇರಿಯಿಂದಲೇ ಏಜೆಂಟರ ಮೂಲಕ ಜಿಲ್ಲೆಯ ಜೀವ ವಿಮೆ ವ್ಯವಹಾರವನ್ನು ನಿರ್ವಹಿಸುತ್ತಿದ್ದವು. ಹಿಂದಿನ ಮೈಸೂರು ಸರ್ಕಾರದ ವಿಮಾ ಇಲಾಖೆ ಸಹ ೧೯೧೬ರಲ್ಲಿ 'ಪಬ್ಲಿಕ್ ಬ್ರಾಂಚ್' ವಿಮಾ ಯೋಜನೆಯನ್ನು ಜಾರಿಗೊಳಿಸಿ, ಆ ಮೂಲಕ ಸಹ ಜಿಲ್ಲೆಯಲ್ಲಿ ಜೀವ ವಿಮೆ ವ್ಯವಹಾರವನ್ನು ನಡೆಸುತ್ತಿತ್ತು. 'ಪಬ್ಲಿಕ್ ಬ್ರಾಂಚ್' ವಿಮೆಯು ಒಂದು ಪ್ರತ್ಯೇಕ ಘಟಕವಾಗಿದ್ದು, ಅದನ್ನು ೧೯೫೬ರಲ್ಲಿ ಭಾರತೀಯ ಜೀವ ವಿಮಾ ಸಂಸ್ಥೆಯೊಂದಿಗೆ ವಿಲೀನ ಮಾಡಲಾಯಿತು. ಅಂದಿನ ದಿನಗಳಲ್ಲಿ ಗ್ರಾಮೀಣ ಜನತೆಗೆ ಖಾಸಗಿ ವಿಮಾ ಕಂಪನಿಗಳಿಂದ ಅಷ್ಟಾಗಿ ಪ್ರಯೋಜನ ದೊರಕುತ್ತಿದ್ದಿಲ್ಲ. 'ಜೀವ ವಿಮೆ' ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಿದ ಪರಿಣಾಮವಾಗಿ, ಭಾರತೀಯ ಜೀವ ವಿಮಾ ನಿಗಮವು 'ಜೀವ ವಿಮೆ' ಸೌಲಭ್ಯವನ್ನು ಗ್ರಾಮೀಣ ಜನರಿಗೂ ತಲುಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿದೆ. ಅದರಂತೆ ಭಾರತೀಯ ಜೀವ ವಿಮಾ ನಿಗಮವು ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಮೊದಲು ಒಂದು ಸಬ್-ಆಫೀಸನ್ನು (ಉಪ-ಕಚೇರಿ) ೧೯೫೬ರ ಸೆಪ್ಟೆಂಬರ್‌ನಲ್ಲಿ ಸ್ಥಾಪಿಸಿತು. ಚಿಕ್ಕಬಳ್ಳಾಪುರದಲ್ಲೂ ಒಂದು ಉಪ-ಕಚೇರಿಯನ್ನು ೧೯೬೧ರಲ್ಲಿ ತೆರೆಯಿತು. ಈ ಕಚೇರಿಗಳು ಸಹಾಯಕ ಶಾಖಾ ವ್ಯವಸ್ಥಾಪಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಲ್ಲದೇ ಆಗಿನಿಂದಲೇ ಜಿಲ್ಲೆಯ ನಿಗದಿತ ಅಂಚೆ ಕಚೇರಿ ಮತ್ತು ಬ್ಯಾಂಕು ಶಾಖೆಗಳಲ್ಲೂ ವಿಮಾ ಕಂತಿನ ಹಣವನ್ನು ತುಂಬುವ ವ್ಯವಸ್ಥೆಯನ್ನೂ ಮಾಡಲಾಗಿತ್ತು. ೧೯೬೭-೬೮ರಲ್ಲಿ ಜಿಲ್ಲೆಯಲ್ಲಿದ್ದ ಭಾರತೀಯ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ ೧೯ ಆಗಿದ್ದಿತು. ಜಿಲ್ಲೆಯಲ್ಲಿ ೩೯೫ ಸಕ್ರೀಯ ಏಜೆಂಟರುಗಳಿದ್ದು, ಆ ವರ್ಷದಲ್ಲಿ ಗಳಿಸಿದ ಹೊಸ ವಿಮಾ ವ್ಯವಹಾರದ ಮೊತ್ತ ಸರಾಸರಿ ೪೮,೦೦೦ ರೂ. ಆಗಿದ್ದಿತು. ಜಿಲ್ಲೆಯಲ್ಲಿ ಭಾರತೀಯ ಜೀವ ವಿಮಾ ನಿಗಮ ೧೯೬೬-೬೭ರಲ್ಲಿ ಕೊಟ್ಟ ಪಾಲಿಸಿಗಳ

ಸಂಖ್ಯೆ ೪,೮೫೭ ಆಗಿದ್ದಿತು. ಈ ಪಾಲಿಸಿಗಳ ಒಟ್ಟು ಮೌಲ್ಯ ೧,೮೯,೪೪,೪೫೦ ರೂ.ಗಳಾಗಿತ್ತು. ಜೀವ ವಿಮಾ ನಿಗಮ ೨೦೦೩-೦೪ರ ವೇಳೆಗೆ ಜಿಲ್ಲೆಯಲ್ಲಿ ಕೆ.ಜಿ.ಎಫ್. ಹಾಗೂ ಚಿಕ್ಕಬಳ್ಳಾಪುರ ಶಾಖೆಗಳಲ್ಲದೆ, ಕೋಲಾರ (೧೯೮೦) ಹಾಗೂ ಚಿಂತಾಮಣಿಗಳಲ್ಲಿ (೧೯೮೭) ಒಂದೊಂದರಂತೆ ಒಟ್ಟು ನಾಲ್ಕು ಶಾಖೆಗಳು ತೆರೆದಿತ್ತು. ಇವೆಲ್ಲವೂ ಶಾಖಾ ವ್ಯವಸ್ಥಾಪಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೨೦೦೩-೦೪ರಲ್ಲಿ ಜಿಲ್ಲೆಯಲ್ಲಿದ್ದ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ ೩೮ ಆಗಿದ್ದಿತು. ಶಾಖಾವಾರು ಜೀವ ವಿಮಾ ಪಾಲಿಸಿಗಳು ಹಾಗೂ ಅವುಗಳ ಮೊತ್ತ ಕ್ರಮವಾಗಿ ಕೋಲಾರ ೯೯,೯೦೬ ಮತ್ತು ೧೧೪.೦೭ ಕೋಟಿ ರೂ; ಚಿಕ್ಕಬಳ್ಳಾಪುರ ೯೦,೩೯೫ ಮತ್ತು ೯೫.೯೨ ಕೋಟಿ ರೂ; ಕೆ.ಜಿ.ಎಫ್ ೬೨,೭೭೨ ಮತ್ತು ೫೯.೫೯ ಕೋಟಿ ರೂ; ಚಿಂತಾಮಣಿ ೫೬,೫೭೭ ಮತ್ತು ೭೧.೮೬ ಕೋಟಿ ರೂ.ಗಳಾಗಿದ್ದಿತು. ವರ್ಷ ೨೦೦೩-೦೪ರಲ್ಲಿ ನೀಡಲಾದ ಹೊಸ ವಿಮಾ ಪಾಲಿಸಿಗಳು ಹಾಗೂ ಈ ಪಾಲಿಸಿಗಳಿಂದ ವಸೂಲಾದ ಕಂತುಗಳ ಮೊತ್ತ ಕ್ರಮವಾಗಿ ಕೋಲಾರ ೧೭,೮೫೩ ಮತ್ತು ೨೯೨.೫೫ ಲಕ್ಷ ರೂ; ಚಿಕ್ಕಬಳ್ಳಾಪುರ ೧೭,೪೩೩ ಮತ್ತು ೩೦೮.೪೩ ಲಕ್ಷ ರೂ; ಕೆ.ಜಿ.ಎಫ್. ೯,೧೫೬ ಮತ್ತು ೧೪೩.೪೩ ಲಕ್ಷ ರೂ; ಚಿಂತಾಮಣಿ ೧೧,೩೧೭ ಮತ್ತು ೨೧೭.೪೮ ಲಕ್ಷ ರೂ.ಗಳಾಗಿತ್ತು.

## ಕರ್ನಾಟಕ ಸರ್ಕಾರಿ ವಿಮಾ ಇಲಾಖೆ

ಮೈಸೂರು ಸರ್ಕಾರ ಡಿಸೆಂಬರ್ ೧೮೯೧ರಲ್ಲಿ ವಿಮಾ ವಿಭಾಗವನ್ನು ಸ್ಥಾಪಿಸಿ, ಪ್ರಾರಂಭಕ್ಕೆ ತಿಂಗಳಿಗೆ ಹತ್ತು ರೂ. ಮತ್ತು ಅದಕ್ಕೂ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದ ಸರ್ಕಾರಿ ಅಧಿಕಾರಿಗಳಿಗೆ ಅನ್ವಯಾಗುವಂತೆ ಕಡ್ಡಾಯ ವಿಮಾ ಸೌಲಭ್ಯವನ್ನು ಜಾರಿಗೆ ತಂದಿತು. ಮುಂದೆ ಈ ವಿಮಾ ವಿಭಾಗವು ಪ್ರತ್ಯೇಕ ವಿಮಾ ಇಲಾಖೆಯಾಗಿ ಪರಿವರ್ತನೆಗೊಂಡಿತು. ರಾಜ್ಯ ವಿಮಾ ಇಲಾಖೆಯು (ಕೆ.ಜಿ.ಐ.ಡಿ) ಕೇವಲ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಜೀವ ವಿಮಾ ವ್ಯವಹಾರವನ್ನೂ, ಅಲ್ಲದೇ ಸರ್ಕಾರ, ಸರ್ಕಾರಿ ನೌಕರರು ಮತ್ತು ಸರ್ಕಾರದ ನಿಗಮಗಳಿಗೆ ಸಂಬಂಧಪಟ್ಟಂತೆ ಮೋಟಾರು ವಾಹನ ವಿಮೆ ವ್ಯವಹಾರವನ್ನೂ ನಿರ್ವಹಿಸುತ್ತಿದೆ. ೧೯೭೬ರಲ್ಲಿ ರಾಜ್ಯ ವಿಮಾ ಇಲಾಖೆಯ ಆಡಳಿತವನ್ನು ವಿಕೇಂದ್ರೀಕರಿಸಲಾಯಿತು. ಅದರ ಅನ್ವಯ ೧೯೭೬ರ ಜುಲೈನಲ್ಲಿ ಜಿಲ್ಲಾ ವಿಮಾಧಿಕಾರಿಗಳ ಕಚೇರಿಯನ್ನು ಕೋಲಾರದಲ್ಲಿ ತೆರೆಯಲಾಯಿತು. ಜಿಲ್ಲೆಯಲ್ಲಿನ ಎಲ್ಲಾ ರಾಜ್ಯ ಸರ್ಕಾರಿ ನೌಕರರ ವಿಮಾ ವ್ಯವಹಾರದ ಖಾತೆಗಳನ್ನು ಜಿಲ್ಲಾ ವಿಮಾ ಕಚೇರಿಗೆ ೧೯೮೩ರಲ್ಲಿ ವರ್ಗಾಯಿಸಲಾಯಿತು. ಕೋಲಾರ ಜಿಲ್ಲೆಯಲ್ಲಿ ಜೀವ ವಿಮೆ ವ್ಯಾಪ್ತಿಗೆ ಒಳಪಟ್ಟ ನೌಕರರ ಸಂಖ್ಯೆ ೧೯೯೫-೯೬ರಲ್ಲಿ ೨೮,೪೪೨; ೨೦೦೦-೦೧ರಲ್ಲಿ ೨೫,೭೭೫; ೨೦೦೨-೦೩ರಲ್ಲಿ ೨೪,೪೬೨ ಮತ್ತು ೨೦೦೩-೦೪ರಲ್ಲಿ ೨೩,೭೬೩ ಆಗಿದ್ದಿತು. ವಾರ್ಷಿಕ ವಿಮಾ ಕಂತಿನ ಆದಾಯ ೧೯೯೫-೯೬ರಲ್ಲಿ ರೂ.೩,೦೨,೨೬,೦೫೦; ೨೦೦೦-೦೧ರಲ್ಲಿ ರೂ.೮,೫೮,೦೧,೮೦೧; ೨೦೦೨-೦೩ರಲ್ಲಿ ರೂ.೯,೬೭,೭೪,೧೧೬ ಮತ್ತು ೨೦೦೩-೦೪ರಲ್ಲಿ ರೂ.೯,೮೬,೭೬,೦೩೧ ಆಗಿದ್ದಿತು. ಜಿಲ್ಲಾ ಸರ್ಕಾರಿ ವಿಮಾ ಇಲಾಖೆ ಸ್ಥಳೀಯ ಸಂಸ್ಥೆಗಳ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಕುಟುಂಬ ಕಲ್ಯಾಣ ನಿಧಿ ಯೋಜನೆಯ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸುವ ಕಾರ್ಯದಲ್ಲೂ ತೊಡಗಿದೆ. ಆ ಸಂಬಂಧ ಪುರಸಭೆ/ನಗರಸಭೆ ನೌಕರರಿಂದ ಸಂಗ್ರಹಿಸಿದ ವಂತಿಗೆ ಆದಾಯವು ೧೯೯೫-೯೬ರಲ್ಲಿ ರೂ.೫೮,೨೩೨; ೨೦೦೦-೦೧ರಲ್ಲಿ ರೂ.೬೭,೦೭೨; ೨೦೦೨-೦೩ರಲ್ಲಿ ರೂ.೧,೩೮,೦೪೫ ಮತ್ತು ೨೦೦೩-೦೪ರಲ್ಲಿ ರೂ.೩೭,೨೪೦ ಇದ್ದಿತು. ಅನುದಾನಿತ ವಿದ್ಯಾ ಸಂಸ್ಥೆಗಳ ನೌಕರರ ವಂತಿಗೆ ಆದಾಯವು ೧೯೯೫-೯೬ರಲ್ಲಿ ರೂ.೨,೦೦,೯೫೪; ೨೦೦೦-೦೧ರಲ್ಲಿ ರೂ.೨,೮೯,೭೪೦; ೨೦೦೨-೦೩ರಲ್ಲಿ ೩,೪೨,೨೧೪ ಮತ್ತು ೨೦೦೩-೦೪ರಲ್ಲಿ ರೂ.೨,೯೯,೭೮೯ ಆಗಿದ್ದಿತು.

## ನಾಣ್ಯಗಳು ಮತ್ತು ಹಣದ ಚಲಾವಣೆ

ರಾಜ್ಯದಲ್ಲಿ ಭಾರತೀಯ ನಾಣ್ಯ ಪದ್ಧತಿ ಜಾರಿಗೆ ಬರುವ ಪೂರ್ವದಲ್ಲಿ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲಿ ಭಾರತದಲ್ಲಿ ಚಲಾವಣೆಯಲ್ಲಿದ್ದ ಎಲ್ಲಾ ನಾಣ್ಯಗಳು ಚಲಾವಣೆಯಲ್ಲಿದ್ದವು. ಆದರೆ ಎಲ್ಲಾ ಲೆಕ್ಕಾಚಾರವನ್ನು ಕಂಠೀರಾಯಿ ಪಗೋಡ, ಫನಮ್ ಮತ್ತು ದುಡ್ಡು ಈ ನಾಣ್ಯಗಳಲ್ಲೇ ಇಡಲಾಗುತ್ತಿತ್ತು. ಒಂದು ಕಂಠೀರಾಯಿ ಪಗೋಡ ಸುಮಾರು ಮೂರು ರೂಪಾಯಿಗೆ ಸಮಾನವಾಗಿತ್ತು. ಹತ್ತು ಫನಮ್ ಒಂದು ಕಂಠೀರಾಯಿ ಪಗೋಡಕ್ಕೆ ಸಮಾನವಾಗಿದ್ದು, ಒಂದು ಫನಮ್ ೧೮ ದುಡ್ಡುಗಳಿಗೆ ಸಮಾನವಾಗಿತ್ತು. ಸರ್ಕಾರದ (ಇಂಗ್ಲಿಷ್) ಅಧಿಕಾರಿ ತಿಂಗಳಿಗೊಮ್ಮೆ ವಿವಿಧ ನಾಣ್ಯಗಳ ನಡುವಣ ಬೆಲೆಯನ್ನು ನಿರ್ಧರಿಸಿ ವಿನಿಮಯ ದರವನ್ನು ಪ್ರಕಟಿಸುತ್ತಿದ್ದನು. ಸುತ್ತಲಿನ ವ್ಯವಹಾರಸ್ಥರು ಈ ನಿಗದಿಯಾದ ದರದಲ್ಲೇ ವ್ಯವಹಾರವನ್ನು ಮಾಡುತ್ತಿದ್ದರು. ಸುಮಾರು ನಾಲ್ಕು ರೂಪಾಯಿಗೆ ಸಮಾನವಾಗಿದ್ದ ಸ್ಟಾರ್ ಪಗೋಡ (ಬಹದ್ದೂರಿ ಪಗೋಡ) ನಾಣ್ಯವು ಸಹ ಚಲಾವಣೆಯಲ್ಲಿತ್ತು. ಟಿಪ್ಪು ತನ್ನ ಅಡಳಿತ ಕಾಲದಲ್ಲಿ (೧೭೮೨–೧೭೯೯) ೧೬ ಬಗೆಯ ವಿವಿಧ ನಾಣ್ಯಗಳನ್ನು ಚಿನ್ನ, ಬೆಳ್ಳಿ, ತಾಮ್ರದಲ್ಲಿ ಅಚ್ಚುಹಾಕಿಸಿದ್ದನು. ಕಂಠೀರಾಯಿ ಪಗೋಡ ನಾಣ್ಯಗಳ ಜೊತೆಜೊತೆಯಲ್ಲೇ ಈ ನಾಣ್ಯಗಳೂ ಚಲಾವಣೆಯಲ್ಲಿದ್ದವು. ಆದರೂ ೧೮೪೩ರವರೆಗೆ ಕಂಠೀರವ ನರಸಿಂಹರಾಜ ಒಡೆಯರ್ (೧೬೩೮–೧೬೫೯) ಆಡಳಿತದ ಕಾಲದಲ್ಲಿ ಮೊದಲ ಬಾರಿಗೆ ಚಲಾವಣೆಯಲ್ಲಿ ತಂದ ಚಿನ್ನದ ನಾಣ್ಯವಾದ ಕಂಠೀರಾಯಿ ಪಗೋಡವೇ ಅಧಿಕೃತ ನಾಣ್ಯವಾಗಿದ್ದಿತ್ತು. ಸರ್ಕಾರ ಈ ಎಲ್ಲ ನಾಣ್ಯಗಳನ್ನು ೧೮೫೪ರಲ್ಲಿ ಹಿಂತೆಗೆದುಕೊಂಡು (ಕಂಪನಿ) ರೂಪಾಯಿ ನಾಣ್ಯವನ್ನು ಮಾತ್ರ ಚಲಾವಣೆಗೆ ತಂದಿತು. ಅಂತೆಯೇ ೧೮೭೦ರಲ್ಲಿ ಭಾರತೀಯ ನಾಣ್ಯಗಳ ಕಾನೂನು ೧೮೭೦'ರ ಪರಿಮಿತಯನ್ನು ಮೈಸೂರು ರಾಜ್ಯಕ್ಕೆ ವಿಸ್ತರಿಸಿದ ಬಳಿಕ ಬ್ರಿಟಿಷ್ ಸರ್ಕಾರದ ನಾಣ್ಯಗಳು ಮೈಸೂರು ರಾಜ್ಯದಲ್ಲಿ ಚಲಾವಣೆಗೆ ಬಂದವು. ೧೮೭೯ರಲ್ಲಿ ಮದ್ರಾಸ್ ಸರ್ಕಾರದ ನೋಟುಗಳು ಬೆಂಗಳೂರಿನಲ್ಲಿ ಬಳಕೆಗೆ ಬಂದವು. ನಂತರ ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ವಿಪತ್ಕಾಲಿನ ನಿಯಂತ್ರಣ ಕಾಯಿದೆ ೧೯೧೮ರ ಮೂಲಕ ಮದ್ರಾಸ್ ವಲಯದಿಂದ ಬಿಡುಗಡೆ ಮಾಡಿದ ರೂಪಾಯಿ ನೋಟುಗಳನ್ನು ಕೋಲಾರ ಜಿಲ್ಲೆ ಸೇರಿದಂತೆ ಮೈಸೂರು ಸಂಸ್ಥಾನದಲ್ಲೆಲ್ಲ ಬಳಕೆಗೆ ತರಲಾಯಿತು. ಬ್ರಿಟಿಷ್ ಅರಸರ (ಚಿತ್ರ) ಹೆಸರಿನಲ್ಲಿ ಅಚ್ಚಾಗುತ್ತಿದ್ದ ಸರ್ಕಾರದ ನಾಣ್ಯಗಳು ಬೆಳ್ಳಿಯಿಂದ, ತಾಮ್ರದಿಂದ ಮತ್ತು ತಾಮ್ರ–ನಿಕ್ಕಲ್ ಮಿಶ್ರಲೋಹಗಳಿಂದ ಮಾಡಿದವುಗಳಾಗಿದ್ದವು. ಚಲಾವಣೆಯಲ್ಲಿದ್ದ ಬೆಳ್ಳಿಯ ನಾಣ್ಯಗಳೆಂದರೆ ರೂಪಾಯಿ, ಅರ್ಧ ರೂಪಾಯಿ, ಕಾಲು ರೂಪಾಯಿ (ಪಾವಲಿ)ಗಳೂ, ತಾಮ್ರ–ನಿಕ್ಕಲ್ ಮಿಶ್ರಲೋಹದ ಎರಡಾಣೆ, ಒಂದಾಣೆ ನಾಣ್ಯಗಳೂ, ತಾಮ್ರದ ಕಾಲು ಆಣೆ (ಪಾವಾಣೆ ಅಥವಾ ಮೂರು ಕಾಸು), ಅರ್ಧ ಆಣೆ ಮತ್ತು ಪೈಸೆಗಳೂ ಆಗಿದ್ದವು.

ಭಾರತವು ೧೯೪೭ರಲ್ಲಿ ಸ್ವತಂತ್ರವಾದರೂ, ೧೯೫೦ರವರೆಗೆ ಬ್ರಿಟಿಷ್ ನಾಣ್ಯಗಳನ್ನೇ ಬಳಸಲಾಯಿತು. ಸ್ವತಂತ್ರ ಭಾರತವು ೧೯೫೦ರಲ್ಲಿ ಅಶೋಕ ಚಕ್ರವಿರುವ ಮುಂಭಾಗ ಮತ್ತು ಇಂಗ್ಲೀಷ್‌ನಲ್ಲಿ 'ಗವರ್ನ್‌ಮೆಂಟ್ ಆಫ್ ಇಂಡಿಯಾ' ಎಂಬ ಬರಹವುಳ್ಳ ರೂಪಾಯಿ, ಅರ್ಧ ರೂಪಾಯಿ ಮತ್ತು ಕಾಲು ರೂಪಾಯಿಗಳ ನಾಣ್ಯಗಳನ್ನು ಅಚ್ಚುಹಾಕಿತು. ಈ ನಾಣ್ಯಗಳ ಹಿಂಭಾಗದಲ್ಲಿ ನಾಣ್ಯದ ಮೌಲ್ಯವನ್ನು ನಾಗರೀ ಮತ್ತು ಇಂಗ್ಲೀಷ್ ಲಿಪಿಗಳಲ್ಲಿ ಬರೆಯಲಾಯಿತು. ಎರಡು ಆಣೆ, ಒಂದು ಆಣೆ ಮತ್ತು ಅರ್ಧ ಆಣೆಯ ನಾಣ್ಯಗಳ ಮೇಲೆ ಹಿಂಭಾಗದಲ್ಲಿ ನಂದಿಯೂ, ತಾಮ್ರದ ಪೈಸೆಯ ಮೇಲೆ ಹಾರುತ್ತಿರುವ ಕುದುರೆಯ ಚಿತ್ರವಿದ್ದಿತು. ೧೯೫೭ರಲ್ಲಿ ಭಾರತ ಸರ್ಕಾರವು ನಾಣ್ಯ ಪದ್ಧತಿಯನ್ನು ದಶಮಾಂಶ ಪದ್ಧತಿಗೆ ಬದಲಾಯಿಸಿತು. ಅದರಂತೆ

ನಾಣ್ಯ ಪದ್ಧತಿಯಲ್ಲಿ ಗಮನಾರ್ಹವಾದ ಬದಲಾವಣೆಗಳನ್ನು ತರಲಾಯಿತು. ಒಂದು ರೂಪಾಯಿಗೆ ನೂರು ಪೈಸೆಗಳೆಂದು ಗೊತ್ತುಪಡಿಸಲಾಯಿತು. ಹಾಗೆಯೇ ಒಂದು ರೂಪಾಯಿ, ೫೦, ೨೫, ೧೦, ೫, ೨ ಮತ್ತು ಒಂದು ಪೈಸೆಗಳ ನಾಣ್ಯಗಳು ಬಳಕೆಗೆ ಬಂದವು. ಈ ದಶಮಾಂಶ ಪದ್ಧತಿಯ ಪೈಸಾ ಹಳೆಯ ಪೈಸಾಕ್ಕಿಂತ ಭಿನ್ನವಾದುದೆಂದು ತೋರಿಸಲು ಇವುಗಳನ್ನು ನಯಾಪೈಸಾ ಎಂದು ಕರೆಯಲಾಯಿತು. ನಯಾಪೈಸಾ ರೂಢಿಯಾದ ನಂತರ ೧೯೬೪ರಲ್ಲಿ ಇವುಗಳನ್ನು ಪೈಸಾ ಎಂದು ಕರೆಯಲಾಯಿತು.

## ಸಹಕಾರ ಚಳವಳಿ

ಭಾರತದಲ್ಲಿ ಕಾನೂನಿನ ಚೌಕಟ್ಟಿನಡಿಯಲ್ಲಿ ೧೯೦೪ರಲ್ಲಿ ಸಹಕಾರ ಚಳವಳಿ ಪ್ರಾರಂಭವಾಗುವ ಒಂದು ದಶಕದ ಮೊದಲೇ, ಅಂದರೆ ೧೮೯೪ರಲ್ಲಿ ಸಹಕಾರಿ ತತ್ವದ ಮೇಲೆ ಕಾರ್ಯನಿರ್ವಹಿಸುವ ರಚನೆಯಲ್ಲಿ ಕೂಡು ಬಂಡವಾಳ ಸಂಸ್ಥೆಗಳನ್ನು ಹೋಲುವ “ವ್ಯವಸಾಯ ಬ್ಯಾಂಕುಗಳು” ಎಂಬ ಮಿಶ್ರ ಮಾದರಿಯ ಬ್ಯಾಂಕುಗಳನ್ನು ಸ್ಥಾಪಿಸಿದ ಕೀರ್ತಿ ಅಂದಿನ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಸಣ್ಣ ಮತ್ತು ಬಡ ರೈತರಿಗೆ ಸರಳವಾಗಿ ವ್ಯವಸಾಯ ಸಾಲವನ್ನು ಒದಗಿಸುವುದು ಈ ಬ್ಯಾಂಕುಗಳ ಪ್ರಮುಖ ಉದ್ದೇಶವಾಗಿತ್ತು. ಕೋಲಾರ ಜಿಲ್ಲೆಯಲ್ಲೂ ಈ ಮಾದರಿಯ ಬ್ಯಾಂಕುಗಳಿದ್ದವು. ಆದರೆ ಅವು ಸಮರ್ಪಕವಾಗಿ ಕಾರ್ಯನಿರ್ವಹಿಸದ ಕಾರಣ, ಕೆಲವು ವರ್ಷಗಳ ನಂತರ ವಿಸರ್ಜನೆಗೊಂಡವು.

ಭಾರತದ ೧೯೦೪ರ ಸಹಕಾರ ಸಂಘಗಳ ಕಾನೂನಿನ ಮಾದರಿಯಲ್ಲೇ ಅಂದಿನ ಮೈಸೂರು ಸಂಸ್ಥಾನದಲ್ಲೂ ಮೈಸೂರು ಸಹಕಾರಿ ಸಂಘಗಳ ಕಾಯ್ದೆ (ರೆಗ್ಯುಲೇಷನ್ ೩)ಯನ್ನು ೧೯೦೫ರಲ್ಲಿ ಜಾರಿಗೊಳಿಸಲಾಯಿತು. ಮೈಸೂರಿನ ಈ ಸಹಕಾರಿ ಕಾನೂನು ಭಾರತದ ೧೯೦೪ರ ಕಾನೂನಿಗಿಂತಲೂ ಹೆಚ್ಚು ವ್ಯಾಪಕ ಮತ್ತು ಪ್ರಗತಿಪರವಾಗಿತ್ತು. ಭಾರತದ ಮೊದಲ ಸಹಕಾರಿ ಕಾನೂನು ಪತ್ತಿನ ಸಂಘಗಳಲ್ಲದೆ ಮತ್ತಾವ ಬಗೆಯ ಸಂಘಗಳ ಸಂಘಟನೆಗೆ ಅವಕಾಶ ನೀಡದಿದ್ದಾಗ, ಮೈಸೂರಿನ ಕಾನೂನು ವ್ಯವಸಾಯೇತರ ಮತ್ತು ಸಾಲೇತರ ಸಂಘಗಳ ಸ್ಥಾಪನೆಗೂ ಅವಕಾಶ ನೀಡಿದುದು ಒಂದು ಗಮನಾರ್ಹ ಅಂಶವಾಗಿತ್ತು. ೧೯೦೫ರ ಸಹಕಾರಿ ಕಾಯ್ದೆಯನ್ನು ಕ್ರಮಬದ್ಧವಾಗಿ ಜಾರಿಗೆ ತರುವ ಸಲುವಾಗಿ ೧೯೦೫ರಲ್ಲೇ ತಾತ್ಕಾಲಿಕವಾಗಿ ಸಹಕಾರ ಸಂಘಗಳ ನಿಬಂಧಕರನ್ನು ನೇಮಿಸಲಾಯಿತು. ೧೯೧೨ರಲ್ಲಿ ಆ ನೇಮಕಾತಿಯನ್ನು ಖಾಯಂಗೊಳಿಸಿ ಮುಂದುವರಿಸಲಾಯಿತು. ಇದಕ್ಕೂ ಪೂರ್ವದಲ್ಲಿ ೧೯೦೭ರ ಸುಮಾರಿಗೆ ಯೂರೋಪ್, ಇಂಗ್ಲೆಂಡ್ ದೇಶಗಳಿಗೆ ಸಹಕಾರದ ಅಧ್ಯಯನ ಕೈಗೊಳ್ಳಲು ಅಧಿಕಾರಿಗಳನ್ನು ಕಳುಹಿಸಿಕೊಡಲಾಗಿತ್ತು. ಪ್ರಾರಂಭದಿಂದಲೂ ವ್ಯವಸಾಯ ಪತ್ತಿನ ಸಂಘಗಳ ಜೊತೆಜೊತೆಯಾಗಿ ನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಮತ್ತು ಪತ್ತೇತರ ಸಹಕಾರ ಸಂಘಗಳ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಲಾಯಿತು. ಇದರಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಹಕಾರ ಚಳವಳಿ ವ್ಯಾಪಕವಾಗಿ ಬೆಳೆಯಲು ಅನುಕೂಲವಾಯಿತು. ಸಹಕಾರಿ ಸಂಘಗಳ ಸಂಘಟನೆ, ಮೇಲ್ವಿಚಾರಣೆ ಮತ್ತು ಅವುಗಳಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ೧೯೧೦ರಲ್ಲಿ ನಿವೃತ್ತ ಕಂದಾಯ ಇಲಾಖೆಯ ನೌಕರರ ಸೇವೆಯನ್ನು ಬಳಸಿಕೊಂಡು, ಅವರನ್ನು ‘ಗೌರವ ಮೇಲ್ವಿಚಾರಕರೆಂದು’ ಕರೆದು, ಗ್ರಾಮೀಣ ಪ್ರದೇಶದ ಪ್ರತಿ ದಿನದ ಸಹಕಾರಿ

ಕೆಲಸಕ್ಕಾಗಿ ಅವರಿಗೆ ಒಂದು ರೂಪಾಯಿ ಸಂಭಾವನೆಯನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಮುಂದೆ ಈ ಪ್ರಯತ್ನದ ಫಲವಾಗಿ ವ್ಯವಸಾಯ ಪತ್ತಿನ, ವ್ಯವಸಾಯೇತರ ಪತ್ತಿನ ಮತ್ತು ಪತ್ತೇತರ ಸಹಕಾರ ಸಂಘಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬೆಳೆದು ಬರುವಂತಾಯಿತು.

ಕೋಲಾರ ಜಿಲ್ಲೆಯಲ್ಲಿ ೧೯೧೦-೧೧ರವರೆಗೆ ಮಂದಗತಿಯಲ್ಲಿ ಸಾಗಿದ ಸಹಕಾರ ಸಂಘಗಳ ಪ್ರಗತಿ ನಂತರದ ೫ ವರ್ಷಗಳಲ್ಲಿ ತೀವ್ರಗತಿಯಲ್ಲಿ ಮುನ್ನಡೆಯಿತು. ಈ ಜಿಲ್ಲೆಯಲ್ಲಿ ಮೊಟ್ಟ ಮೊದಲ ಸಹಕಾರಿ ಸಂಘ ಸ್ಥಾಪನೆಯಾದದ್ದು ೧೯೦೭-೦೮ರಲ್ಲಿ. ಮುಂದಿನ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಒಂದೊಂದು ಸಹಕಾರಿ ಸಂಘ ಸ್ಥಾಪನೆಯಾಗಿ ಜಿಲ್ಲೆಯಲ್ಲಿ ೧೯೧೦-೧೧ರವರೆಗೆ ಕೇವಲ ನಾಲ್ಕು ಸಹಕಾರ ಸಂಘಗಳನ್ನು ಸಂಘಟಿಸಲಾಗಿತ್ತು. ಮುಂದೆ ೧೯೧೧-೧೨ರಲ್ಲಿ ೧೯; ೧೯೧೨-೧೩ ರಲ್ಲಿ ೩೫; ೧೯೧೩-೧೪ರಲ್ಲಿ ೬೦; ೧೯೧೪-೧೫ರಲ್ಲಿ ೭೫ ಸಹಕಾರ ಸಂಘಗಳು ಈ ಜಿಲ್ಲೆಯಲ್ಲಿದ್ದವು. ೧೯೧೯-೨೦ರ ವೇಳೆಗೆ ಜಿಲ್ಲೆಯಲ್ಲಿದ್ದ ಸಹಕಾರ ಸಂಘಗಳ ಸಂಖ್ಯೆ ೧೫೭ಕ್ಕೆ ಏರಿತು.

೧೯೦೮ರಲ್ಲಿ ಬೆಂಗಳೂರು ಕೇಂದ್ರ ಸಹಕಾರಿ ಬ್ಯಾಂಕನ್ನು (ಬೆಂಗಳೂರ್ ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕ್) ಸ್ಥಾಪಿಸಿ ಸಂಸ್ಥಾನದ ಎಲ್ಲ ಸದಸ್ಯ ಸಹಕಾರಿ ಸಂಘಗಳ ಮೂಲಕ ರೈತರಿಗೆ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಇದೇ ಮಾದರಿಯ ಮತ್ತೊಂದು ಸಹಕಾರಿ ಬ್ಯಾಂಕಾದ "ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕ್"ಅನ್ನು ೧೯೧೫ರಲ್ಲಿ ಬೆಂಗಳೂರಿನಲ್ಲೇ ಸ್ಥಾಪಿಸಲಾಗಿ, ಕೇಂದ್ರ ಬ್ಯಾಂಕಿನ ವ್ಯಾಪ್ತಿ ಕೋಲಾರ, ಬೆಂಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸೀಮಿತಗೊಂಡಿತು. ಪ್ರಾಥಮಿಕ ಸಹಕಾರಿ ಸಂಘಗಳು ಮತ್ತು ಕೇಂದ್ರ ಬ್ಯಾಂಕಿನ (ಸಾಲ ಒದಗಿಸುವ ಬ್ಯಾಂಕ್) ನಡುವೆ ಸಂಪರ್ಕ ಏರ್ಪಡಿಸುವ ಉದ್ದೇಶದಿಂದ "ಯೂನಿಯನ್"ನಂತಹ ಮಧ್ಯವರ್ತಿ ಸಂಸ್ಥೆಗಳನ್ನು ಸಂಘಟಿಸುವ ಯೋಜನೆಯನ್ನು ೧೯೧೨-೧೩ರಲ್ಲಿ ಹಾಕಿಕೊಳ್ಳಲಾಯಿತು. ರಾಜ್ಯದಲ್ಲಿ ೧೯೧೩-೧೪ರ ಅವಧಿಯಲ್ಲಿ ಬಹಳಷ್ಟು ಇಂತಹ ಯೂನಿಯನ್‌ಗಳು ಸ್ಥಾಪನೆಯಾದವು. ಈ ಯೂನಿಯನ್‌ಗಳು ತಮ್ಮ ವ್ಯಾಪ್ತಿಯಲ್ಲಿನ (ಸಾಮಾನ್ಯವಾಗಿ ಒಂದು ಅಥವಾ ಎರಡು ತಾಲೂಕು) ಸಹಕಾರ ಸಂಘಗಳಿಗೆ ಸಾಲ ದೊರಕಿಸಿಕೊಡುವ ವ್ಯವಸ್ಥೆಯಲ್ಲದೇ, ಸಂಘಗಳ ಮೇಲ್ವಿಚಾರಣೆ ಕಾರ್ಯವನ್ನು ನಡೆಸುತ್ತಿದ್ದವು. ಸೀಮಿತ ಕಾರ್ಯವ್ಯಾಪ್ತಿಯಿಂದಾಗಿ ಈ ಯೂನಿಯನ್‌ಗಳು ಪ್ರಗತಿ ಹೊಂದದ ಕಾರಣ, ಕೆಲವರ್ಷಗಳ ನಂತರ ಅವನ್ನು ವಿಸರ್ಜಿಸಲಾಯಿತು.

ಸಹಕಾರ ಚಳವಳಿಯ ಪ್ರಗತಿಯನ್ನು ವಿಮರ್ಶಿಸಿ ಮುಂದಿನ ಬೆಳವಣಿಗೆಯ ರೂಪರೇಷೆಯನ್ನು ಸೂಚಿಸಲು ಸರ್ಕಾರ ೧೯೨೦ರಲ್ಲಿ ಲಲೂಭಾಯ್ ಸಮಲ್‌ದಾಸ್ ಮೆಹತ ಸಮಿತಿಯನ್ನು ರಚಿಸಿತು. ಈ ಸಮಿತಿಯು ಸಲ್ಲಿಸಿದ ವರದಿಯ ಅನ್ವಯ ಸರ್ಕಾರ ರಾಜ್ಯದಲ್ಲಿ ೧೯೨೫ರಿಂದ ಸಾಲೇತರ ಸಹಕಾರ ಸಂಘಗಳ ರಚನೆಗೆ ಮತ್ತು ಮುಖ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಸಂಘಟನೆಗೆ ಉತ್ತೇಜನ ನೀಡಿತು. ಅಲ್ಲದೇ ರೈತರಿಗೆ ಋಣ ವಿಮೋಚನಾ ಸಾಲಗಳನ್ನು ದೊರಕಿಸುವ ಉದ್ದೇಶದಿಂದ ೧೯೨೯ರಲ್ಲಿ ಭೂ ಅಡಮಾನ ಬ್ಯಾಂಕನ್ನು ಸಹಕಾರ ತಳಹದಿಯ ಮೇಲೆ ಸಂಘಟಿಸಲು ಮುಂದಾಯಿತು. ಸಮಿತಿಯ ಶಿಫಾರಸ್ಸಿನ ಮೇರೆಗೆ ಮೈಸೂರು ಪ್ರಾವಿನ್‌ಶಿಯಲ್ ಕೋ-ಆಪರೇಟಿವ್ ಬ್ಯಾಂಕನ್ನು ಅಪೆಕ್ಸ್ ಬ್ಯಾಂಕಾಗಿ ಪುನರ್‌ರಚಿಸಲಾಯಿತು. ಅಂತೆಯೇ ಸಹಕಾರ ತತ್ವದ ಪ್ರಚಾರಕ್ಕಾಗಿ ಪ್ರಾಂತೀಯ ಸಹಕಾರಿ ಪ್ರಚಾರ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಸಹಕಾರ ಚಳವಳಿಯ ಪುನಶ್ಚೇತನಕ್ಕಾಗಿ ಕೈಗೊಳ್ಳಲಾದ ಕ್ರಮಗಳ ಫಲವಾಗಿ ೧೯೨೫-೨೬ರ ನಂತರ ಸಹಕಾರ ಸಂಘಗಳು ಚೇತರಿಸಿಕೊಂಡವು. ಪ್ರಾಂತೀಯ ಸಹಕಾರಿ ಪ್ರಚಾರ ಸಂಸ್ಥೆ ಸಹ ಪರಿಣಾಮಕಾರಿಯಾಗಿ

ಕೆಲಸ ಮಾಡಲು ಪ್ರಾರಂಭಿಸಿತು. ೧೯೨೮-೨೯ರಲ್ಲಿ ವ್ಯವಸಾಯ ಸಂಘಗಳನ್ನು ಕೇವಲ ಸಾಲ ವಿತರಣೆ ಕಾರ್ಯವಲ್ಲದೇ ರೈತರಿಗೆ ಬೇಕಾಗುವ ಸುಧಾರಿತ ಕೃಷಿ ಉಪಕರಣಗಳು, ಬಿತ್ತನೆ ಬೀಜ ಹಾಗೂ ಗೊಬ್ಬರ ವಿತರಣೆ ಕಾರ್ಯವನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಲಾಯಿತು.

೧೯೨೯-೩೦ರಲ್ಲಿ ತಲೆದೋರಿದ ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಹಕಾರಿ ಆಂದೋಲನದ ಪ್ರಗತಿಯು ಕುಂಠಿತವಾಯಿತು. ವ್ಯವಸಾಯ ಹುಟ್ಟುವಳಿಗಳ ಬೆಲೆ ಕುಸಿದು, ರೈತರು ಸಹಕಾರ ಸಂಘಗಳ ಸಾಲವನ್ನು ತೀರಿಸುವಲ್ಲಿ ಅಸಮರ್ಥರಾದ ಕಾರಣ, ಸಂಘಗಳಲ್ಲಿ ಸುಸ್ತಿ ಬಾಕಿಯು ಹೆಚ್ಚಿತು. ಕೆಲವು ಸಂಘಗಳು ಮುಚ್ಚಿದವು. ಸರ್ಕಾರ ಸಹಕಾರ ಚಳವಳಿಯ ಪುನಶ್ಚೇತನಕ್ಕಾಗಿ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಅದಕ್ಕಾಗಿ ಸರ್ಕಾರ ೧೯೩೫ರಲ್ಲಿ ಕೆ.ಎಸ್.ಚಂದ್ರಶೇಖರ ಅಯ್ಯರ್ ಸಮಿತಿಯನ್ನು ರಚಿಸಿತು. ಈ ಸಮಿತಿಯ ಶಿಫಾರಸ್ಸುಗಳನ್ವಯ ಸಹಕಾರ ಚಳವಳಿಯ ಪುನಶ್ಚೇತನಕ್ಕಾಗಿ ಕ್ರಮಗಳನ್ನು ಕೈಗೊಳ್ಳಲಾಯಿತು. ಅಷ್ಟರಲ್ಲೇ (೧೯೩೯) ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾದ ಕಾರಣ, ಕೃಷಿ ಉತ್ಪನ್ನಗಳ ಬೆಲೆಗಳು ಏರತೊಡಗಿದವು. ಈ ಕಾರಣದಿಂದಾಗಿ ಯುದ್ಧ ಕಾಲದಲ್ಲಿ ಮತ್ತು ಯುದ್ಧಾನಂತರದ ದಿನಗಳಲ್ಲಿ ರೈತರ ಆರ್ಥಿಕ ಸ್ಥಿತಿ ಸುಧಾರಿಸಿತು. ರೈತರು ಸಹಕಾರಿ ಸಾಲ ತೀರಿಸಲು ಸಮರ್ಥರಾದ ಕಾರಣ, ಪ್ರಾಥಮಿಕ ವ್ಯವಸಾಯ ಸಂಘಗಳ ಸ್ಥಿತಿಯೂ ಸುದಾರಿಸುವಂತಾಯಿತು. ಇದೇ ಅವಧಿಯಲ್ಲಿ ಗ್ರಾಹಕ ವಸ್ತುಗಳ ಏರುತ್ತಿದ್ದ ಬೆಲೆಗಳನ್ನು ನಿಯಂತ್ರಿಸಲು ಸಹಾಯಕವಾಗುವಂತೆ ಗ್ರಾಹಕರ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು.

ರೈತರಿಗೆ ಋಣ ವಿಮೋಚನಾ ಸಾಲಗಳನ್ನು ವಿತರಿಸುವ ಉದ್ದೇಶದಿಂದ ಗೌರಿಬಿದನೂರಿನಲ್ಲಿ ಜಿಲ್ಲೆಯ ಮೊದಲ ಪ್ರಾಥಮಿಕ ಜಮೀನು ಅಡಮಾನ ಬ್ಯಾಂಕನ್ನು ೧೯೩೩ರಲ್ಲಿ ಸಂಘಟಿಸಲಾಯಿತು. ನಂತರ ೧೯೩೪ರಲ್ಲಿ ಚಿಕ್ಕಬಳ್ಳಾಪುರದಲ್ಲೂ ಮತ್ತು ೧೯೩೫ರಲ್ಲಿ ಕೋಲಾರದಲ್ಲೂ ಇದೇ ಮಾದರಿಯ ಸಹಕಾರಿ ಸಂಸ್ಥೆಗಳು ಸ್ಥಾಪನೆಯಾದವು. ವ್ಯವಸಾಯೇತರ ಸಾಲ ಕ್ಷೇತ್ರದಲ್ಲಿ ಮೊಟ್ಟ ಮೊದಲ ಸಹಕಾರ ಬ್ಯಾಂಕನ್ನು ೧೯೩೪ರಲ್ಲಿ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ (ಕೆ.ಜಿ.ಎಫ್) ಸಂಘಟಿಸಲಾಯಿತು. ಜಿಲ್ಲೆಯಲ್ಲಿ ೧೯೩೬-೩೭ರಲ್ಲಿ ಒಟ್ಟು ೧೯೮ ಸಹಕಾರ ಸಂಘಗಳಿದ್ದವು. ಅವುಗಳು ಹೊಂದಿದ್ದ ಸದಸ್ಯರ ಸಂಖ್ಯೆ ೧೨೦೪೦ ಮತ್ತು ದುಡಿಯುವ ಬಂಡವಾಳ ರೂ.೧೨೬೧೪೯೮ ಆಗಿದ್ದಿತು. ೧೯೪೫-೪೬ಕ್ಕೆ ಒಟ್ಟು ಸಹಕಾರ ಸಂಘಗಳ ಸಂಖ್ಯೆ ೨೫೫ ಆಗಿದ್ದಿತು. ಅವುಗಳಲ್ಲಿನ ಸದಸ್ಯರ ಸಂಖ್ಯೆ ೧೫೬೦೮, ದುಡಿಯುವ ಬಂಡವಾಳ ರೂ.೧೫೫೦೭೪೯ ಮತ್ತು ಅವುಗಳ ವಹಿವಾಟಿನ ಮೌಲ್ಯ ರೂ.೮೪೯೧೦೫೨ ಆಗಿದ್ದಿತು.

ಸ್ವಾತಂತ್ರ್ಯೋತ್ತರ ದಶಕಗಳಲ್ಲಿ ರಚನೆಗೊಂಡ ಜನಪ್ರಿಯ ಸರ್ಕಾರಗಳು ಅನೇಕ ಹೊಸ ಆಯಾಮಗಳನ್ನು ಅಳವಡಿಸಿಕೊಂಡುದರಿಂದ ಸಹಕಾರ ಚಳವಳಿ ಜನತೆಯ ಚಳವಳಿಯಾಗಿ ರೂಪುಗೊಂಡು ಮುಂದುವರಿಯಿತು. ಸರ್ಕಾರದ ಬಂಡವಾಳ ಮತ್ತು ಇತರ ನೆರವಿನ ಪ್ರಮಾಣ ವರ್ಧಿಸಿದಂತೆ ಆಡಳಿತದಲ್ಲಿ ಹೆಚ್ಚಿನ ದಕ್ಷತೆಯನ್ನು ಸಾಧಿಸಲು ಸೂಕ್ತ ಬದಲಾವಣೆಗಳನ್ನು ಮಾಡಲಾಯಿತು. ಸರ್ಕಾರದ ಬದಲಾದ ಧೋರಣೆಯಂತೆ, ೧೯೪೯ರಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸುವುದರ ಜೊತೆಗೆ, ಆ ಮೊದಲೇ ಇದ್ದ ವ್ಯವಸಾಯ ಪತ್ತಿನ ಸಂಘಗಳನ್ನು ವಿವಿಧೋದ್ದೇಶ ಸಂಘಗಳನ್ನಾಗಿ ಪರಿವರ್ತಿಸಲು ಹೆಚ್ಚಿನ ಆದ್ಯತೆ ನೀಡಲಾಯಿತು. ಅದರಂತೆ ಕೋಲಾರ ಜಿಲ್ಲೆಯಲ್ಲಿ ಅನೇಕ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ೧೯೫೧ರಿಂದ ಪ್ರಾರಂಭವಾದ ಆರ್ಥಿಕ ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಅದರ ಅನ್ವಯ ಕೃಷಿ ಮತ್ತು ಕೃಷಿಯೇತರ ಸಾಲ ನೀಡುವ ಮತ್ತು ಸಾಲದ ವ್ಯವಹಾರ ಮಾಡದ ಸಹಕಾರ ಸಂಘಗಳನ್ನು ಸರ್ಕಾರದ ಸಕ್ರಿಯ ಸಹಾಯದಿಂದ ಅಭಿವೃದ್ಧಿಪಡಿಸಲಾಯಿತು.

ಇದರಿಂದ ಮುಂದಿನ ದಶಕಗಳಲ್ಲಿ ಸಹಕಾರಿ ಆಂದೋಲನವು ಭೌಗೋಳಿಕವಾಗಿ ಹೆಚ್ಚು ವ್ಯಾಪಿಸಿಕೊಂಡಿತಲ್ಲದೇ, ಗುಣಾತ್ಮಕವಾಗಿ ಬೆಳೆಯಲು ಸಹಾಯಕವಾಯಿತು. ಸರ್ಕಾರದ ಪ್ರೋತ್ಸಾಹವೂ ಹೆಚ್ಚುತ್ತಾ ಹೋಯಿತು. ಸಹಕಾರ ಸಂಘಗಳಿಗೆ ಅಲ್ಪಾವಧಿ ಬೆಳೆ ಸಾಲ ಮತ್ತು ಮಧ್ಯಮಾವಧಿ ಸಾಲವನ್ನು ಆದಷ್ಟು ಬೇಗನೆ ಒದಗಿಸುವ ಉದ್ದೇಶದಿಂದ ಪ್ರಥಮ ಬಾರಿಗೆ ಜಿಲ್ಲೆಯ ಕಾರ್ಯಕ್ಷೇತ್ರವನ್ನು ಹೊಂದಿದಂತೆ ಜಿಲ್ಲಾ ಕೇಂದ್ರ ಬ್ಯಾಂಕ್‌ಅನ್ನು ೧೯೫೪ರ ಅಂತ್ಯದಲ್ಲಿ ಕೋಲಾರದಲ್ಲಿ ಸ್ಥಾಪಿಸಲಾಯಿತು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಹೊಸ ಸಹಕಾರ ನೀತಿಯನ್ವಯ ಸೇವಾ ಸಹಕಾರ ಸಂಘಗಳ ಯುಗ ಪ್ರಾರಂಭವಾದ ಕಾರಣ, ೧೯೫೯–೬೦ ರಿಂದ ವಿವಿಧೋದ್ದೇಶ/ದೊಡ್ಡ ಪ್ರಮಾಣದ ಸಹಕಾರ ಸಂಘಗಳ ಸಂಘಟನಾ ಕಾರ್ಯವನ್ನು ನಿಲ್ಲಿಸಿ, ಜಿಲ್ಲೆಯಾದ್ಯಂತ ಸೇವಾ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ (೧೯೬೧ ರ ಮಾರ್ಚ್ ಅಂತ್ಯಕ್ಕೆ) ಕೋಲಾರ ಜಿಲ್ಲೆಯಲ್ಲಿ ಒಟ್ಟು ೭೦೭ ವಿವಿಧ ಬಗೆಯ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ೩೧ ಪ್ರಾಥಮಿಕ ದೊಡ್ಡ ಪ್ರಮಾಣದ ಸಹಕಾರ ಸಂಘಗಳು, ೨೫೬ ಸೇವಾ ಸಹಕಾರ ಸಂಘಗಳು, ೧೮೪ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘಗಳು, ೧೦ ಜಮೀನು ಅಡಮಾನ ಬ್ಯಾಂಕುಗಳು, ಹನ್ನೊಂದು ತಾಲೂಕು ಮಟ್ಟದ ಪ್ರಾಥಮಿಕ ವ್ಯವಸಾಯ ಹುಟ್ಟುವಳಿ ಮಾರಾಟ ಸಂಘಗಳನ್ನೊಳಗೊಂಡಂತೆ ಒಟ್ಟು ೨೧ ಮಾರಾಟ ಸಹಕಾರ ಸಂಘಗಳು, ೧೪ ಗೃಹ ನಿರ್ಮಾಣ ಸಹಕಾರ ಸಂಘಗಳು,೬ ಗ್ರೇನ್ ಬ್ಯಾಂಕುಗಳು, ೬೩ ವ್ಯವಸಾಯೇತರ ಸಾಲ ಸಹಕಾರ ಸಂಘಗಳು, ನಾಲ್ಕು ಬೇಸಾಯ ಸಹಕಾರ ಸಂಘಗಳು, ಎರಡು ಹಾಲು ಸರಬರಾಜು ಸಹಕಾರ ಸಂಘಗಳು, ಹತ್ತು ಗ್ರಾಹಕರ ಸಂಘಗಳು, ಒಂದು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಒಂದು ಜಿಲ್ಲಾ ಸಹಕಾರಿ ಯೂನಿಯನ್, ಹನ್ನೊಂದು ತಾಲೂಕು ಸೂಪರ್‌ವೈಸಿಂಗ್ ಯೂನಿಯನ್‌ಗಳು, ೩೦ ನೇಕಾರರ ಸಂಘಗಳು ಹಾಗೂ ೬೩ ಕೈಗಾರಿಕಾ ಸಹಕಾರ ಸಂಘಗಳು ಆಗಿದ್ದವು.

ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸಹಕಾರಿ ಸಂಘಗಳ ಸಂಖ್ಯೆ, ಸದಸ್ಯತ್ವ, ವೃದ್ಧಿಸುತ್ತಿರುವ ಸರ್ಕಾರದ ಪಾಲು ಬಂಡವಾಳ, ಸಹಾಯಧನ, ಇದರೊಂದಿಗೆ ಬೆಳೆಯುತ್ತಿರುವ ಅವ್ಯವಹಾರದ ಪ್ರಮಾಣ ಮುಂತಾದವುಗಳನ್ನು ಗುರುತಿಸಿ, ಆಡಳಿತದಲ್ಲಿ ದಕ್ಷತೆ ಹಾಗೂ ವಿಕೇಂದ್ರೀಕರಣ ಸಾಧಿಸಲು, ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯನ್ನು (ಜಿಲ್ಲಾಕಚೇರಿ) ಕೋಲಾರದಲ್ಲಿ ೧೯೬೭ರಲ್ಲಿ ಸ್ಥಾಪಿಸಲಾಯಿತು. ಈ ಕಚೇರಿ ಸ್ಥಾಪನೆಗೂ ಪೂರ್ವದಲ್ಲಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಜಿಲ್ಲಾ ಸಹಕಾರ ಇಲಾಖೆಯ ಮುಖ್ಯಸ್ಥರಾಗಿದ್ದರು. ಸಹಕಾರ ಸಂಘಗಳ ಉಪನಿಬಂಧಕರ ಅಧೀನದಲ್ಲಿ ಕೋಲಾರ (ವ್ಯಾಪ್ತಿ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲೂಕುಗಳು) ಹಾಗೂ ಚಿಕ್ಕಬಳ್ಳಾಪುರ (ವ್ಯಾಪ್ತಿ ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲೂಕುಗಳು)ಗಳಲ್ಲಿ ಸಹಾಯಕ ನಿಬಂಧಕರ ನೇತೃತ್ವದ ಉಪ–ವಿಭಾಗಾ ಕಚೇರಿಗಳೂ ಕಾರ್ಯನಿರ್ವಹಿಸುತ್ತಿವೆ.

ಕೋಲಾರ ಜಿಲ್ಲೆಯಲ್ಲಿ ೧೯೬೫ರ ಜೂನ್ ಅಂತ್ಯಕ್ಕೆ ಒಟ್ಟು ೮೭೮ ವಿವಿಧ ಬಗೆಯ ಸಹಕಾರ ಸಂಘಗಳಿದ್ದವು. ಅವುಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೧೯೦೯೧೧ ಇದ್ದಿತು. ಪಾಲು ಬಂಡವಾಳ ರೂ.೧೧೯.೧೭ ಲಕ್ಷ, ಠೇವುಗಳು ರೂ..೪೦.೩೦ ಲಕ್ಷ, ಕಾಯ್ದಿಟ್ಟ ನಿಧಿ ರೂ.೩೦.೨೫ ಲಕ್ಷ, ಇತರ ನಿಧಿಗಳು ರೂ.೩.೧೧ ಲಕ್ಷ, ಸಾಲ–ಮುಂಗಡಗಳು ರೂ.೧೫೩.೪೦ ಲಕ್ಷ, ವಸೂಲಾದ ಸಾಲ ರೂ.೧೪೬.೯ ಲಕ್ಷ, ಬಾಕಿ ಇದ್ದ ಸಾಲ ರೂ.೨೬೩.೧೧ ಲಕ್ಷ, ಅವಧಿ ಮೀರಿದ ಸಾಲ ರೂ.೧೪೧.೪೮

ಲಕ್ಷ ಮತ್ತು ಗಳಿಸಿದ ಲಾಭ ರೂ.೬.೨೯ ಲಕ್ಷ ಆಗಿದ್ದಿತು. ಮುಂದೆ ೧೯೭೧ರ ಜೂನ್ ಅಂತ್ಯದಲ್ಲಿದ್ದಂತೆ ಜಿಲ್ಲೆಯಲ್ಲಿನ ಒಟ್ಟು ಸಹಕಾರ ಸಂಘಗಳ ವಿವರವನ್ನು ಕೋಷ್ಟಕ ೬.೮ರಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೮ : ೧೯೭೧ರ ಜೂನ್ ಅಂತ್ಯದಲ್ಲಿದ್ದಂತೆ ಜಿಲ್ಲೆಯಲ್ಲಿನ ಒಟ್ಟು ಸಹಕಾರ ಸಂಘಗಳ ವಿವರ**

(ಮೊತ್ತ ಲಕ್ಷ ರೂ.ಗಳಲ್ಲಿ)

| ವಿವರ<br>ದುಡಿಯುವ<br><br>ಬಂಡವಾಳ | ಸಂಘಗಳ<br>ಕೊಟ್ಟ<br>ಸಂಖ್ಯೆ<br>ಸಾಲ | ಸದಸ್ಯರು<br>ಲಾಭ<br>(ಸಾವಿರ) | ಷೇರು<br><br>ಬಂಡವಾಳ | ಠೇವುಗಳು |
|---|---|---|---|---|
| ಪ್ರಾಥಮಿಕ ವ್ಯವಸಾಯ | | | | |
| ಪತ್ತಿನ ಸಹಕಾರ ಸಂಘಗಳು | ೪೬೯ | ೧೦೪ | ೩೬.೩ | ೩.೦೦ |
| ೧೮೨.೭ | ೫೪.೩ | ೨.೨ | | |
| ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು | ೧೧ | ೩೫ | ೩೦.೩ | – |
| ೪೮೨.೩ | ೮೬.೯ | ೨.೫ | | |
| ವ್ಯವಸಾಯೇತರ ಸಾಲ ಸಂಘಗಳು | ೫೮ | ೨೧ | ೧೦.೮ | ೯.೧ |
| ೪೦.೪ | ೧೯.೫ | ೧.೧ | | |
| ಗೃಹನಿರ್ಮಾಣ ಸಹಕಾರ ಸಂಘಗಳು | ೨೭ | ೧೦ | ೨.೨ | – |
| ೩೫.೦ | – | ೦.೩ | | |

| ವಿವರ<br>ಖರೀದಿ/<br><br>ಉತ್ಪಾದನೆ | ಸಂಘಗಳ<br>ಮಾರಾಟ<br>ಸಂಖ್ಯೆ | ಸದಸ್ಯರು<br>ಲಾಭ<br>(ಸಾವಿರ) | ಷೇರು<br><br>ಬಂಡವಾಳ | ದುಡಿಯುವ<br><br>ಬಂಡವಾಳ |
|---|---|---|---|---|
| ಪ್ರಾಥಮಿಕ ಮಾರಾಟ ಮತ್ತು | | | | |
| ರೂಪಾಂತರ ಸಂಘಗಳು | ೧೧ | ೯ | ೧೭.೧ | ೪೨.೯ |
| – | – | ೦.೪ | | |
| ಪ್ರಾಥಮಿಕ ಗ್ರಾಹಕರ ಸ್ಟೋರುಗಳು | ೨೮ | ೬ | ೧.೬ | ೩.೨ |
| – | ೭.೭ | ೦.೧ | | |
| ಇತರ ಕೈಗಾರಿಕೆ ಸಂಘಗಳು | ೭೭ | ೧೯ | ೬.೦ | ೩೩.೦ |
| – | – | – | | |
| ಬೇಸಾಯ ಸಂಘಗಳು | ೧೧ | ೦.೩ | ೩.೫ | ೧.೬ |
| – | – | ೦.೦೧ | | |
| ಹಾಲು ಪೂರೈಕೆ ಸಂಘಗಳು | ೫೪ | ೫ | ೨.೪ | ೭.೨ |
| ೧೭.೮ | ೧೯.೩ | ೧.೧ | | |

| | | | | | | | |
|---|---|---|---|---|---|---|---|
| **ಸಕ್ಕರೆ ಕಾರ್ಖಾನೆ** | ೧ | ೫ | ೫೯.೧ | ೩೬೦.೪ | ೦.೦೬ (ಲಕ್ಷ ಟನ್) | – | – |

ಅಲ್ಲದೇ ಐದು ಸಾವಿರ ಸದಸ್ಯರುಳ್ಳ ೩೫ ನೇಕಾರರ ಸಹಕಾರ ಸಂಘಗಳೂ ಜಿಲ್ಲೆಯಲ್ಲಿದ್ದವು

ಆಧಾರ: ಕರ್ನಾಟಕ ಸಹಕಾರಿ ಕೈಪಿಡಿ ೧೯೭೨ ಭಾರತಿ ಪ್ರಕಾಶನ, ಬೆಂಗಳೂರು ೧೧

ಪ್ರಾಥಮಿಕ ವ್ಯವಸಾಯ ಪತ್ತಿನ (ಸಾಲ) ಸಹಕಾರ ಸಂಘಗಳನ್ನು ಬಲಪಡಿಸುವ ಸಲುವಾಗಿ ಮತ್ತು ಅವುಗಳನ್ನು ನಿರ್ವಹಣಾ ಸಾಮರ್ಥ್ಯದ ಆರ್ಥಿಕ ಘಟಕಗಳನ್ನಾಗಿಸಲು ಸರ್ಕಾರ ೧೯೭೬ರಲ್ಲಿ ಹಲವಾರು ಪರಿಣಾಮಕಾರೀ ಕ್ರಮಗಳನ್ನು ತೆಗೆದುಕೊಂಡಿತು. ಅದರಂತೆ ಅನೇಕ ಸಹಕಾರ ಸಂಘಗಳನ್ನು ಅದರಲ್ಲೂ ಪ್ರಮುಖವಾಗಿ ವ್ಯವಸಾಯ ಪತ್ತಿನ ಸಂಘಗಳನ್ನು ವಿಲೀನಗೊಳಿಸಿ ಅವುಗಳನ್ನೂ ಪುನರ್ರಚಿಸಿ ಹೆಚ್ಚು ಬಲಪಡಿಸಲಾಯಿತು. ಇದರಿಂದಾಗಿ ಮುಂದಿನ ವರ್ಷಗಳಲ್ಲಿ ಸಹಕಾರ ಸಂಘಗಳ ಸಂಖ್ಯೆ ಕಡಿಮೆಯಾಯಿತು. ಹೈನುಗಾರಿಕೆಗೆ ದೊರೆತ ಸರ್ಕಾರದ ಪ್ರೋತ್ಸಾಹದಿಂದ ೧೯೭೫–೭೬ರ ನಂತರದ ವರ್ಷಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಬಹು ವ್ಯಾಪಕವಾಗಿ ಸ್ಥಾಪನೆಗೊಂಡವು. ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು ೧೯೮೭ರಲ್ಲಿ ಕೋಲಾರದಲ್ಲಿ ಸ್ಥಾಪಿಸಿ, ಆವರೆಗೆ ಬೆಂಗಳೂರು ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿದ್ದ ಕೋಲಾರ ಜಿಲ್ಲೆಯ ಎಲ್ಲ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಕೋಲಾರ ಹಾಲು ಒಕ್ಕೂಟದ ವ್ಯಾಪ್ತಿಗೆ ಸೇರಿಸಲಾಯಿತು.

ಕೋಲಾರ ಜಿಲ್ಲೆಯಲ್ಲಿ ೧೯೮೦–೮೧ರಲ್ಲಿ ಒಟ್ಟು ೧೦೫೫ ವಿವಿಧ ಬಗೆಯ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ೨೧೨ ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘಗಳು, ೯೩ ಕೈಗಾರಿಕಾ ಸಹಕಾರ ಸಂಘಗಳು ಹಾಗೂ ೩೮೦ ವ್ಯವಸಾಯೇತರ ಪತ್ತಿನ ಸಂಘಗಳಾಗಿದ್ದವು. ಉಳಿದ ಸಹಕಾರ ಸಂಘಗಳನ್ನು ಪರಿಸಮಾಪ್ತಿ ಗೊಳಿಸಲಾಯಿತು. ೨೧೨ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೨.೯೧ ಲಕ್ಷ ಹಾಗೂ ಸಂದಾಯವಾದ ಷೇರು ಬಂಡವಾಳ ರೂ.೧೨೬.೮೬ ಲಕ್ಷವಿದ್ದು, ೯೩ ಕೈಗಾರಿಕಾ ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೧.೮೧ ಲಕ್ಷ ಮತ್ತು ಸಂದಾಯವಾದ ಷೇರು ಬಂಡವಾಳ ರೂ.೧೩.೭೦ ಲಕ್ಷವಿದ್ದಿತು. ಉಳಿದ ೩೮೦ ವ್ಯವಸಾಯೇತರ ಸಾಲ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೧.೪೨ ಲಕ್ಷ ಆಗಿದ್ದು, ಸಂದಾಯವಾದ ಷೇರು ಬಂಡವಾಳ ರೂ.೧೩೨.೬೫ ಲಕ್ಷ ಆಗಿದ್ದಿತು. ವರ್ಷ ೧೯೮೯–೯೦ರಲ್ಲಿ ಜಿಲ್ಲೆಯಲ್ಲಿ ಒಟ್ಟು ೧೨೫೩ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ೨೧೯ ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘಗಳು, ೩೧ ವ್ಯವಸಾಯೇತರ ಪತ್ತಿನ ಸಂಘಗಳು, ೧೪ ಮಾರುಕಟ್ಟೆ ಸಹಕಾರ ಸಂಘಗಳು, ೭೨೫ ಹಾಲು ಪೂರೈಕೆ ಸಹಕಾರ ಸಂಘಗಳು, ೩೫ ಗೃಹ ನಿರ್ಮಾಣ ಸಹಕಾರ ಸಂಘಗಳು ಮತ್ತು ೨೨೯ ಇತರ ಬಗೆಯ ಸಹಕಾರ ಸಂಘಗಳು ಆಗಿದ್ದವು. ಎಲ್ಲ ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೪೪೫ ಸಾವಿರ ಆಗಿದ್ದಿತು. ಜಿಲ್ಲೆಯ ವ್ಯವಸಾಯ ಪತ್ತಿನ

ಸಂಘಗಳು ವಿತರಿಸಿದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳು ಕ್ರಮವಾಗಿ ೨೪೮ ಲಕ್ಷ ರೂ. ಮತ್ತು ೪೪ ಲಕ್ಷ ರೂ. ಆಗಿದ್ದಿತು. ವರ್ಷ ೨೦೦೩–೨೦೦೪ರಲ್ಲಿ ಜಿಲ್ಲೆಯಲ್ಲಿ ವಿವಿಧ ಬಗೆಯ ಒಟ್ಟು ೨೩೯ ಸಹಕಾರ ಸಂಘಗಳಿದ್ದು, ಅವುಗಳ ವಿವರವನ್ನು ಕೋಷ್ಟಕ ೬.೯ ರಲ್ಲಿ ತೋರಿಸಲಾಗಿದೆ. ಜಿಲ್ಲೆಯ ವ್ಯವಸಾಯ ಪತ್ತಿನ ಸಂಘಗಳು ೨೦೦೨–೦೩ರಲ್ಲಿ ವಿತರಿಸಿದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳು ಕ್ರಮವಾಗಿ ೪೩೧೬ ಲಕ್ಷ ರೂ., ೮.೯೭ ಲಕ್ಷ ರೂ. ಮತ್ತು ೮೩.೬೫ ಲಕ್ಷ ರೂ. ಗಳಾಗಿತ್ತು. ೨೦೦೩–೦೪ರಲ್ಲಿನ ಸಾಲಗಳ ಮೊತ್ತ ಕ್ರಮವಾಗಿ ೩೬೬೪.೪೫ ಲಕ್ಷ ರೂ., ೪.೭೫ ಲಕ್ಷ ರೂ. ಹಾಗೂ ೧೫೮.೨೭ ಲಕ್ಷ ರೂ.ಗಳಾಗಿತ್ತು.

## “ಯಶಸ್ವಿನಿ” ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ

ಕರ್ನಾಟಕ ಸರ್ಕಾರ ರಾಜ್ಯದ ಸಹಕಾರಿ ರೈತರಿಗೆ ವಿನೂತನವಾದ “ಯಶಸ್ವಿನಿ” ಎಂಬ ಹೆಸರಿನ ಸಹಕಾರಿ ರೈತರ ಆರೋಗ್ಯ ರಕ್ಷಣೆ ಯೋಜನೆಯನ್ನು ರೂಪಿಸಿದೆ. ಸರ್ಕಾರವು ಗುರುತಿಸಿದ ಸಹಕಾರಿ ಸಂಘಗಳ ರೈತ ಸದಸ್ಯರಿಗೇ ಮೀಸಲಾಗಿರುವ ಈ ಯೋಜನೆಯನ್ನು ದಿನಾಂಕ: ೧–೬–೨೦೦೩ ರಂದು ಜಾರಿಗೊಳಿಸಲಾಯಿತು. ಈ ಯೋಜನೆಯ ಪ್ರಯೋಜನ ಪಡೆಯುವ ಸಹಕಾರಿ ರೈತ ಸದಸ್ಯರು ವಾರ್ಷಿಕವಾಗಿ ೬೦ ರೂ. ವಂತಿಗೆಯನ್ನು ನೀಡಬೇಕಾಗುತ್ತದೆ. ಕೋಲಾರ ಜಿಲ್ಲೆಗೆ ಪೂರಕವಾದಂತೆ ಈ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಪ್ರಸ್ತುತ ೧೩ ಆಸ್ಪತ್ರೆ/ನರ್ಸಿಂಗ್ ಹೋಂಗಳನ್ನು ಗುರುತಿಸಿ, ಅಲ್ಲಿ ಉಚಿತ ಹೊರ ರೋಗಿ ತಪಾಸಣೆ, ರೋಗ ಪತ್ತೆ ಹಚ್ಚುವಿಕೆ ಮತ್ತು ಉಚಿತ ಶಸ್ತ್ರ ಚಿಕಿತ್ಸೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. “ಯಶಸ್ವಿನಿ” ಸಹಕಾರಿ ರೈತರ ಆರೋಗ್ಯ ಯೋಜನೆಯಡಿ ಜಿಲ್ಲೆಯಲ್ಲಿ ೨೦೦೪–೦೫ರಲ್ಲಿ ೧,೯೯,೬೧೦ “ಯಶಸ್ವಿನಿ” ಗುರುತಿನ ಚೀಟಿಗಳನ್ನು ವಿತರಿಸಲಾಗಿದ್ದು, ೧,೨೮೯ ರೈತ ಸದಸ್ಯರಿಗೆ ಉಚಿತ ಶಸ್ತ್ರ ಚಿಕಿತ್ಸೆ ಹಾಗೂ ೩,೩೮೮ ರೈತ ಸದಸ್ಯರಿಗೆ ಉಚಿತ ಹೊರರೋಗಿ ತಪಾಸಣೆ/ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗಿದೆ. ವರ್ಷ ೨೦೦೩–೦೪ರಲ್ಲಿ ವಿತರಿಸಲಾದ ಗುರುತಿನ ಚೀಟಿಗಳ ಸಂಖ್ಯೆ ೩,೨೮೦ ಇದ್ದು, ಉಚಿತ ಶಸ್ತ್ರ ಚಿಕಿತ್ಸೆಗೆ ಒಳಗಾದವರ ಸಂಖ್ಯೆ ೧೦೪೬ ಆಗಿದ್ದು, ಅವರಲ್ಲಿ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾದವರ ಸಂಖ್ಯೆ ೧೦೬ ಆಗಿದ್ದಿತು.

ಕೋಷ್ಟಕ ೬.೯: ವರ್ಷ ೨೦೦೩–೦೪ರಲ್ಲಿದ್ದಂತೆ ಕೋಲಾರ ಜಿಲ್ಲೆಯಲ್ಲಿನ ವಿವಿಧ ಬಗೆಯ ಸಹಕಾರ ಸಂಘಗಳ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರ.ಸಂ. | ವಿವಿಧ ಸಹಕಾರ ಸಂಘಗಳು | ಕಾರ್ಯನಿರತ | ಸ್ಥಗಿತ | ಸಮಾಪನೆಗೊಂಡ | ಒಟ್ಟು |
|---|---|---|---|---|---|
| ೧ | ಜಿಲ್ಲಾ ಸಹಕಾರಿ ಒಕ್ಕೂಟ | ೧ | – | – | ೧ |
| ೨ | ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು | ೧ | – | – | ೧ |
| ೩ | ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು | ೧೦ | – | ೧ | ೧೧ |
| ೪ | ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು | ೧೧ | – | – | ೧೧ |
| ೫ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | ೧೬೪ | ೩ | ೨೦ | ೧೮೭ |
| ೬ | ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು | ೩೬ | ೧ | – | ೩೭ |
| ೭ | ಇತರೆ ಪತ್ತಿನ ಸಹಕಾರ ಸಂಘಗಳು | ೯ | ೨ | – | ೧೧ |
| ೮ | ನೌಕರರ ಪತ್ತಿನ ಸಹಕಾರ ಸಂಘಗಳು | ೧೭ | – | – | ೧೭ |
| ೯ | ಸಹಕಾರಿ ಸಕ್ಕರೆ ಕಾರ್ಖಾನೆ | – | – | ೧ | ೧ |
| ೧೦ | ಸಂಸ್ಕರಣ ಸಹಕಾರ ಸಂಘಗಳು | ೩ | – | ೨ | ೫ |
| ೧೧ | ಲೈವ್‌ಸ್ಟಾಕ್ ಸಹಕಾರ ಸಂಘಗಳು | ೫ | ೩ | ೨ | ೧೦ |

| | | | | | |
|---|---|---|---|---|---|
| ೧೨ | ಹಾಲು ಉತ್ಪಾದಕರ ಸಹಕಾರ ಸಂಘಗಳು | ೧೪೫೨ | ೨೬ | ೧೭ | ೧೪೯೫ |
| ೧೩ | ಸಹಕಾರಿ ಹಾಲು ಒಕ್ಕೂಟ | ೧ | – | – | ೧ |
| ೧೪ | ಸಂಯುಕ್ತ ಬೇಸಾಯ ಸಹಕಾರ ಸಂಘಗಳು | ೧ | ೧ | ೮ | ೧೦ |
| ೧೫ | ಏತ ನೀರಾವರಿ ಸಹಕಾರ ಸಂಘಗಳು | ೪ | ೨ | – | ೬ |
| ೧೬ | ನೀರು ಬಳಕೆದಾರರ ಸಹಕಾರ ಸಂಘಗಳು | – | ೧೦೩ | – | ೧೦೩ |
| ೧೭ | ಮೀನುಗಾರಿಕಾ ಸಹಕಾರ ಸಂಘಗಳು | ೧೩ | ೪ | ೧ | ೧೮ |
| ೧೮ | ನೇಕಾರರ ಸಹಕಾರ ಸಂಘಗಳು | ೩೮ | ೪ | ೬ | ೪೮ |
| ೧೯ | ಇತರೆ ಕೈಗಾರಿಕಾ ಸಹಕಾರ ಸಂಘಗಳು | ೧೦ | ೫ | ೧೨ | ೨೭ |
| ೨೦ | ಕೈಗಾರಿಕಾ ಸಹಕಾರ ಸಂಘಗಳು | ೧೭ | ೯ | ೧೮ | ೪೪ |
| ೨೧ | ಗ್ರಾಹಕರ ಸಹಕಾರ ಸಂಘಗಳು | ೩೭ | ೬ | ೮ | ೫೧ |
| ೨೨ | ಕೇಂದ್ರ ಸಗಟು ಮಾರಾಟ ಮಳಿಗೆ | – | – | ೧ | ೧ |
| ೨೩ | ಗೃಹ ನಿರ್ಮಾಣ ಸಹಕಾರ ಸಂಘಗಳು | ೧೯ | ೧೧ | ೧೨ | ೪೨ |
| ೨೪ | ಕೂಲಿಗಾರರ ಸಹಕಾರ ಸಂಘಗಳು | ೪ | ೧ | ೨ | ೭ |
| ೨೫ | ವಿವಿಧೋದ್ದೇಶ ಸಹಕಾರ ಸಂಘಗಳು | ೧೨ | ೧ | ೧ | ೧೪ |
| ೨೬ | ವಿದ್ಯಾರ್ಥಿ ಗ್ರಾಹಕರ ಸಹಕಾರ ಸಂಘಗಳು | ೩ | – | – | ೩ |
| ೨೭ | ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳು | ೬೭ | ೧೧ | ೬ | ೮೪ |
| ೨೮ | ದರ್ಜಿಗಳ ಸಹಕಾರ ಸಂಘಗಳು | ೧ | – | ೧ | ೨ |
| ೨೯ | ಚರ್ಮ ಹದ ಮಾಡುವವರ ಸಹಕಾರ ಸಂಘಗಳು | – | – | ೨ | ೨ |
| ೩೦ | ವೃಕ್ಷ ಬೆಳೆಗಾರರ ಸಹಕಾರ ಸಂಘಗಳು | ೧೭ | ೧೨ | ೯ | ೩೮ |
| ೩೧ | ಮಡಿವಾಳರ ಸಹಕಾರ ಸಂಘಗಳು | ೨ | – | ೧ | ೩ |
| ೩೨ | ಉಣ್ಣೆನೇಕಾರರ ಸಹಕಾರ ಸಂಘಗಳು | ೬ | ೨ | – | ೮ |
| ೩೩ | ಇತರೆ ಸಹಕಾರ ಸಂಘಗಳು | ೨೬ | ೧೧ | ೩ | ೪೦ |
| | **ಒಟ್ಟು** | **೧೯೮೭** | **೨೧೮** | **೧೩೪** | **೨೩೩೯** |

ಆಧಾರ: ಜಿಲ್ಲಾ ಸಹಕಾರ ಇಲಾಖೆ, ಕೋಲಾರ

ಇತ್ತೀಚಿನ ಕೆಲವು ವರ್ಷಗಳಲ್ಲಿ ಕೋಲಾರ ಜಿಲ್ಲೆಯು ಸಹಕಾರಿ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೦:**

**(ಮೊತ್ತ ಲಕ್ಷ ರೂ.ಗಳಲ್ಲಿ)**

| ವಿವರ | | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧. | **ಒಟ್ಟು ಸಹಕಾರಿ ಸಂಘಗಳು** (ಸಂಖ್ಯೆ) | ೧೭೬೦ | ೨೧೫೫ | ೨೨೯೫ |
| ೨. | **ಸದಸ್ಯರ ಸಂಖ್ಯೆ** (ಸಾವಿರಗಳಲ್ಲಿ) | ೫೮೩ | ೭೨೨ | ೭೩೦ |
| ೩. | **ಒಟ್ಟು ಷೇರು ಬಂಡವಾಳ** | ೭೪೮.೧೭ | ೯೩೫.೯೪ | ೧೨೭೧.೧೨ |
| | **ಸರ್ಕಾರದ ಪಾಲು** (ಒಟ್ಟು ಷೇರು ಬಂಡವಾಳದಲ್ಲಿ) | ೩೧೪.೬೨ | ೪೩೧.೧೭ | ೪೯೧.೦೧ |
| ೪. | **ಕಾಯ್ದಿಟ್ಟ ಹಾಗೂ ಇತರ ನಿಧಿಗಳು** | ೯೦೮.೧೦ | ೧೧೧೭.೮೯ | ೧೬೦೬.೮೩ |

| | | | | |
|---|---|---|---|---|
| ೫. | **ಎರವಲು (ಪಡೆದ ಸಾಲ)** | | | |
| | ಅ. ರಾಜ್ಯ ಸರ್ಕಾರದಿಂದ | ೧೩೫.೧೩ | ೧೮೭.೪೧ | ೧೮೦.೭೧ |
| | ಆ. ಕೇಂದ್ರ ಹಣಕಾಸು ಸಂಸ್ಥೆಗಳಿಂದ | ೬೦೧೪.೧೮ | ೮೩೪೪.೯೦ | ೯೫೧೪.೧೦ |
| | ಇ. ಇತರ ಸಂಸ್ಥೆಗಳಿಂದ | ೩೧೦.೧೭ | ೫೧೨.೧೨ | ೬೧೫.೦೪ |
| ೬. | **ಠೇವಣಿಗಳು** | ೧೪೦.೦೦ | ೨೨೭.೭೨ | ೩೮೭.೮೫ |
| ೭. | **ದುಡಿಯುವ ಬಂಡವಾಳ** | ೭೯೧೮.೧೦ | ೯೧೨೧.೨೮ | ೯೮೧೬.೫೫ |
| ೮. | **ಸಾಲಗಳು** | | | |
| | ಅ. ನೀಡಿಕೆ | ೪೪೧೫.೧೦ | ೬೪೧೩.೬೯ | ೧೦೦೨೫.೯೫ |
| | ಆ. ವಸೂಲಾತಿ | ೨೮೧೪.೧೨ | ೪೧೩೩.೮೮ | ೩೭೯೭.೭೪ |
| | ಇ. ಬಾಕಿ | ೯೪೫೦.೦೦ | ೧೩೮೩೩.೮೪ | ೧೯೩೪೩.೦೦ |
| | ಈ. ಸುಸ್ತಿ ಬಾಕಿ | ೩೮೧೪.೯೦ | ೫೫೭೨.೫೭ | ೮೯೩೧.೦೦ |
| ೯. | **ಲಾಭ** | ೯೫.೧೦ | ೧೫೦.೮೫ | ೧೭೧.೧೨ |
| ೧೦. | **ನಷ್ಟ** | ೧೦೨೫.೧೭ | ೧೭೨೪.೬೪ | ೧೭೬೯.೧೪ |
| ೧೧. | **ಖರೀದಿ** | ೯೭೧೪.೦೦ | ೧೬೯೮.೦೦ | ೧೭೫೧೬.೦೦ |
| ೧೨. | **ಮಾರಾಟ** | ೧೦೦೧೨.೦೦ | ೧೭೧೦೨.೦೦ | ೧೭೮೯೪.೦೦ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಕೋಲಾರ

**ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಕೋಲಾರ**

ಕೃಷಿ ಉದ್ದೇಶಿತ ಸಾಲ ವಿತರಣೆಯಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಪ್ರಮುಖ ಪಾತ್ರವಹಿಸುತ್ತವೆ. ಇವು ಆಯಾ ಜಿಲ್ಲೆಯ ಕೇಂದ್ರ ಸಂಸ್ಥೆಯ ರೀತಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಶಾಖೆಗಳನ್ನು ಹೊಂದಿದ್ದು, ತಮ್ಮ ವ್ಯಾಪ್ತಿಯಲ್ಲಿನ ಪ್ರಾಥಮಿಕ ಸಹಕಾರ ಸಂಘಗಳನ್ನು ಸದಸ್ಯರನ್ನಾಗಿ ಪಡೆದಿರುತ್ತವೆ. ಸಹಕಾರಿ ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುತ್ತವಲ್ಲದೇ ಮುಖ್ಯವಾಗಿ ಕೃಷಿ ಉದ್ದೇಶಿತ ಚಟುವಟಿಕೆಗಳಿಗೆ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲಗಳನ್ನು ವಿತರಿಸುತ್ತವೆ.

ಜಿಲ್ಲೆಯ ಕಾರ್ಯಕ್ಷೇತ್ರವನ್ನು ಹೊಂದಿದಂತೆ ೧೯೫೪ರ ಡಿಸೆಂಬರ್ ೨೪ರಂದು ನೋಂದಣಿಯಾದ ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ೧೯೫೫ರ ಜನವರಿ ೧೮ರಂದು ಕಾರ್ಯಾರಂಭ ಮಾಡಿತು. ಜಿಲ್ಲಾ ಬ್ಯಾಂಕು ಗೌರಿಬಿದನೂರಿನಲ್ಲಿ ತನ್ನ ಮೊದಲ ಶಾಖೆಯನ್ನು ೧೯೫೯ರಲ್ಲಿ ಸ್ಥಾಪಿಸಿತು. ಆ ನಂತರ ಬಾಗೇಪಲ್ಲಿ, ಚಿಂತಾಮಣಿ, ಮುಳಬಾಗಿಲು ಶಾಖೆಗಳನ್ನು ೧೯೬೨ರಲ್ಲೂ, ಚಿಕ್ಕಬಳ್ಳಾಪುರ, ಬಂಗಾರಪೇಟೆ ಶಾಖೆಗಳನ್ನು ೧೯೬೩ರಲ್ಲೂ, ಮಾಲೂರು, ಶ್ರೀನಿವಾಸಪುರ ಶಾಖೆಗಳನ್ನು ೧೯೬೪ರಲ್ಲೂ, ಶಿಡ್ಲಘಟ್ಟ, ಗುಡಿಬಂಡೆ ಶಾಖೆಗಳನ್ನು ೧೯೬೫ರಲ್ಲೂ, ರಾಬರ್ಟ್‌ಸನ್ ಪೇಟೆಯ ಕೆ.ಜಿ.ಎಫ್. ಶಾಖೆಯನ್ನು ೧೯೬೮ರಲ್ಲೂ, ಕೋಲಾರ ಶಾಖೆಯನ್ನು ೧೯೭೫ರಲ್ಲೂ, ಅಲ್ಲದೇ, ಇತರ ಮೂರು ವಿಸ್ತರಣಾ ಶಾಖೆಗಳು (ಬಂಗಾರಪೇಟೆ ಎ.ಪಿ.ಎಮ್.ಸಿ. ೧೯೮೯, ಕೋಲಾರ ಹಾಲು ಒಕ್ಕೂಟ ೧೯೯೫, ಚಿಂತಾಮಣಿ ಎ.ಪಿ.ಎಂ.ಸಿ.–೧೯೯೬) ಸೇರಿದಂತೆ ಒಟ್ಟು ೧೫ ಶಾಖೆಗಳನ್ನು ೨೦೦೩ರ ಮಾರ್ಚ್‌ವರೆಗೆ ಹೊಂದಿತ್ತು.

ಜಿಲ್ಲಾ ಬ್ಯಾಂಕು ಹಲವಾರು ವರ್ಷಗಳ ಕಾಲ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವ್ಯವಸಾಯದ ಅಭಿವೃದ್ಧಿಗೆ ಅಲ್ಪಾವಧಿ ಸಾಲವಾಗಿ 'ಬೆಳೆಸಾಲ' ಮತ್ತು ಮಧ್ಯಮಾವಧಿ ಸಾಲವಾಗಿ ನೀರಾವರಿ ಪಂಪ್‌ಸೆಟ್ ಸಾಲ, ಹೈನುಗಾರಿಕೆ, ರೇಷ್ಮೆ ಬೆಳೆ, ಎತ್ತು-ಗಾಡಿ, ಕುರಿ ಸಾಕಾಣಿಕೆ ಮೊದಲಾದ ಉದ್ದೇಶಗಳಿಗೆ ಸಾಲಸೌಲಭ್ಯಗಳನ್ನು ಒದಗಿಸುತ್ತಿತ್ತು. ಬ್ಯಾಂಕು ಸರ್ಕಾರ ೧೯೯೮ರಿಂದ ಜಾರಿಗೊಳಿಸಿದ 'ಕಿಸಾನ್ ಕ್ರೆಡಿಟ್ ಕಾರ್ಡ್' ಯೋಜನೆಯನ್ವಯ ಮಾತ್ರ ಇತ್ತೀಚಿನ ವರ್ಷಗಳಲ್ಲಿ ರೈತರಿಗೆ ಅಲ್ಪಾವಧಿ ಸಾಲವನ್ನು ಒದಗಿಸುತ್ತಿದೆ. ಅದರಂತೆ ಸಾಲ ಪಡೆಯುವ ರೈತರನ್ನು ವೈಯಕ್ತಿಕ ಅಪಘಾತ ವಿಮಾ ಯೋಜನೆಯ ವ್ಯಾಪ್ತಿಗೂ ಒಳಪಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈ ಯೋಜನೆ ಪ್ರಾರಂಭವಾದಂದಿನಿಂದ ೨೦೦೪ರ ಮಾರ್ಚ್ ಅಂತ್ಯದವರೆಗೆ ಒಟ್ಟು ೩೧೬೬೩ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಸದಸ್ಯ ಸಹಕಾರ ಸಂಘಗಳ ಮೂಲಕ ರೈತರಿಗೆ ಹಂಚಲಾಗಿದ್ದು, ಇತ್ತೀಚಿನ ಮೂರು ವರ್ಷಗಳಲ್ಲಿ ಹಂಚಲಾದ ಕಾರ್ಡುಗಳ ಸಂಖ್ಯೆ: ೨೦೦೧-
(ಮೊತ್ತ ಲಕ್ಷ ರೂ.ಗಳಲ್ಲಿ)
೦೨ರಲ್ಲಿ ೯೫೭೧; ೨೦೦೨-೦೩ರಲ್ಲಿ ೮೬೪೯ ಹಾಗೂ ೨೦೦೩-೦೪ರಲ್ಲಿ ೫೭೮೮ ಆಗಿದ್ದವು. ಅಲ್ಲದೇ ಜಿಲ್ಲೆಯ ರೈತರ ಮುಖ್ಯ ಕಸುಬಾದ ಹೈನುಗಾರಿಕೆ, ಕುರಿಸಾಕಾಣಿಕೆ, ರೇಷ್ಮೆ ಆಧಾರಿತ ಚಟುವಟಿಕೆ ಮುಂತಾದ ಉದ್ದೇಶಗಳಿಗೆ ಬ್ಯಾಂಕು ಮಧ್ಯಮಾವಧಿ ಸಾಲವನ್ನು ನೀಡುತ್ತದೆ. ಅರ್ಹ ರೈತ ಸದಸ್ಯರಿಗೆ ಟ್ರ್ಯಾಕ್ಟರ್ ಸಾಲ, ವಾಹನ ಸಾಲ, ವ್ಯಾಪಾರಸ್ಥರಿಗೆ ನಗದು ಪತ್ತಿನ ಸಾಲ, ರೈತರು, ಮಧ್ಯಮ ವರ್ಗದ ಜನರು ಮತ್ತು ನೌಕರರು ಸಂದಿಗ್ಧ ಸ್ಥಿತಿಯಲ್ಲಿ ಹೆಚ್ಚಿನ ಬಡ್ಡಿ ತೆತ್ತು ಶೋಷಣೆಗೆ ಒಳಗಾಗುವುದನ್ನು ತಪ್ಪಿಸಲು, ಬಂಗಾರದ ಆಭರಣ, ರಾಷ್ಟ್ರೀಯ ಉಳಿತಾಯ ಪತ್ರಗಳು ಮತ್ತು ವೇತನದ ಆಧಾರದ ಮೇಲೆ ಸಾಲಗಳನ್ನು ನೀಡುತ್ತಿದೆ. ಪಟ್ಟಣ ಪ್ರದೇಶದಲ್ಲಿನ ವಸತಿಹೀನರಿಗೆ ಮನೆ ನಿರ್ಮಾಣ ಅಥವ ಖರೀದಿಗಾಗಿ ಸಹ ಸಾಲ ನೀಡುತ್ತಿದೆ. ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ ಅಭಿವೃದ್ಧಿಯಲ್ಲಿ ಪರಿಣಾಮಕಾರಿಯಾಗಿ ಪಾತ್ರವಹಿಸುತ್ತಿರುವ 'ಸ್ವ ಸಹಾಯ ಸಂಘಗಳಿಗೂ' ಜಿಲ್ಲಾ ಸಹಕಾರಿ ಬ್ಯಾಂಕು ಇತ್ತೀಚಿನ ವರ್ಷಗಳಲ್ಲಿ ಸಾಲಸೌಲಭ್ಯವನ್ನು ಒದಗಿಸುತ್ತಿದೆ. ಅದರ ಅನ್ವಯ ೨೦೦೪ರ ಮಾರ್ಚ್ ಅಂತ್ಯದವರೆಗೆ ಜಿಲ್ಲೆಯಲ್ಲಿ ಒಟ್ಟು ೧೭೨೦ ಸ್ವಸಹಾಯ ಗುಂಪುಗಳ ರಚನೆಯಾಗಿದ್ದು, ಅದರಲ್ಲಿ ೬೯೧ ಸ್ವಸಹಾಯ ಗುಂಪುಗಳಿಗೆ ಒಟ್ಟು ೨೫೪.೯೮ ಲಕ್ಷ ರೂ. ಸಾಲವನ್ನು ವಿತರಿಸಲಾಗಿದೆ. ಇತ್ತೀಚಿನ ಮೂರು ವರ್ಷಗಳಲ್ಲಿ ರಚಿಸಲಾದ ಸ್ವಸಹಾಯ ಗುಂಪುಗಳ ಸಂಖ್ಯೆ, ಸಾಲಕ್ಕೆ ಜೋಡಣೆ ಮಾಡಲಾದ ಅಂತಹ ಗುಂಪುಗಳ ಸಂಖ್ಯೆ ಹಾಗೂ ವಿತರಿಸಲಾದ ಒಟ್ಟು ಸಾಲ ಕ್ರಮವಾಗಿ ೨೦೦೧-೦೨ : ೨೧೨ ; ೨೫೪ ಹಾಗೂ ೮೬.೩೫ ಲಕ್ಷ ರೂ.; ೨೦೦೨-೦೩ : ೪೨೧; ೧೪೫ ಹಾಗೂ ೪೪.೯೧ ಲಕ್ಷ ರೂ.; ೨೦೦೩-೦೪ : ೬೪೯; ೭೮ ಹಾಗೂ ೩೧.೭೦ ಲಕ್ಷ ರೂ. ಆಗಿದ್ದಿತು. ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಕಳೆದ ಎರಡು ದಶಕದ ಅವಧಿಯಲ್ಲಿ ಸಾಧಿಸಿದ ಪ್ರಗತಿಯನ್ನು ಕೋಷ್ಟಕ ೬.೧೧ರಲ್ಲಿ ತೋರಿಸಲಾಗಿದೆ.

**ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು**

ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ೧೯೨೯ರಲ್ಲಿಯೇ ಜಮೀನು ಅಡಮಾನ ಬ್ಯಾಂಕನ್ನು ಸ್ಥಾಪಿಸಿ, ರೈತರಿಗೆ ದೀರ್ಘಾವಧಿ ಸಾಲವನ್ನು ಒದಗಿಸುವ ಕಾರ್ಯವನ್ನು ಸಹಕಾರಿ ರಂಗದಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಈ ಬ್ಯಾಂಕುಗಳನ್ನು ಪ್ರಾಯೋಗಿಕವಾಗಿ ಮಲೆನಾಡಿನ ಜಿಲ್ಲೆಗಳಿಗೆ ಹಾಗೂ ನಂತರ ಇತರೇ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಕೋಲಾರ ಜಿಲ್ಲೆಯಲ್ಲಿ

**ಕೋಷ್ಟಕ ೬.೧೧: ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಕಳೆದ ಎರಡು ದಶಕಗಳ ಅವಧಿಯಲ್ಲಿ** (ಮೊತ್ತ ಲಕ್ಷ ರೂ.ಗಳಲ್ಲಿ)
**ಸಾಧಿಸಿದ ಪ್ರಗತಿ**

(ಮೊತ್ತ ಲಕ್ಷ ರೂ.ಗಳಲ್ಲಿ)

| ವಿವರ | ವರ್ಷ ೧೯೮೦-೮೧ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ |
|---|---|---|---|---|---|---|---|
| ೧ **ಸದಸ್ಯರ ಸಂಖ್ಯೆ (ಸಂಘಗಳು)** | ೬೪೦ | ೬೮೦ | ೯೯೫ | ೭೪೯ | ೭೬೭ | ೭೬೮ | ೭೬೭ |
| **(ಸರ್ಕಾರ)** | ೧ | ೧ | ೧ | ೧ | ೧ | ೧ | ೧ |
| ೨ **ಒಟ್ಟು ಷೇರು ಬಂಡವಾಳ** | ೯೯.೨೬ | ೧೫೨.೪೧ | ೨೨೮.೮೩ | ೪೩೪.೭೩ | ೫೦೧.೯೦ | ೫೨೩.೭೫ | ೬೮೭.೫೯ |
| **ಸರ್ಕಾರದ ಪಾಲು** | ೫೫.೨೮ | ೫೫.೨೮ | ೫೫.೨೮ | ೧೩೫.೨೮ | ೧೩೫.೨೮ | ೧೩೫.೨೮ | ೧೩೫.೨೮ |
| ೩ **ಕಾಯ್ದಿಟ್ಟ ನಿಧಿಗಳು** | ೨೪.೯೫ | ೬೩.೧೦ | ೧೨೩.೧೮ | ೩೪೩.೬೯ | ೪೯೧.೩೯ | ೪೯೧.೩೯ | ೪೮೭.೯೨ |
| ೪ **ಠೇವುಗಳು** | ೨೩೭.೪೦ | ೯೬೬.೧೯ | ೨೫೯೭.೯೭ | ೬೬೪೦.೦೬ | ೭೧೭೯.೭೯ | ೭೮೪೮.೬೮ | ೭೯೮೧.೭೧ |
| ೫ **ಸಾಲಗಳ ಎತ್ತುವಳಿಗಳು** | ೩೦೬.೭೦ | ೬೨೯.೭೩ | ೧೩೧೪.೩೨ | ೬೨೬೪.೫೬ | ೬೯೬೨.೨೩ | ೮೩೦೮.೭೫ | ೮೨೭೫.೯೪ |
| ೬ **ಸಾಲ ವಿತರಣೆ (ಮುಂಗಡಗಳು)** | ೫೦೫.೨೬ | ೧೪೦೫.೭೦ | ೨೬೨೪.೪೬ | ೧೧೦೮೭.೯೪ | ೧೧೫೮೩.೧೩ | ೧೪೨೦೫.೫೪ | ೧೪೮೬೮.೨೫ |
| ೭ **ದುಡಿಯುವ ಬಂಡವಾಳ** | ೬೭೫.೧೦ | ೧೮೧೧.೪೩ | ೪೨೬೪.೩೦ | ೧೩೬೮೩.೦೪ | ೧೫೧೩೫.೩೧ | ೧೭೧೭೨.೫೭ | ೧೮೫೦೩.೧೭ |
| ೮ **ಸಾಲಿನಲ್ಲಿ ಲಾಭ (+)/ನಷ್ಟ(–)** | (–)೧೨.೬೪ | (–)೫೮.೬೭ | (+)೨೫.೯೯ | (+)೩೩.೬೮ | (+)೪.೯೧ | (–)೬೨೬.೭೧ | (–)೧೪೩೯.೯೫ |
| ೯ **ಕ್ರೋಡೀಕೃತ ಲಾಭ(+)/ನಷ್ಟ(–)** | – | (–)೭೧.೩೧ | (–) ೩೨.೬೮ | (+)೩೭.೭೪ | (+)೪೧.೬೫ | (–)೫೮೫.೦೬ | (–)೨೦೬೬.೬೬ |
| ೧೦ **ಹೂಡಿಕೆಗಳು** | ೧೩.೫೬ | ೬೪೦.೯೫ | ೯೨೧.೫೩ | ೧೦೬೯.೫೬ | ೧೪೫೧.೦೪ | ೧೮೧೪.೦೪ | ೧೭೮೮.೪೩ |

(ಮೊತ್ತ ಲಕ್ಷ ರೂ.ಗಳಲ್ಲಿ)

ಆಧಾರ : ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಕೋಲಾರ

ಈ ಬ್ಯಾಂಕಿನ ತಾಲೂಕು ಮಟ್ಟದ ಶಾಖೆಗಳಾದ ಜಮೀನು ಅಡಮಾನ ಸಹಕಾರ ಸಂಘಗಳನ್ನು ಗೌರಿಬಿದನೂರಿನಲ್ಲಿ ೧೯೩೩ರಲ್ಲಿ, ಚಿಕ್ಕಬಳ್ಳಾಪುರದಲ್ಲಿ ೧೯೩೪ರಲ್ಲಿ, ಕೋಲಾರದಲ್ಲಿ ೧೯೩೫ರಲ್ಲಿ, ಬಂಗಾರಪೇಟೆ ಮತ್ತು ಶಿಡ್ಲಘಟ್ಟಗಳಲ್ಲಿ ೧೯೩೮ರಲ್ಲಿ, ಚಿಂತಾಮಣಿ, ಮುಳಬಾಗಿಲು ಮತ್ತು ಶ್ರೀನಿವಾಸಪುರಗಳಲ್ಲಿ ೧೯೪೦ರಲ್ಲಿ, ಬಾಗೇಪಲ್ಲಿಯಲ್ಲಿ ೧೯೪೧ರಲ್ಲಿ, ಮಾಲೂರಿನಲ್ಲಿ ೧೯೪೫ರಲ್ಲಿ ಹಾಗೂ ಗುಡಿಬಂಡೆಯಲ್ಲಿ ೧೯೬೧ರಲ್ಲಿ ಸ್ಥಾಪಿಸಲಾಯಿತು. ಇವು ೧೯೬೫ರವರೆಗೆ ರೈತರಿಗೆ ಹಳೆಯ ಸಾಲ ತೀರುವಳಿಗಾಗಿ ಸಾಲ

ನೀಡುತ್ತಿದ್ದು, ನಂತರದ ವರ್ಷಗಳಲ್ಲಿ ಬದಲಾದ ಪರಿಸ್ಥಿತಿಗನುಗುಣವಾಗಿ ಸಾಲ ಮಂಜೂರಾತಿಯ ಧೋರಣೆಯನ್ನು ಬದಲಾಯಿಸಿಕೊಂಡು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚುಹೆಚ್ಚಾಗಿ ಸಾಲ ಮಂಜೂರಾತಿ ಮಾಡುತ್ತಿವೆ. ಮೊದಲು ಜಮೀನು ಅಡಮಾನ ಸಹಕಾರ ಸಂಘಗಳು ಎಂದಿದ್ದ ಇವುಗಳ ಹೆಸರನ್ನು ೧೯೬೫ರ ನಂತರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೆಂದು ಮತ್ತೆ ೧೯೮೫ರ ನಂತರ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳೆಂದು ಕರೆಯಲಾಯಿತು. ಈ ಬ್ಯಾಂಕುಗಳು ಪ್ರಮುಖವಾಗಿ ದೀರ್ಘಾವಧಿ ಕೃಷಿ ಸಾಲದ ವಿತರಣೆ ಕೈಗೊಳ್ಳುತ್ತಿದ್ದರೂ, ೧೯೮೭ರಿಂದ ಕೃಷಿಯೇತರ ಚಟುವಟಿಕೆಗಳಾದ ಗ್ರಾಮೀಣ ಕೈಗಾರಿಕೆಗಳು, ಗ್ರಾಮೀಣ ಗೃಹ ನಿರ್ಮಾಣ (೧೯೮೯ ರಿಂದ) ಮುಂತಾದವುಗಳಿಗೂ ಸಾಲಸೌಲಭ್ಯವನ್ನು ಒದಗಿಸುತ್ತಿವೆ. ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಕೋಲಾರದಲ್ಲಿನ ಜಿಲ್ಲಾ ಶಾಖಾ ಕಚೇರಿಯು ಜಿಲ್ಲೆಯ ವ್ಯಾಪ್ತಿಯಲ್ಲಿನ ಹನ್ನೊಂದು ಪ್ರಾಥಮಿಕ ಬ್ಯಾಂಕುಗಳಿಗೆ ವಿವಿಧ ಯೋಜನೆಗಳ ಮಿತಿಗೊಳಪಟ್ಟ ಸಾಲ ಮಂಜೂರಾತಿಯನ್ನು ನೀಡುತ್ತದೆ. ಈ ಬ್ಯಾಂಕುಗಳು ರಾಜ್ಯ ಮಟ್ಟದ ಶೃಂಗ ಸಂಸ್ಥೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ಕೋಲಾರ ಜಿಲ್ಲೆಯಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಇತ್ತೀಚಿನ ಕೆಲವು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೋಷ್ಟಕ ೬.೧೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧೨**

(ಮೊತ್ತ ಲಕ್ಷ ರೂ.ಗಳಲ್ಲಿ)

| | ವಿವರ | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧ | **ಬ್ಯಾಂಕುಗಳ ಸಂಖ್ಯೆ** | ೧೧ | ೧೧ | ೧೧ |
| ೨ | **ಸದಸ್ಯತ್ವ (ಸಾವಿರಗಳಲ್ಲಿ)** | ೫೧ | ೫೫ | ೬೨ |
| ೩ | **ಷೇರು ಬಂಡವಾಳ** | | | |
| | ಅ. ಒಟ್ಟು | ೪೦೨ | ೪೩೮ | ೪೪೧.೮೪ |
| | ಆ. ಸರ್ಕಾರದ ಪಾಲು | ೨೭ | ೨೭ | ೨೭ |
| ೪ | **ಕಾಯ್ದಿಟ್ಟ ಮತ್ತು ಇತರ ನಿಧಿಗಳು** | ೬೫೪.೧೫ | ೯೫೩.೭೯ | ೧೪೪೯.೯೯ |
| ೫ | **ಚಾಲ್ತಿ ಬಂಡವಾಳ** | ೩೧೨.೧೦ | ೪೯೫.೧೨ | ೫೧೦.೧೫ |
| ೬ | **ಠೇವಣಿಗಳು** | ೨೫.೦೦ | ೪೮.೧೦ | ೫೧.೯ |
| ೭ | **ಸಾಲ** | | | |
| | ಅ. ನೀಡಿಕೆ | ೯೫.೦೦ | ೧೦೬.೩೯ | ೧೨೮.೦೦ |
| | ಆ. ಬರಬೇಕಾದ ಸಾಲ | ೪೯೧೫.೦೦ | ೬೪೦೫.೩೨ | ೫೬೬೬.೦೦ |
| | ಇ. ಅವಧಿ ಮೀರಿದ ಸಾಲ | ೩೪೭೦.೦೦ | ೪೧೩೧.೨೬ | ೩೫೭೫.೦೦ |
| | ಈ. ವಸೂಲಾದ ಸಾಲ | ೨೧೪.೦೦ | ೫೯೭.೦೧ | ೧೧೫.೭೪ |
| ೮ | **ಅನುಭವಿಸಿದ ನಷ್ಟ** | ೫೪.೦೦ | ೫೯.೧೭ | ೬೦.೯೭ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಕೋಲಾರ

**ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು**

ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರ ವ್ಯವಸಾಯ ಉತ್ಪನ್ನಗಳಿಗೆ ಉತ್ತಮ ಬೆಲೆ ಮತ್ತು ಇತರೆ ವ್ಯವಸಾಯ ಪೂರಕ ಸಾಮಗ್ರಿ ಒದಗಿಸುವ ಉದ್ದೇಶದಿಂದ ಈ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಲಾಯಿತು. ಕೋಲಾರ ಜಿಲ್ಲೆಯಲ್ಲಿ ತಾಲೂಕಿಗೊಂದರಂತೆ ಹನ್ನೊಂದು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸದಸ್ಯರಿಗೆ ಬಿತ್ತನೆ ಬೀಜ, ಕ್ರಿಮಿನಾಶಕ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಒದಗಿಸುವುದೇ ಈ ಮಾರಾಟ ಸಂಘಗಳ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರಕುವಂತೆ ವ್ಯವಸ್ಥೆ ಮಾಡುವುದು, ರೈತರ ಕೃಷಿ ಉತ್ಪನ್ನಗಳನ್ನು ಅಡವು ಇಟ್ಟುಕೊಂಡು, ಸಾಲ ಮತ್ತು ಮಾರಾಟ ಜೋಡಣೆ ಸೌಲಭ್ಯ ಒದಗಿಸಿ ಸಾಲ ನೀಡುವುದು, ರೈತರ ಕೃಷಿ ಉತ್ಪನ್ನಗಳಿಗೆ ರೂಪಾಂತರ ವ್ಯವಸ್ಥೆ ಒದಗಿಸುವುದು, ಸರ್ಕಾರದ ಏಜೆಂಟರಾಗಿ ಸರ್ಕಾರ ವಹಿಸುವ ಕೆಲಸಗಳನ್ನು ನಿರ್ವಹಿಸುವುದು, ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ದಿನಬಳಕೆ ವಸ್ತುಗಳು, ಜವಳಿ ಇತ್ಯಾದಿಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಒದಗಿಸುವುದು, ಇತ್ಯಾದಿ ಕೆಲಸಗಳನ್ನು ಇವು ನಿರ್ವಹಿಸುತ್ತವೆ. ೧೯೯೫-೯೬ರಿಂದ ಈ ಮಾರಾಟ ಸಂಘಗಳನ್ನು ವ್ಯಾಪಾರ ಅಭಿವೃದ್ಧಿ ಯೋಜನೆಗೆ ಒಳಪಡಿಸಿ ಅಭಿವೃದ್ಧಿಪಡಿಸಲಾಗುತ್ತಿದೆ. ಜಿಲ್ಲೆಯ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಇತ್ತೀಚಿನ ಕೆಲವು ವರ್ಷಗಳ ಪ್ರಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧೩**

(ಮೊತ್ತ ಲಕ್ಷ ರೂ.ಗಳಲ್ಲಿ)

| | ವಿವರ | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧ | **ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು** (ಸಂಖ್ಯೆ) | ೧೧ | ೧೧ | ೧೧ |
| ೨ | **ಸದಸ್ಯರ ಸಂಖ್ಯೆ** (ಸಾವಿರಗಳಲ್ಲಿ) | ೧೬ | ೧೭ | ೨೧ |
| ೩ | **ಷೇರು ಬಂಡವಾಳ** | ೯೪.೦೦ | ೯೭.೦೭ | ೧೧೮.೪೫ |
| | ಅ. ಸರ್ಕಾರದ ಪಾಲು | ೭೧.೦೦ | ೭೯.೦೦ | ೮೦.೩೮ |
| ೪ | **ದುಡಿಯುವ ಬಂಡವಾಳ** | ೨೯೪.೦೦ | ೩೮೧.೧೦ | ೫೪೫.೪೬ |
| ೫ | **ಕಾಯ್ದಿಟ್ಟ ಮತ್ತು ಇತರೆ ನಿಧಿಗಳು** | ೧೬.೯೪ | ೪೧.೭೮ | ೨೪.೧೦ |
| ೬ | **ಸಾಲ ಪಡೆದುದು** | ೧೭೪.೦೦ | ೧೯೦.೫೦ | ೧೯೧.೬೦ |
| ೭ | **ವ್ಯವಸಾಯ ಸಾಮಗ್ರಿಗಳ ಮಾರಾಟ ಮೌಲ್ಯ** | ೧೬೧೦.೦೦ | ೨೨೭೬.೯ | ೩೧೨೫.೬೬ |
| | ಅ. ಬೀಜಗಳು | ೬.೧೭ | ೧೪.೦೯ | ೧೧.೨೭ |
| | ಆ. ಗೊಬ್ಬರಗಳು | ೮೪.೦೦ | ೧೨೮.೮೦ | ೩೦೦.೨೨ |
| | ಇ. ಇತರೆ ವಸ್ತುಗಳು | ೧೫೧೯.೮೩ | ೨೧೩೪.೧೦ | ೨೮೧೪.೧೭ |
| ೮ | **ಮಾರುಕಟ್ಟೆ ಹೊಂದಿರುವ ಸ್ವಂತ ಉಗ್ರಾಣಗಳು** | ೪೨ | ೪೮ | ೫೦ |
| ೯ | **ಬಾಡಿಗೆಗೆ ಪಡೆದ ಉಗ್ರಾಣಗಳು** | ೨ | ೪ | ೪ |

| | | | |
|---|---|---|---|
| ೧೦ **ಲಾಭಗಳಿಸಿದ ಸಂಘಗಳು** | ೮ | ೭ | ೫ |
| **ಗಳಿಸಿದ ಲಾಭ** | ೧೪.೧೬ | ೮.೧೫ | ೧೭.೪೮ |
| ೧೧ **ನಷ್ಟ ಅನುಭವಿಸಿದ ಸಂಘಗಳು** | ೩ | ೪ | ೬ |
| **ಅನುಭವಿಸಿದ ನಷ್ಟ** | ೧.೮೨ | ೧.೭೧ | ೮೧.೨೭ |

ಆಧಾರ: ಜಿಲ್ಲಾ ಸಹಕಾರ ಇಲಾಖೆ, ಕೋಲಾರ

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು**

ವ್ಯವಸಾಯ ಅಭಿವೃದ್ಧಿಗೆ ಒದಗಿಸಲಾಗುವ ಸಹಕಾರಿ ಸಾಲವನ್ನು ಹೆಚ್ಚು ವ್ಯಾಪಕ ಮತ್ತು ಪರಿಣಾಮಕಾರಿಯನ್ನಾಗಿ ಮಾಡುವುದು ಈ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಜವಾಬ್ದಾರಿಯಾಗಿದೆ. ಗ್ರಾಮ ಮಟ್ಟದಲ್ಲಿ ವ್ಯವಸಾಯ ಸಾಲ ಪ್ರವಹಿಸುವುದು ಈ ಸಂಸ್ಥೆಗಳ ಮೂಲಕವೇ ಆಗಿರುತ್ತದೆ. ಇವು ಸದಸ್ಯ ರೈತರಿಗೆ ವ್ಯವಸಾಯದ ಅಭಿವೃದ್ಧಿಗಾಗಿ ಅಲ್ಪಾವಧಿ (ಬೆಳೆಸಾಲ) ಮತ್ತು ಮಧ್ಯಮಾವಧಿ ಸಾಲಗಳ ಜೊತೆಗೆ ಸುಧಾರಿಸಿದ ಬೀಜ, ರಸಗೊಬ್ಬರ, ಕ್ರಿಮಿನಾಶಕ ಔಷಧಗಳನ್ನು ಒದಗಿಸುತ್ತವೆ. ಜೊತೆಗೆ ಅವರ ದಿನನಿತ್ಯದ ಬಳಕೆ ವಸ್ತುಗಳಾದ ಸಕ್ಕರೆ, ಸೀಮೆಎಣ್ಣೆ, ಬಟ್ಟೆ ಮುಂತಾದವುಗಳನ್ನೂ ಮಾರಾಟ ಮಾಡುತ್ತವೆ. ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡುತ್ತವೆ. ಗ್ರಾಮೀಣ ಕಸುಬುದಾರರಿಗೂ ಸಾಲ ಒದಗಿಸಿ ಅವರ ಆರ್ಥಿಕ ಪ್ರಗತಿಗೆ ಪ್ರಯತ್ನಿಸುತ್ತವೆ. ೧೯೫೫-೫೬ನೇ ಸಾಲಿನಿಂದ ವ್ಯಾಪಾರ ಅಭಿವೃದ್ಧಿ ಯೋಜನೆ ಕಾರ್ಯಕ್ರಮದಡಿ ಈ ಪತ್ತಿನ ಸಂಘಗಳನ್ನು ಬಲಪಡಿಸಿ, ಅವುಗಳನ್ನು ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಸರ್ಕಾರ ಇವುಗಳಿಗೆ ಬ್ಯಾಂಕಿಂಗ್ ಕೌಂಟರ್, ಕಬ್ಬಿಣದ ತಿಜೋರಿ ಇತ್ಯಾದಿಗಳನ್ನು ಖರೀದಿಸಲು ಆರ್ಥಿಕ ನೆರವನ್ನು ಒದಗಿಸುತ್ತಿದೆ. ಕೋಲಾರ ಜಿಲ್ಲೆಯಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳ (ಬ್ಯಾಂಕುಗಳ) ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೭.೧೪**

(ಮೊತ್ತ ಲಕ್ಷ ರೂ.ಗಳಲ್ಲಿ)

| | ವಿವರ | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧ | **ಒಟ್ಟು ಕೃಷಿ ಪತ್ತಿನ ಸಹಕಾರ ಸಂಘಗಳು** | ೨೦೪ | ೨೦೪ | ೨೦೪ |
| ೨ | **ಸದಸ್ಯರ ಸಂಖ್ಯೆ (ಸಾವಿರಗಳಲ್ಲಿ)** | | | |
| | ಅ. ಪರಿಶಿಷ್ಟ ಜಾತಿ | ೨೭ | ೩೩ | ೩೨ |
| | ಆ. ಪರಿಶಿಷ್ಟ ಪಂಗಡ | ೧೫ | ೧೭ | ೧೮ |
| | ಇ. ಇತರೆ | ೧೪೨ | ೧೪೯ | ೧೬೭ |
| | ಒಟ್ಟು | ೧೮೪ | ೧೯೯ | ೨೧೭ |
| ೩ | **ಷೇರು ಬಂಡವಾಳ** | ೨೪೨.೧೦ | ೩೯೮.೫೫ | ೫೬೧.೨೪ |
| | **ಸರ್ಕಾರದ ಪಾಲು** | ೧೪೫.೧೦ | ೧೭೧.೧೦ | ೨೨೫.೬೪ |
| ೪ | **ನೀಡಲಾದ ಸಾಲ** | ೪೦೧೬.೧೦ | ೬೦೭೬.೦೪ | ೯೭೭೨.೦೦ |
| ೫ | **ವಸೂಲು ಮಾಡಿದ ಸಾಲ** | ೨೫೧೮.೧೨ | ೩೫೩೬.೮೭ | ೩೬೮೨.೦೦ |
| ೬ | **ಬಾಕಿ ಉಳಿದ ಸಾಲ** | ೫೧೧೨.೦೦ | ೭೪೨೮.೫೨ | ೧೩೬೭೭.೦೦ |

| | | | | |
|---|---|---|---|---|
| ೭ | **ಗಡವು ಮೀರಿದ ಸಾಲ** | ೨೧೧೪.೦೦ | ೧೪೪೧.೩೧ | ೫೩೫೬.೦೦ |
| ೮ | **ಶೇಕಡ ವಸೂಲಾತಿ** | ೫೨ | ೫೮.೨ | ೩೭.೬೮ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಕೋಲಾರ

## ಪ್ರಾಥಮಿಕ ಹಾಲು ಪೂರೈಕೆ ಸಹಕಾರ ಸಂಘಗಳು

ಈ ಸಹಕಾರ ಸಂಘಗಳ ಮೂಲ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಹೈನು ಉದ್ಯಮಕ್ಕೆ ಸಹಾಯಕವಾಗುವ ಮೂಲಭೂತ ಸೌಲಭ್ಯಗಳನ್ನು ಸದಸ್ಯರಿಗೆ ಒದಗಿಸುವಲ್ಲಿ ನೆರವಾಗುವುದಲ್ಲದೇ, ಸದಸ್ಯರು ಉತ್ಪಾದಿಸಿದ ಹಾಲನ್ನು ಶೇಖರಿಸಲು ಮತ್ತು ಮಾರಾಟ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡುವುದಾಗಿದೆ. ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ದಶಕದ ಅವಧಿಯಲ್ಲಿ ಕ್ಷೀರ ಕ್ರಾಂತಿಯನ್ನು ವ್ಯಾಪಕಗೊಳಿಸುವಲ್ಲಿ ಈ ರೀತಿಯ ಸಹಕಾರ ಸಂಘಗಳು ಬಹು ವ್ಯಾಪಕವಾಗಿ ಸ್ಥಾಪನೆಯಾಗಿವೆ. ರಾಜ್ಯದಲ್ಲೇ ಅತಿ ಹೆಚ್ಚಿನ ಹಾಲು ಪೂರೈಕೆ ಸಹಕಾರ ಸಂಘಗಳನ್ನು ಹೊಂದಿರುವ ಜಿಲ್ಲೆ ಇದಾಗಿದೆ. ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು ೧೯೮೭ರಲ್ಲಿ ಕೋಲಾರದಲ್ಲಿ ಸ್ಥಾಪಿಸಿ, ಜಿಲ್ಲೆಯ ಎಲ್ಲ ಹಾಲು ಉತ್ಪಾದಕರ ಸಂಘಗಳನ್ನು ಈ ಒಕ್ಕೂಟದ ವ್ಯಾಪ್ತಿಗೆ ಒಳಪಡಿಸಲಾಯಿತು. ಜಿಲ್ಲೆಯಲ್ಲಿ ೨೦೦೨-೦೩ರಲ್ಲಿ ಒಟ್ಟು ೧೪೩೧ ಹಾಲು ಪೂರೈಕೆ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ಮಹಿಳಾ ಹಾಲು ಉತ್ಪಾದಕರ ಸಂಘಗಳ ಸಂಖ್ಯೆ ೫೮ ಆಗಿದ್ದಿತು. ಎಲ್ಲ ಹಾಲು ಪೂರೈಕೆ ಸಂಘಗಳಿಂದ ದಿನಂಪ್ರತಿ ಸರಾಸರಿ ೫.೫೮ ಲಕ್ಷ ಕೆ.ಜಿ. ಹಾಲು ಶೇಖರಣೆ ಮಾಡಲಾಗಿತ್ತು. ಜಿಲ್ಲೆಯಲ್ಲಿನ ಹಾಲು ಪೂರೈಕೆ ಸಹಕಾರ ಸಂಘಗಳ ಇತ್ತೀಚಿನ ಕೆಲವು ವರ್ಷಗಳ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೫**

| | ವಿವರ | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧ | **ಸಂಘಗಳ ಸಂಖ್ಯೆ** | ೧೦೧೨ | ೧೩೨೨ | ೧೪೩೧ |
| ೨ | **ಒಟ್ಟು ಸದಸ್ಯರು (ಸಂಖ್ಯೆ ಸಾವಿರಗಳಲ್ಲಿ)** | ೨೦೧ | ೨೫೮ | ೨೬೭ |
| ೩ | **ಷೇರು ಬಂಡವಾಳ** | ೩೦೨ | ೩೯೧.೬೮ | ೪೨೧.೨ |
| | **ಸರ್ಕಾರದ ಪಾಲು** | ೨೦೦ | – | – |
| ೪ | **ದುಡಿಯುವ ಬಂಡವಾಳ** | ೩೦೭೮.೧೦ | ೪೫೧೪.೭೦ | ೪೮೬೪.೨೬ |
| ೫ | **ಕಾಯ್ದಿಟ್ಟ ಮತ್ತು ಇತರೆ ನಿಧಿಗಳು** | ೪೬೪ | ೭೬೭.೧೦ | ೭೭೮.೫೦ |
| ೬ | **ಖರೀದಿ** | ೧೬೧೪.೮೦ | ೨೧೫೧.೭೦ | ೨೧೬೨.೭೫ |
| ೭ | **ಮಾರಾಟ** | ೧೭೮೦.೧೮ | ೨೬೭೫.೩೧ | ೨೬೮೬.೩೫ |
| ೮ | **ಲಾಭ** | ೯೮.೦೫ | ೧೦೭.೦೨ | ೧೦೮.೫೦ |

ಆಧಾರ: ಜಿಲ್ಲಾ ಸಹಕಾರ ಇಲಾಖೆ, ಕೋಲಾರ

### ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳು

ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಮುಖವಾಗಿ ಪಟ್ಟಣ ಸಹಕಾರಿ ಬ್ಯಾಂಕುಗಳು, ಅಲ್ಲದೇ ನೌಕರರ ಮತ್ತು ಇತರ ಬಗೆಯ ಪತ್ತಿನ ಸಹಕಾರ ಸಂಘಗಳಾಗಿವೆ. ಕೋಲಾರ ಜಿಲ್ಲೆಯಲ್ಲಿ, ಜಿಲ್ಲೆಯಲ್ಲೇ ಸ್ಥಾಪಿತವಾದ ಪಟ್ಟಣ ಸಹಕಾರಿ ಬ್ಯಾಂಕುಗಳು ಇರುವುದಿಲ್ಲ. ಒಂದಿಷ್ಟು ನೌಕರರ ಮತ್ತು ಇತರ ಪತ್ತಿನ ಸಹಕಾರಿ ಸಂಘಗಳು ಮಾತ್ರ ಜಿಲ್ಲೆಯಲ್ಲಿವೆ. ಇವು ಸದಸ್ಯರಿಂದ ಷೇರು ಬಂಡವಾಳವನ್ನು ಸಂಗ್ರಹಿಸುವುದರೊಂದಿಗೆ, ಸದಸ್ಯರಿಗೆ ಸಾಲವನ್ನೂ ನೀಡುತ್ತವೆ. ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ೧೯೧೩ರಲ್ಲಿ ಸ್ಥಾಪನೆಯಾದ ಬಾಗೇಪಲ್ಲಿ ಟೌನ್ ಕೋ-ಆಪರೇಟೀವ್ ಕ್ರೆಡಿಟ್ ಸೊಸೈಟಿಯು ಅತೀ ಹಳೆಯ ಸಂಘವಾಗಿದ್ದು, ಇಂದಿಗೂ ಅಸ್ತಿತ್ವದಲ್ಲಿದೆ. ಉಳಿದಂತೆ ೧೯೧೪ರಲ್ಲಿ ಸ್ಥಾಪನೆಯಾದ ಚಿಂತಾಮಣಿ ಟೌನ್ ಕೋ-ಆಪರೇಟೀವ್ ಕ್ರೆಡಿಟ್ ಸೊಸೈಟಿ, ೧೯೨೪ರಲ್ಲಿ ಕೋಲಾರದಲ್ಲಿ ಸ್ಥಾಪನೆಯಾದ ಜಿಲ್ಲಾ ಪೊಲೀಸ್ ನೌಕರರ ಪತ್ತಿನ ಸಹಕಾರ ಸಂಘ, ೧೯೩೨ರಲ್ಲಿ ಸ್ಥಾಪನೆಯಾದ ಕೆ.ಜಿ.ಎಫ್. ಪೊಲೀಸ್ ಸಹಕಾರಿ ಸಂಘ, ೧೯೩೪ರಲ್ಲಿ ಸ್ಥಾಪನೆಯಾದ ಕೆ.ಜಿ.ಎಫ್ ಟೌನ್ ಪತ್ತಿನ ಸಹಕಾರಿ ಸಂಘ ಇವು ಪ್ರಮುಖವಾಗಿವೆ. ಮುಂದಿನ ಕೋಷ್ಟಕದಲ್ಲಿ (ಕೋಷ್ಟಕ ೬.೧೬) ಕೋಲಾರ ಜಿಲ್ಲೆಯಲ್ಲಿನ ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳ ಇತ್ತೀಚಿನ ಕೆಲವು ವರ್ಷಗಳ ವಿವರವನ್ನು ನೀಡಲಾಗಿದೆ.

**ಕೋಷ್ಟಕ ೬.೧೬**

| | ವಿವರ | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧ | ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳ ಸಂಖ್ಯೆ | ೨೫ | ೨೭ | ೨೭ |
| ೨ | ಸದಸ್ಯರ ಸಂಖ್ಯೆ (ಸಾವಿರಗಳಲ್ಲಿ) | ೮ | ೧೦ | ೧೧ |
| ೩ | ಷೇರು ಬಂಡವಾಳ | ೩೮.೧೪ | ೪೩.೪೫ | ೪೩.೪೫ |
| ೪ | ದುಡಿಯುವ ಬಂಡವಾಳ | ೨೫೬ | ೩೯೨.೧೭ | ೪೧೪.೧೦ |
| ೫ | ಕಾಯ್ದಿಟ್ಟ ಮತ್ತು ಇತರ ನಿಧಿಗಳು | ೯೪.೧೫ | ೧೨೨.೩೨ | ೧೩೨.೭೪ |
| ೬ | ನೀಡಿದ ಸಾಲ | ೧೦೧ | ೨೩೧.೨೬ | ೧೨೫.೯೬ |

ಆಧಾರ: ಜಿಲ್ಲಾ ಸಹಕಾರ ಇಲಾಖೆ, ಕೋಲಾರ

### ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು

ಗ್ರಾಹಕರಿಗೆ ದಿನಬಳಕೆ ವಸ್ತುಗಳನ್ನು ಯೋಗ್ಯ ಬೆಲೆಗೆ ವಿತರಿಸುವ ಕಾರ್ಯದಲ್ಲಿ ಬಳಕೆದಾರರ ಸಹಕಾರ ಸಂಘಗಳ ಪಾತ್ರ ಬಹಳ ಮಹತ್ವದ್ದು, ಇವು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ತಕ್ಕಮಟ್ಟಿಗೆ ತಡೆಗಟ್ಟುವಲ್ಲಿ ತಮ್ಮ ಪಾಲಿನ ಕಾರ್ಯವನ್ನು ನಿರ್ವಹಿಸುತ್ತವೆ. ಕೋಲಾರ ಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲಿ ಹಲವು ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ಉದ್ದೇಶದ ಸಹಕಾರ ಸಂಘಗಳಲ್ಲಿ ೧೯೪೭ರಲ್ಲಿ ಗುಡಿಬಂಡೆಯಲ್ಲಿ ಸ್ಥಾಪನೆಯಾದ ಸರ್ಕಾರಿ ನೌಕರರ ಬಳಕೆದಾರರ ಸಹಕಾರಿ ಸಂಘ ಜಿಲ್ಲೆಯ ಪ್ರಥಮ ಸಹಕಾರಿ ಸಂಘವಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಹಕರ ಚಳವಳಿಗೆ ಉತ್ತೇಜನ ದೊರೆತ ಕಾರಣ ನಂತರದ ವರ್ಷಗಳಲ್ಲಿ ಇಂತಹ ಸಂಘಗಳು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಗೊಂಡವು. ಈ ಸಂಘಗಳಿಗೆ ಅಗತ್ಯವಾದ ವಸ್ತುಗಳನ್ನು ಸಗಟಾಗಿ ಪೂರೈಸಲು ಅನುಕೂಲವಾಗುವಂತೆ ೧೯೬೩ರಲ್ಲಿ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘವನ್ನು

ಕೋಲಾರದಲ್ಲಿ ಸ್ಥಾಪಿಸಲಾಯಿತು (ಈಗ ಅದು ಸಮಾಪನಗೊಂಡಿದೆ). ಸರ್ಕಾರದ ವ್ಯಾಪಾರ ಅಭಿವೃದ್ಧಿ ಯೋಜನೆ ಅನ್ವಯ ಬಳಕೆದಾರರ ಸಹಕಾರ ಸಂಘಗಳಿಗೆ ನೆರವು ಒದಗಿಸಿ, ಇತ್ತೀಚೆಗೆ ಅವುಗಳನ್ನು ಲಾಭದಾಯಕ ಘಟಕಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಾಗುತ್ತಿದೆ. ಜಿಲ್ಲೆಯಲ್ಲಿನ ಬಳಕೆದಾರರ ಸಹಕಾರ ಸಂಘಗಳ ವಿವರವನ್ನು ಇತ್ತೀಚಿನ ಕೆಲವು ವರ್ಷಗಳಿಗೆ ಸಂಬಂಧಿಸಿದಂತೆ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೬.೧೭

| | ವಿವರ | ವರ್ಷ | | |
|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ |
| ೧ | ಬಳಕೆದಾರರ ಸಂಘಗಳು (ಸಂಖ್ಯೆ) | ೩೬ | ೪೩ | ೪೩ |
| ೨ | ಒಟ್ಟು ಸದಸ್ಯರು (ಸಾವಿರಗಳಲ್ಲಿ) | ೧೨ | ೧೪ | ೧೪ |
| ೩ | ಷೇರು ಬಂಡವಾಳ | ೯.೧೪ | ೧೧.೬೧ | ೧೧.೬೩ |
| | ಸರ್ಕಾರದ ಪಾಲು | ೨.೯೧ | ೨.೯೧ | ೨.೯೧ |
| ೪ | ಕಾಯ್ದಿಟ್ಟ ಮತ್ತು ಇತರ ನಿಧಿಗಳು | ೫.೭೧ | ೯.೬೦ | ೯.೬೫ |
| ೫ | ಚಾಲ್ತಿ ಬಂಡವಾಳ | ೩೨.೧೧ | ೩೮.೧೧ | ೪೧.೩೯ |
| ೬ | ಖರೀದಿ | ೬೨.೦೦ | ೮೯.೦೦ | ೮೭.೫೩ |
| ೭ | ಮಾರಾಟ | ೬೬.೦೦ | ೯೮.೯೯ | ೯೬.೨೬ |
| ೮ | ಲಾಭ | ೦೦.೮೦ | ೧.೦೧ | ೧.೧೨ |

ಆಧಾರ: ಜಿಲ್ಲಾ ಸಹಕಾರ ಇಲಾಖೆ, ಕೋಲಾರ

**ಕೈಗಾರಿಕಾ ಸಹಕಾರ ಸಂಘಗಳು**

ಸಹಕಾರಿ ವಲಯದಲ್ಲಿ ಕೈಗಾರಿಕಾ ಸಂಘಗಳ ಸ್ಥಾಪನೆಯ ಪ್ರಮುಖ ಉದ್ದೇಶ ಗುಡಿ ಕೈಗಾರಿಕೆ ಮತ್ತು ಗ್ರಾಮೋದ್ಯೋಗಗಳನ್ನು ಕೈಗೆತ್ತಿಕೊಂಡ ಸದಸ್ಯರಿಗೆ ಸಾಲ-ಸೌಲಭ್ಯ ಒದಗಿಸುವುದು, ಕೈಗಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಒದಗಿಸುವುದು, ಅಗತ್ಯವಾದ ತಾಂತ್ರಿಕ ಸಲಹೆಯನ್ನು ನೀಡುವುದು ಮತ್ತು ಸದಸ್ಯರು ಉತ್ಪಾದಿಸಿದ ವಸ್ತುಗಳಿಗೆ ಮಾರಾಟ ವ್ಯವಸ್ಥೆ ಮಾಡುವುದಾಗಿದೆ. ಕೋಲಾರ ಜಿಲ್ಲೆಯಲ್ಲಿನ ಕೈಗಾರಿಕಾ ಸಹಕಾರ ಸಂಘಗಳ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧೮**

(ಮೊತ್ತ ಲಕ್ಷ ರೂ.ಗಳಲ್ಲಿ)

| ವಿವರ | ವರ್ಷ |
|---|---|

| | | ೧೯೯೫–೯೬ | ೨೦೦೦–೦೧ | ೨೦೦೨–೦೩ |
|---|---|---|---|---|
| ೧ | ಸಂಘಗಳ ಸಂಖ್ಯೆ | ೩೬ | ೪೨ | ೪೧ |
| ೨ | ಒಟ್ಟು ಸದಸ್ಯರು (ಸಾವಿರಗಳಲ್ಲಿ) | ೪ | ೫ | ೫ |
| ೩ | ಷೇರು ಬಂಡವಾಳ | ೧೬.೫ | ೨೦.೩೪ | ೨೦.೩೫ |
| | ಸರ್ಕಾರದ ಪಾಲು | ೫.೭೭ | ೫.೭೭ | ೫.೭೭ |
| ೪ | ದುಡಿಯುವ ಬಂಡವಾಳ | ೯೪.೮೮ | ೧೦೧.೯೮ | ೯೯.೦೧ |
| ೫ | ಲಾಭ (+)/ನಷ್ಟ (–) | –.೯೦ | –೩೨.೨೧ | –೨೦.೮೦ |

ಆಧಾರ: ಜಿಲ್ಲಾ ಸಹಕಾರ ಇಲಾಖೆ, ಕೋಲಾರ

### ವೃಕ್ಷ ಬೆಳೆಗಾರರ ಸಹಕಾರ ಸಂಘಗಳು

ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುವ ಈ ಸಹಕಾರ ಸಂಘಗಳ ಮೂಲ ಉದ್ದೇಶ ಸರ್ಕಾರಿ ಬರಡು ಭೂಮಿಯನ್ನು ಅಲ್ಪಾವಧಿ ಗುತ್ತಿಗೆಗೆ ಪಡೆದು ಅಲ್ಲಿ ವಿವಿಧ ಜಾತಿಯ ಮರಗಳನ್ನು ಬೆಳೆಸುವ ಮೂಲಕ ವಿನಾಶದ ಹಾದಿಯಲ್ಲಿರುವ ಗ್ರಾಮೀಣ ಕಿರು ಅರಣ್ಯಗಳಿಗೆ ಜೀವ ತುಂಬಿಸುವುದೇ ಆಗಿದೆ. ಈ ರೀತಿಯ ಅರಣ್ಯಗಳನ್ನು ಬೆಳೆಸುವುದರಿಂದ ಪರಿಸರ ಸಂರಕ್ಷಣೆಯ ಜೊತೆಗೆ ಅಂತರರ್ಜಲ ವೃದ್ಧಿ, ಮೇವು, ಉರುವಲು ಹಾಗೂ ಬೇಸಾಯಕ್ಕಾಗಿ ಸಾವಯವ ಪೋಷಕಾಂಶದ ಸಂವೃದ್ಧಿ ಮುಂತಾದವುಗಳ ಪೂರೈಕೆ ತಾನಾಗಿಯೇ ಲಭಿಸುತ್ತದೆ. ಚಿಂತಾಮಣಿ ತಾಲೂಕಿನ ವೆಂಕಟಾಪುರ ಮತ್ತು ಶಿಡ್ಲಘಟ್ಟ ತಾಲೂಕಿನ ಮಲ್ಲೇನಹಳ್ಳಿಯಲ್ಲಿ ದಿನಾಂಕ: ೬–೧–೧೯೮೮ರಲ್ಲಿ ಪ್ರಪ್ರಥಮವಾಗಿ ಇಂತಹ ಸಹಕಾರಿ ಸಂಘಗಳನ್ನು ಸಂಘಟಿಸಲಾಯಿತು. ಜಿಲ್ಲೆಯಲ್ಲಿ ೨೦೦೪ರ ಮಾರ್ಚ್ ಅಂತ್ಯಕ್ಕೆ ೩೮ ವೃಕ್ಷ ಬೆಳೆಗಾರರ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ೧೭ ಸಂಘಗಳು ಮಾತ್ರ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರ ಸಂಘಗಳಿಗೆ ಬೇಕಾಗುವ ಆರ್ಥಿಕ ಸಹಾಯವನ್ನು ಕೆನೆಡಿಯನ್ ಅಂತರರಾಷ್ಟ್ರೀಯ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದ ನೆರವಿನಿಂದ ರಾಷ್ಟ್ರೀಯ ವೃಕ್ಷ ಬೆಳೆಗಾರರ ಸಹಕಾರ ಮಹಾಮಂಡಳವೇ (ಇದು ಗುಜರಾತಿನ ಆನಂದ್‌ನಲ್ಲಿದೆ) ಸಹಾಯ ಧನದ ರೂಪದಲ್ಲಿ ಕೊಡಮಾಡುತ್ತದೆ. ಜೊತೆಗೆ ಈ ಸಂಘಗಳ ಮಧ್ಯೆಯೇ ಇದ್ದುಕೊಂಡು ಸೂಕ್ತ ಮಾರ್ಗದರ್ಶನವನ್ನು ನೀಡಲು ಅನುಕೂಲವಾಗುವಂತೆ ವಲಯ ಮುಖ್ಯಸ್ಥರ ತಂಡವನ್ನು ಸಹ ನೇಮಿಸಲಾಗಿದೆ. ಇದರ ಕಛೇರಿ ಚಿಂತಾಮಣಿಯಲ್ಲಿದ್ದು, ಹಿರಿಯ ಯೋಜನಾ ಕಾರ್ಯನಿರ್ವಾಹಕರು ಮುಖ್ಯಸ್ಥರಾಗಿದ್ದಾರೆ. ಇವರ ಜೊತೆಗೆ ನುರಿತ ತಂಡವೇ ಯೋಜನೆಯ ಯಶಸ್ವಿಗೆ ಶ್ರಮಿಸುತ್ತಿದೆ. ಸಹಕಾರ ಸಂಘದ ಸಂಘಟನೆಯಿಂದ ಹಿಡಿದು ಬರಡು ಭೂಮಿಯ ಗುರ್ತಿಸುವಿಕೆ, ಭೂ ಅಭಿವೃದ್ಧಿ, ಸಸಿಗಳ ನಾಟಿ, ಪೋಷಣೆ, ಸಂರಕ್ಷಣೆ, ಟ್ರೆಂಚಿಂಗ್, ತಡೆ ಒಡ್ಡುಗಳ ನಿರ್ಮಾಣ ಮುಂತಾದ ಎಲ್ಲಾ ಕೆಲಸಗಳಿಗೂ ಇವರ ಮಾರ್ಗದರ್ಶನ, ಸೂಚನೆ, ಸಲಹೆಗಳು ಲಭಿಸುತ್ತವೆ. ಕೋಲಾರ ಜಿಲ್ಲೆಯಲ್ಲಿ ಈವರೆಗೆ ಈ ಸಹಕಾರಿ ಸಂಘಗಳು ೮೦೦ ಹೆಕ್ಟೇರಿಗೂ ಮೀರಿ ಬರಡು ಭೂಮಿಯಲ್ಲಿ ಬೆಳೆಸಿರುವ ಕಾಡು ಬಯಲು ಸೀಮೆಯ ವನಸಂಪತ್ತನ್ನು ಹೆಚ್ಚಿಸಿರುವುದರ ಜೊತೆಗೆ ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಸಂಪತ್ತು ಸಹ ಈ ಪ್ರದೇಶದ ಜನಗಳಿಗೆ ವರದಾನವಾಗಿ ಲಭಿಸುವಂತಾಗಿದೆ.

### ಕೋಲಾರ ಜಿಲ್ಲಾ ಸಹಕಾರಿ ಯೂನಿಯನ್, ಕೋಲಾರ

ಸಹಕಾರಿ ಆಂದೋಲನದ ವ್ಯಾಪಕ ಮತ್ತು ಹಿತಕರ ಬೆಳವಣಿಗೆಯಲ್ಲಿ ಸಹಕಾರಿ ಯೂನಿಯನ್‌ಗಳು ಪ್ರಾರಂಭದಿಂದಲೂ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ಮೂಲಭೂತ ಸಹಕಾರ ತತ್ವಗಳ ಪ್ರಚಾರ,

ಸಂಘಗಳ ರಚನೆಗೆ ಮಾರ್ಗದರ್ಶನ, ಸದಸ್ಯರಿಗೆ ಮತ್ತು ಆಡಳಿತ ವರ್ಗದವರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ, ಸಹಕಾರಿ ಧೋರಣೆಯ ನಿರೂಪಣೆ, ಸದಸ್ಯರಿಗೆ ಸಹಕಾರಿ ಶಿಕ್ಷಣದ ಪ್ರಚಾರ ಮುಂತಾದವು ಈ ಸಂಸ್ಥೆಗಳ ಪ್ರಮುಖ ಉದ್ದೇಶಗಳು. ರಾಜ್ಯ ಪುನರ್ರಚನೆಯ ನಂತರ ರಾಜ್ಯ ಮಟ್ಟದಲ್ಲಿ ಪುನರ್ರಚನೆಗೊಂಡ ರಾಜ್ಯ ಸಹಕಾರಿ ಯೂನಿಯನ್ (ಈಗ ಸಹಕಾರ ಮಹಾಮಂಡಳ), ಬೆಂಗಳೂರು, ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರವಹಿಸುತ್ತಿದೆ. ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದೆ.

ಕೋಲಾರ ಜಿಲ್ಲೆಯ ಕಾರ್ಯವ್ಯಾಪ್ತಿಯನ್ನು ಹೊಂದಿದಂತೆ ಕೋಲಾರದಲ್ಲಿ ೧೯೬೦ರಲ್ಲಿ ಸ್ಥಾಪನೆಯಾದ ಕೋಲಾರ ಜಿಲ್ಲಾ ಸಹಕಾರಿ ಯೂನಿಯನ್, ರಾಜ್ಯ ಸಹಕಾರ ಮಹಾಮಂಡಳದ ಮಾರ್ಗದರ್ಶನದ ಮೇರೆಗೆ ಸಹಕಾರಿ ತತ್ವಗಳಾದ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವ ಮೂಲಕ ಸಹಕಾರದ ಉದ್ದೇಶ ಹಾಗೂ ತತ್ವಗಳನ್ನು ಪ್ರಚಾರ ಮಾಡಿ ಸಹಕಾರ ಚಳವಳಿಯ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿನ ಎಲ್ಲಾ ತರಹದ ಸಹಕಾರ ಸಂಘಗಳನ್ನು ಬಲಪಡಿಸುವುದು, ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಮಾರ್ಗದರ್ಶನ ನೀಡುವುದು ಮುಂತಾದವು ಈ ಸಂಸ್ಥೆಯ ಉದ್ದೇಶಗಳಲ್ಲಿ ಸೇರಿವೆ. ಜಿಲ್ಲೆಯಲ್ಲಿನ ಎಲ್ಲಾ ಬಗೆಯ ಸಹಕಾರ ಸಂಘಗಳು ಈ ಯೂನಿಯನ್ನಿನ ಸದಸ್ಯತ್ವವನ್ನು ಪಡೆಯಬಹುದಾಗಿದೆ. (ಮೊತ್ತ ಕೋಟಿ ರೂಗಳಲ್ಲಿ) ೨೦೦೫ರ ಜನವರಿ ಅಂತ್ಯಕ್ಕೆ ಒಟ್ಟು ೧೧೦೫ ಸಹಕಾರ ಸಂಘಗಳು ಈ ಯೂನಿಯನ್ನಿನ ಸದಸ್ಯತ್ವವನ್ನು ಪಡೆದಿದ್ದವು. ಆಜೀವ ಸದಸ್ಯತ್ವ ಚಂದಾ, ಸಹಕಾರ ಸಂಘಗಳ ಸಹಾಯಧನ ಮತ್ತು ವಂತಿಗೆಗಳು, ಕಟ್ಟಡಗಳ ಹಾಗೂ ಸಭಾಂಗಣದ ಬಾಡಿಗೆಯಿಂದ ಬರುವ ಆದಾಯ, ಮಹಾಮಂಡಳ ನೀಡುವ ವಿಶೇಷ ಕಾರ್ಯಕ್ರಮಗಳ ಸಹಾಯಧನ ಮತ್ತು ಸಿಬ್ಬಂದಿಗಾಗಿ ಮಹಾಮಂಡಳ ನೀಡುವ ಸಹಾಯಧನ, ಇವು ಜಿಲ್ಲಾ ಯೂನಿಯನ್ನಿನ ಆದಾಯದ ಮೂಲಗಳಾಗಿವೆ.

## ವ್ಯಾಪಾರ ಮತ್ತು ವಾಣಿಜ್ಯ

ಜಿಲ್ಲೆಯಲ್ಲಿ ಮಧ್ಯಯುಗದ ಅಂತ್ಯದ ಸಮಯದಲ್ಲಿ ವಸ್ತು ವಿನಿಮಯ ಪದ್ಧತಿಯೇ ವ್ಯಾಪಾರದ ಪ್ರಮುಖ ವಿಧಾನವಾಗಿತ್ತೆಂದು ತಿಳಿದುಬರುತ್ತದೆ. ಈ ಪ್ರದೇಶದ ಹೆಚ್ಚುವರಿ ಆಹಾರಧಾನ್ಯಗಳು ನೆರೆಯ ಪ್ರದೇಶಗಳಿಗೆ ರಫ್ತಾಗುತ್ತಿದ್ದವು. ಅಲ್ಲದೇ ಜಿಲ್ಲೆಯಲ್ಲಿ ಬೇಡಿಕೆ ಇದ್ದ ನೆರೆಯ ಪ್ರದೇಶದಲ್ಲಿನ ಹೆಚ್ಚುವರಿ ವಸ್ತುಗಳು ಆಮದಾಗುತ್ತಿದ್ದವು. ವಿವರವಾದ ಮತ್ತು ನಿಖರವಾದ ಮಾಹಿತಿ ಒದಗಿಸುವ ದಾಖಲೆಗಳ ಅಭಾವದ ಕಾರಣ, ಜಿಲ್ಲೆಯ ಆರ್ಥಿಕ ಪ್ರಗತಿಗೆ ಈ ರೀತಿಯ ವ್ಯಾಪಾರ ಪದ್ಧತಿ ಯಾವ ಪ್ರಮಾಣದಲ್ಲಿ ಪ್ರಭಾವ ಬೀರಿತ್ತೆಂದು ಹೇಳಲು ಸಾಧ್ಯವಾಗದಾದರೂ, ಅಂದಿನ ದಿನಗಳಲ್ಲಿ ವ್ಯಾಪಾರ ಕ್ರಮವನ್ನು ರೂಪಿಸುವಲ್ಲಿ ಆಮದು ಮತ್ತು ರಫ್ತು ವ್ಯಾಪಾರವು ನಿಶ್ಚಿತ ಪಾತ್ರವಹಿಸಿತ್ತೆಂದು ಹೇಳಬಹುದು. ರಸ್ತೆ ಹಾಗೂ ಇತರ ಪೂರಕ ವ್ಯವಸ್ಥೆಯ ಅಭಾವದ ನಡುವೆಯೂ ಹಿಂದಿನ ಕಾಲದಲ್ಲಿ ಕೋಲಾರ ಮತ್ತು ನೆರೆಯ ಜಿಲ್ಲೆಗಳ ನಡುವೆ ವ್ಯಾಪಾರ ವಿನಿಮಯ ಉತ್ತಮವಾಗಿತ್ತೆಂದು ಆಧಾರಗಳಿಂದ ತಿಳಿದು ಬರುತ್ತದೆ. ಚೋಳರ ಕಾಲದಲ್ಲಿ (೧೧ ನೇ ಶತಮಾನ) ಕಾಂಚೀಪುರಂ ಮತ್ತು ಮೈಸೂರು ರಾಜ್ಯದ ಪೂರ್ವಭಾಗದ ಪ್ರದೇಶಗಳ ನಡುವೆ ನಡೆಯುತ್ತಿದ್ದ ವ್ಯಾಪಾರ ವಹಿವಾಟು ಪ್ರಸಿದ್ಧಿ ಪಡೆದಿತ್ತೆಂದು ಚಾರಿತ್ರಿಕ ದಾಖಲೆಗಳಿಂದ ತಿಳಿದುಬರುತ್ತದೆ. ಅಂದಿನ ಕಾಲದಲ್ಲಿ ಬತ್ತವನ್ನು ಆಮದು ಮಾಡಿಕೊಂಡು ಸಂತೆ ಹಾಗೂ ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು. ಮಾರುಕಟ್ಟೆಗಳಲ್ಲಿ ಸ್ಥಳೀಯರಿಗೆ ಅಗತ್ಯವಾದ ಸಾಮಗ್ರಿಗಳು ದೊರೆಯುತ್ತಿದ್ದವು. ಅಲ್ಲದೇ ಜನರು ಸ್ಥಳೀಯವಾಗಿ ಉತ್ಪಾದಿಸಿದ ವಸ್ತುಗಳೊಂದಿಗೆ ಅವುಗಳನ್ನು

ವಿನಿಮಯ ಸಹ ಮಾಡಿಕೊಳ್ಳುತ್ತಿದ್ದರು. ನಗದು ಇಲ್ಲವೇ ವಸ್ತು ವಿನಿಮಯ ರೂಪದಲ್ಲಿ ಹಾಗೂ ಹರಾಜು ಪದ್ಧತಿ ಮೂಲಕ ವ್ಯಾಪಾರ ನಡೆಯುತ್ತಿತ್ತು. ಹೊಯ್ಸಳರ ಕಾಲದಲ್ಲಿ ಮತ್ತು ನಂತರದ ವಿಜಯನಗರ ಅರಸರ ಕಾಲದಲ್ಲಿ ಇತರೆಡೆಯಂತೆ ಈ ಪ್ರದೇಶದಲ್ಲೂ ವ್ಯಾಪಾರವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆಗಾಗಿನ ರಾಜಕೀಯ ಬದಲಾವಣೆಗಳು ಮುಕ್ತ ವ್ಯಾಪಾರಕ್ಕೆ ಅಡಚಣೆ ಉಂಟುಮಾಡಿದ್ದರೂ, ಪ್ರಮುಖ ಮಾರುಕಟ್ಟೆಗಳಿಗೆ ವ್ಯಾಪಾರದ ಸರಕುಗಳು ರವಾನೆಯಾಗುತ್ತಲೇ ಇದ್ದವು. ಎತ್ತಿನಗಾಡಿ ಮತ್ತು ಹೇರು ಪ್ರಾಣಿಗಳು ಸಾರಿಗೆಯ ಮುಖ್ಯ ಸಾಧನಗಳಾಗಿದ್ದವು. ಸೇನಾಪಡೆಗಳ ಸಂಚಾರಕ್ಕಾಗಿ ನಿರ್ಮಿಸಲಾದ ರಸ್ತೆಗಳ ಮೂಲಕ ಪ್ರಾಣಿಗಳ ಮೇಲೆ ಸರಕುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತಿದ್ದರು.

ಟಿಪ್ಪು ಸುಲ್ತಾನನ ಕಾಲದವರೆಗೆ ಯಾವುದೇ ಬಗೆಯ ವ್ಯಾಪಾರೀ ನಿಬಂಧನೆಗಳು ಇರಲಿಲ್ಲವೆಂದು ತಿಳಿದು ಬರುತ್ತದೆ. ಟಿಪ್ಪು ತನ್ನ ಕಾಲದಲ್ಲಿ ಹಲವಾರು ವಾಣಿಜ್ಯಕ ನಿಬಂಧನೆಗಳನ್ನು ಜಾರಿಗೆ ತಂದು ವ್ಯಾಪಾರ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳನ್ನು ರೂಪಿಸಿದ್ದನು. ವಿದೇಶಿಯರೊಂದಿಗೆ ಕೈಗೊಳ್ಳುವ ಯಾವುದೇ ವಾಣಿಜ್ಯಕ ವ್ಯವಹಾರ ಅಪಾಯಕರವೆಂದು ಆತನು ಭಾವಿಸಿದ್ದನು. ಪ್ರಾರಂಭದ ವರ್ಷಗಳಲ್ಲಿ ರಫ್ತು ವ್ಯಾಪಾರವನ್ನು ಸಂಪೂರ್ಣವಾಗಿ ನಿಷೇಧಿಸಿದ್ದನು. ಸ್ಥಳೀಯ ಉತ್ಪಾದಿತ ವಸ್ತುಗಳು ಮತ್ತು ದವಸಧಾನ್ಯಗಳು ರಾಜ್ಯದಲ್ಲೇ ಬಳಕೆಯಾಗಬೇಕೆಂದು ಆಜ್ಞಾಪಿಸಿದ್ದನು. ಆಮದು-ರಫ್ತು ವ್ಯಾಪಾರ ಆಂತರಿಕ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದೆಂಬ ಕಾರಣದಿಂದ ತನ್ನ ಪ್ರದೇಶದಲ್ಲಿ ಟಿಪ್ಪು ರಫ್ತು ವ್ಯಾಪಾರವನ್ನು ನಿಷೇಧಿಸಿದ್ದನು. ಆಮದು ವ್ಯಾಪಾರವನ್ನು ಸಹ ಸಂಪೂರ್ಣವಾಗಿ ನಿಷೇಧಿಸಿದ್ದನು. ಸ್ವಾವಲಂಬನೆ ಮತ್ತು ಬೆಲೆಗಳಲ್ಲಿ ಸ್ಥಿರತೆಯನ್ನು ಒದಗಿಸುವಲ್ಲಿ ಈ ವ್ಯವಸ್ಥೆ ಪ್ರಯೋಜನಕಾರಿಯಾಗುವುದೆಂದು ಭಾವಿಸಿದ್ದನು. ಈ ಕ್ರಮಗಳು ಸ್ಥಳೀಯ ತಯಾರಿಕೆ ಹಾಗೂ ಉತ್ಪಾದನೆಗೆ ಉತ್ತೇಜನ ದೊರಕಿಸಿಕೊಟ್ಟಿದ್ದವು. ಟಿಪ್ಪುವಿನ ಆಡಳಿತ ಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಪ್ರಗತಿಯನ್ನು ಸಾಧಿಸಿದ್ದವು. ಟಿಪ್ಪುವು ಬ್ರಿಟೀಷರ ಬದ್ಧವೈರಿಯಾಗಿದ್ದರೂ, ವಾಣಿಜ್ಯ ವ್ಯಾಪಾರ ಕ್ಷೇತ್ರದಲ್ಲಿ ಬ್ರಿಟೀಷರು ಹೊಂದಿದ್ದ ನೈಪುಣ್ಯತೆಯನ್ನು ತಾನು ತಿಳಿದುಕೊಳ್ಳುವಲ್ಲಿ ಹಿಂದೆ ಬೀಳಲಿಲ್ಲ. ಆತನು ಆಂತರಿಕ ವ್ಯಾಪಾರ ವಾಣಿಜ್ಯ ಕ್ಷೇತ್ರದ ರಕ್ಷಣೆ ಮತ್ತು ಬೆಳವಣಿಗೆಗೆ ಬ್ರಿಟೀಷ್ ಮಾದರಿಯ ವ್ಯವಸ್ಥೆಯನ್ನೇ ಅನುಕರಿಸಲು ಕ್ರಮ ಕೈಗೊಂಡಿದ್ದನು. ರಾಜ್ಯದ ವಾಣಿಜ್ಯ ವ್ಯವಸ್ಥೆಯ ನಿಯಂತ್ರಣಕ್ಕಾಗಿ ಒಂಬತ್ತು ವ್ಯಾಪಾರಿ ಕಮೀಷನರ್‌ಗಳಿದ್ದ ಒಂದು ಸಮಿತಿಯನ್ನು ರಚಿಸಿದ್ದನು. ಪ್ರಮುಖ ನಗರ ಕೇಂದ್ರಗಳಲ್ಲಿ ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಅಂಗಡಿಗಳನ್ನು ತೆರೆದು ಗ್ರಾಹಕರ ಅನುಕೂಲಕ್ಕೆ ವಸ್ತುಗಳನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಪದ್ಧತಿಯನ್ನು ಜಾರಿಗೆ ತಂದಿದ್ದನು. ರಫ್ತು ವ್ಯಾಪಾರ ಆಂತರಿಕ ಆರ್ಥವ್ಯವಸ್ಥೆಗೆ ತೊಂದರೆ ಉಂಟು ಮಾಡುವುದೆಂದು ಹಿಂದೆ ಭಾವಿಸಿದ್ದ ಟಿಪ್ಪು ನಂತರದಲ್ಲಿ ರಫ್ತು ವ್ಯಾಪಾರ ರಾಜ್ಯಕ್ಕೆ ಹೆಚ್ಚು ಆದಾಯ ಗಳಿಸಿಕೊಡುವುದೆಂದು ಗ್ರಹಿಸಿ ಪ್ರದೇಶದಲ್ಲಿನ ಅತಿರಿಕ್ತ ವಸ್ತುಗಳ ರಫ್ತಿಗೆ ಅವಕಾಶ ಮಾಡಿಕೊಟ್ಟಿದ್ದನು. ಏನೇ ಆದರೂ ವ್ಯಾಪಾರದ ಎಲ್ಲ ಲಾಭಗಳು ಸರ್ಕಾರಕ್ಕೇ ಬರಬೇಕೆಂಬ ಅಭಿಲಾಷೆಯನ್ನು ಟಿಪ್ಪುವು ಹೊಂದಿದ್ದನೆಂದು ಹೇಳಲಾಗುತ್ತದೆ.

ಟಿಪ್ಪುವಿನ ಪತನಾನಂತರ ರಾಜ್ಯದ ವ್ಯಾಪಾರ-ವಾಣಿಜ್ಯ ಪರಿಸ್ಥಿತಿಯಲ್ಲಿ ಅಂತಹ ಮಹತ್ತರವಾದ ಬದಲಾವಣೆಗಳೇನು ಉಂಟಾಗಲಿಲ್ಲ. ಆ ದಿನಗಳಲ್ಲಿ ಶೋಷಣೆಯಿಂದ ಕೂಡಿದ ಸುಂಕ ವ್ಯವಸ್ಥೆ ವ್ಯಾಪಾರೋದ್ಯಮಕ್ಕೆ ತೊಂದರೆಯನ್ನುಂಟುಮಾಡಿತ್ತು. ರಾಜ್ಯದ ಇತರೇ ಪ್ರದೇಶಗಳಲ್ಲಿದ್ದಂತೆ ಕೋಲಾರ ಜಿಲ್ಲೆಯಲ್ಲೂ ಹಲವಾರು ಸುಂಕದ ಕಟ್ಟೆಗಳಿದ್ದವು. ಈ ಸುಂಕದ ಕಟ್ಟೆಗಳಲ್ಲಿ ವ್ಯಾಪಾರಸ್ಥರ ಮೇಲೆ ಸ್ಥಳಾದಾಯ ಸುಂಕ, ಮಾರ್ಗಾದಾಯ ಸುಂಕ ಮತ್ತು ಮಾಮೂಲು ಆದಾಯ ಸುಂಕ ಎಂದು ಸುಂಕಗಳನ್ನು ಹೇರಲಾಗುತ್ತಿತ್ತು. ಇಂತಹ ಸುಂಕದ ಕಟ್ಟೆಗಳನ್ನು ಸರ್ಕಾರದಿಂದ ಗುತ್ತಿಗೆ ಪಡೆದ

ಗುತ್ತಿಗೆದಾರರು ನಿರ್ವಹಿಸುತ್ತಿದ್ದರು. ಕೆಲವಿಶೇಷ ವರ್ಗದ ಜನರಿಗೆ ಸುಂಕಗಳಿಂದ ಭಾಗಶಃ ಅಥವಾ ಪೂರ್ಣ ರಿಯಾಯಿತಿಯನ್ನು ಅಂದಿನ ಸರ್ಕಾರ ನೀಡಿತ್ತು. ಸರ್ಕಾರದ ವಿಚಿತ್ರ ಸುಂಕ ಪದ್ಧತಿ ವ್ಯಾಪಾರಿಗಳ ಮನಸ್ಸಿನಲ್ಲಿ ಒಂದು ರೀತಿಯ ಗೊಂದಲವನ್ನುಂಟು ಮಾಡಿತ್ತು. ಅತಿ ಹೊರೆಯಿಂದ ಕೂಡಿದ ಸುಂಕ ವ್ಯವಸ್ಥೆಯಿಂದಾಗಿ ಪ್ರದೇಶದ ಸಮಗ್ರ ವ್ಯಾಪಾರ ಸುಂಕದ ಗುತ್ತಿಗೆದಾರರು ಅಥವಾ ಅವರ ಅಧೀನರ ಕೈಯಲ್ಲೇ ಕೇಂದ್ರೀಕೃತವಾಗಿತ್ತು. ರಾಜಾಶ್ರಯದ ಆಶೀರ್ವಾದಕ್ಕೊಳಗಾದ ಪ್ರಭಾವಶಾಲಿ ಕೆಲ ವರ್ತಕರು ಹೊಂದಿದ್ದ ವ್ಯಾಪಾರದ ಏಕಸ್ವಾಮ್ಯವೂ ಒಂದು ರೀತಿಯಲ್ಲಿ ಹಾನಿಕರವಾಗಿತ್ತು. ಈ ವ್ಯವಸ್ಥೆ ಬ್ರಿಟೀಷ್ ಸರ್ಕಾರ ೧೮೩೧ರಲ್ಲಿ ಮೈಸೂರಿನ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವವರೆಗೂ ಮುಂದುವರಿಯಿತು. ಬ್ರಿಟೀಷರು ಅಧಿಕಾರ ವಹಿಸಿಕೊಂಡ ನಂತರ ಪ್ರಾದೇಶಿಕ ವಾಣಿಜ್ಯ ವ್ಯವಸ್ಥೆ ಹಾಗೂ ಸ್ಥಳೀಯ ಪರಿಸ್ಥಿತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ಮೇಲೆ ಸುಂಕ ವ್ಯವಸ್ಥೆಯಲ್ಲಿನ ಗೊಂದಲವನ್ನು ನಿವಾರಿಸಲು ಪ್ರಯತ್ನಿಸಿದರು. ಅದರಂತೆ ಹಂತಹಂತವಾಗಿ ಸುಂಕ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತಂದು ಅನಾವಶ್ಯಕ ಸುಂಕಗಳನ್ನು ತೆಗೆದುಹಾಕಲಾಯಿತು. ವ್ಯಾಪಾರದ ವ್ಯವಸ್ಥಿತ ಬೆಳವಣಿಗೆಗಾಗಿ ೧೮೭೯–೮೦ರಲ್ಲಿ ಹಿಂದಿನ ಸುಂಕ ವ್ಯವಸ್ಥೆಯನ್ನು ತೆಗೆದುಹಾಕಿ ಅದರ ಬದಲಿಗೆ ಆಕ್ಟ್ರಾಯ್ ಸುಂಕ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ವರ್ಷಗಳಲ್ಲೇ ಕೋಲಾರ ಸಹ ವ್ಯಾಪಾರದ ಒಂದು ಪ್ರಮುಖ ಕೇಂದ್ರವಾಗಿತ್ತು. ಶಿಡ್ಲಘಟ್ಟದ ವರ್ತಕರು ಅಡಕೆ, ಕರಿಮೆಣಸು ಮತ್ತು ಇತರ ವಸ್ತುಗಳನ್ನು ಖರೀದಿಸಲು, ಹಾಗೆಯೇ ತಮ್ಮಲ್ಲಿ ತಯಾರಾಗುತ್ತಿದ್ದ ಹತ್ತಿ ಬಟ್ಟೆ ಮತ್ತು ನೆರೆಯ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಹೊಗೆಸೊಪ್ಪು (ತಂಬಾಕು) ಮಾರುವ ಉದ್ದೇಶದಿಂದ ಮಂಗಳೂರಿಗೆ ಮತ್ತು ನಗರಕ್ಕೆ ಹೋಗಿಬರುತ್ತಿದ್ದರು. ಇಲ್ಲಿನ ವರ್ತಕರು ವಾಲಾಜಪೇಟೆಯ ವ್ಯಾಪಾರಿಗಳೊಂದಿಗೂ ಅಡಕೆ ಮತ್ತು ಕರಿಮೆಣಸಿನ ವ್ಯಾಪಾರವನ್ನು ನಡೆಸುತ್ತಿದ್ದರು. ಇವರು ಮದ್ರಾಸಿನ (ಚೆನ್ನೈ) ಬಂದರಿಗೆ ಆಮದಾಗುತ್ತಿದ್ದ ವಸ್ತುಗಳನ್ನು ತಮ್ಮಲ್ಲಿಗೆ ತರುತ್ತಿದ್ದರು. ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಗುಡಿಬಂಡೆ ತಾಲೂಕುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ತಯಾರಾಗುತ್ತಿದ್ದ ಬೆಲ್ಲ ಮತ್ತು ಎರಡು ಬಗೆಯ ಸಕ್ಕರೆ, ಬಳ್ಳಾರಿ, ಮದ್ರಾಸ್ (ಚೆನ್ನೈ) ಮತ್ತು ಹೈದರಾಬಾದಿಗೆ ರಫ್ತಾಗುತ್ತಿತ್ತು. ಒರಟು ಕಂಬಳಿಗಳು, ಮಡಕೆ–ಕುಡಿಕೆಗಳು, ಕಚ್ಚಾ ರೇಷ್ಮೆ, ಬಳೆ, ಹೊಂಗೆಬೀಜ ಇವು ಜಿಲ್ಲೆಯಿಂದ ರಫ್ತಾಗುತ್ತಿದ್ದ ಇತರ ವಸ್ತುಗಳಾಗಿದ್ದವು. ಜಿಲ್ಲೆಯ ಮುಖ್ಯ ಆಮದು ವಸ್ತುಗಳೆಂದರೆ ಕಡಲ ಉಪ್ಪು, ಕಾಗದ, ಹತ್ತಿ ಮತ್ತು ರೇಷ್ಮೆ ಬಟ್ಟೆಗಳು, ಎಣ್ಣೆ, ಮನೆಪಾತ್ರೆ, ಹಿತ್ತಾಳೆ, ನಾರಿನ ವಸ್ತುಗಳು ಮುಂತಾದವು.

ರಾಜ್ಯದ ಆರ್ಥಿಕ ಅಭಿವೃದ್ಧಿಗೆ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆ ಸಹ ಅನಿವಾರ್ಯವೆಂದು ೧೯ನೆಯ ಶತಮಾನದ ಕೊನೆಯ ವೇಳೆಗೆ ಅಂದಿನ ಮೈಸೂರು ಸಂಸ್ಥಾನದ ಆಳರಸರು ತಿಳಿಯುವಂತಾದರು. ಹತ್ತನೆಯ ಚಾಮರಾಜ ಒಡೆಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತದ ಕಾಲದಲ್ಲಿ ರಾಜ್ಯದ ವ್ಯಾಪಾರ–ವಾಣಿಜ್ಯದ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿಸಿಕೊಡುವ ಉದ್ದೇಶದಿಂದ ರೈಲು ಮಾರ್ಗಗಳ ಹಾಗೂ ರಸ್ತೆಗಳ ವಿಸ್ತರಣಾ ಕಾರ್ಯವನ್ನು ಕೈಗೊಳ್ಳಲಾಯಿತು. ಕೋಲಾರ ಜಿಲ್ಲೆಯ ಮೂಲಕ ಹಾದುಹೋಗುತ್ತಿದ್ದ (೧೮೬೪ ರಿಂದ) ಬೆಂಗಳೂರು–ಮದ್ರಾಸ್ (ಚೆನ್ನೈ) ಬ್ರಾಡ್‌ಗೇಜ್ ರೈಲು ಮಾರ್ಗಕ್ಕೆ ೧೮೯೪ರಲ್ಲಿ ಬಂಗಾರಪೇಟೆ–ಮಾರಿಕುಪ್ಪಂ ಬ್ರಾಡ್‌ಗೇಜ್ ರೈಲು ಮಾರ್ಗವನ್ನು ಜೋಡಿಸಲಾಯಿತು. ಆಗಲೇ ತೊಂಡೆಬಾವಿ, ಗೌರಿಬಿದನೂರು ಮತ್ತು ವಿದುರಾಶ್ವತ್ಥಕ್ಕೆ ಮೀಟರ್‌ಗೇಜಿನ ರೈಲು ಮಾರ್ಗವನ್ನು ಕಲ್ಪಿಸಲಾಯಿತು. ಬೆಂಗಳೂರು–ಗುಂತಕಲ್ ಮಾರ್ಗದಲ್ಲಿ ಬರುವ ಈ ರೈಲು ಮಾರ್ಗವನ್ನು ೧೯೮೩ರಲ್ಲಿ ಬ್ರಾಡ್‌ಗೇಜಿಗೆ ಪರಿವರ್ತಿಸಲಾಯಿತು. ಸರ್ಕಾರ ಮತ್ತು ಸಾರ್ವಜನಿಕರ ಹೂಡಿಕೆ ಹಣದ ನೆರವಿನಿಂದ ಕೋಲಾರ ಜಿಲ್ಲಾ ಬೋರ್ಡು ೧೯೧೩ರಲ್ಲಿ ಬಂಗಾರಪೇಟೆ (ಕೋಲಾರದ

ಮೂಲಕ) ಮತ್ತು ಚಿಕ್ಕಬಳ್ಳಾಪುರ ನಡುವೆ ನ್ಯಾರೋಗೇಜಿನ ರೈಲು ಸಂಪರ್ಕವನ್ನು ಕಲ್ಪಿಸಿತು. ಈ ಮಾರ್ಗದ ಭಾಗವಾಗಿದ್ದ ಬಂಗಾರಪೇಟೆ-ಕೋಲಾರ ರೈಲು ಮಾರ್ಗವನ್ನು ಇತ್ತೀಚೆಗೆ ಬ್ರಾಡ್‌ಗೇಜಿಗೆ ಪರಿವರ್ತಿಸಲಾಗಿದೆ. ಕೋಲಾರ-ಚಿಕ್ಕಬಳ್ಳಾಪುರ ನ್ಯಾರೋಗೇಜ್ ಮಾರ್ಗ ಈಗ ಸ್ಥಗಿತಗೊಂಡಿದೆ (ಅಧ್ಯಾಯ ೭ ನೋಡಿ). ರಾಜ್ಯದ ವಾಣಿಜ್ಯ ಕ್ಷೇತ್ರವನ್ನು ವಿಸ್ತರಿಸಿ ಅದಕ್ಕೆ ಮತ್ತಷ್ಟು ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ಸರ್ಕಾರ ೨೦ನೇ ಶತಮಾನದ ಆರಂಭದಲ್ಲಿ ಮಾರುಕಟ್ಟೆಗಳಲ್ಲಿನ ಹಲವಾರು ಉತ್ಪಾದಿತ ವಸ್ತುಗಳ ಬಗ್ಗೆ ಸಮೀಕ್ಷೆಯನ್ನು ಕೈಗೊಂಡು ಅವುಗಳ ವ್ಯಾಪಾರ ವಹಿವಾಟಿನ ಬಗ್ಗೆ ಅಂಕಿಅಂಶಗಳ ಮಾಹಿತಿಯನ್ನು ಸಂಗ್ರಹಿಸಿತು. ರಾಜ್ಯದ ಒಟ್ಟಾರೆ ಆರ್ಥಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಅಂದಿನ ಸರ್ಕಾರ ಉತ್ಪಾದಕರು, ವ್ಯಾಪಾರಿಗಳು ಮತ್ತು ಬಂಡವಾಳದಾರರನ್ನು (ಬ್ಯಾಂಕರ್ಸ್) ಪ್ರೋತ್ಸಾಹಿಸಿತು. ಸ್ವಾತಂತ್ರ್ಯೋತ್ತರದ ವರ್ಷಗಳಲ್ಲಿ ರಾಜ್ಯದ ಕೈಗಾರಿಕೆಗಳ ಅಭಿವೃದ್ಧಿಗೆ ಮತ್ತು ವ್ಯಾಪಾರ-ವಾಣಿಜ್ಯದ ಪ್ರಗತಿಗೆ ಸರ್ಕಾರ ಹೆಚ್ಚು ಉತ್ತೇಜನ ನೀಡಿತಲ್ಲದೇ ರಫ್ತು ವ್ಯಾಪಾರದ ಬೆಳವಣಿಗೆಗೂ ವಿಶೇಷ ಪ್ರೋತ್ಸಾಹ ನೀಡಿತು. ಈ ಕ್ರಮಗಳು ವಾಣಿಜ್ಯೋದ್ಯಮವು ಹೊಸ ಅವಕಾಶಗಳೊಂದಿಗೆ ಹಂತಹಂತವಾಗಿ ಬೆಳೆಯಲು ದಾರಿ ಮಾಡಿಕೊಟ್ಟಿತಲ್ಲದೇ, ಜಿಲ್ಲೆಯ ಮತ್ತು ಒಟ್ಟಾರೆ ರಾಜ್ಯದ ಆಮದು-ರಫ್ತು ವ್ಯಾಪಾರದ ಪ್ರಗತಿಗೂ ಸಹಾಯಕವಾಯಿತು.

### ಆಮದು ಮತ್ತು ರಫ್ತು

ಯಾವುದೇ ಪ್ರದೇಶದ ಆಮದು ಮತ್ತು ರಫ್ತು ವ್ಯಾಪಾರ ಸರ್ವಕಾಲಕ್ಕೂ ಒಂದೇ ರೀತಿಯದಾಗಿರುವುದಿಲ್ಲ. ಅವು ಸ್ಥಳೀಯ ಜನರ ಬದಲಾಗುತ್ತಿರುವ ಬೇಡಿಕೆ, ಸ್ಥಳೀಯ ಉತ್ಪಾದನೆಗಳು, ಮಾರುಕಟ್ಟೆಯ ಸೌಲಭ್ಯ, ಔದ್ಯಮೀಕರಣ, ಜನಸಂಖ್ಯೆ ಹೆಚ್ಚಳ, ನಗರೀಕರಣ ಮುಂತಾದ ಹತ್ತು ಹಲವಾರು ಅಂಶಗಳನ್ನು ಅವಲಂಬಿಸಿರುತ್ತವೆ. ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಬಂಗಾರಪೇಟೆ ಪಟ್ಟಣಗಳು ಮೊದಲಿನಿಂದಲೂ ಜಿಲ್ಲೆಯ ಪ್ರಮುಖ ಸಗಟು ಮಾರಾಟ ಕೇಂದ್ರಗಳಾಗಿವೆ. ಇವು ಅತಿ ಹೆಚ್ಚಿನ ಆಮದು ಮತ್ತು ರಫ್ತು ವ್ಯಾಪಾರದ ಕೇಂದ್ರಗಳೂ ಆಗಿವೆ. ಮೆಣಸಿನಕಾಯಿ, ಆಲೂಗಡ್ಡೆ, ಈರುಳ್ಳಿ, ಕಡಲೆಕಾಯಿ, ಅಕ್ಕಿ ಮುಂತಾದವು ಇಲ್ಲಿನ ಪ್ರಮುಖ ಸರಕುಗಳಾಗಿದ್ದವು. ಇತ್ತೀಚಿನ ದಶಕಗಳಲ್ಲಿ ಗೌರಿಬಿದನೂರು, ಮಾಲೂರು, ಕೋಲಾರ, ಶ್ರೀನಿವಾಸಪುರ ಮತ್ತು ಮುಳಬಾಗಿಲು ಪಟ್ಟಣಗಳು ಸಹ ಸಗಟು ವ್ಯಾಪಾರದ ಕೇಂದ್ರಗಳಾಗಿ ಬೆಳೆಯುತ್ತಿವೆ. ಜಿಲ್ಲೆಯಲ್ಲಿನ ಆಮದು, ರಫ್ತು ಮತ್ತು ಅಲ್ಲಿ ತಯಾರಾಗುವ ಮೂರು ಪ್ರಮುಖ ವಸ್ತುಗಳನ್ನು ಕೋಷ್ಟಕ ೬.೧೯ರಲ್ಲಿ ನೀಡಲಾಗಿದೆ.

## ಕೃಷಿ ಉತ್ಪನ್ನ ಮಾರುಕಟ್ಟೆಗಳು

ವ್ಯವಸಾಯದ ಅಭಿವೃದ್ಧಿಗೆ ಪೂರಕವಾದ ಹಲವಾರು ಅಂಶಗಳಲ್ಲಿ ಕೃಷಿ ಉತ್ಪನ್ನಗಳ ಸುವ್ಯವಸ್ಥಿತ ಮಾರಾಟ ವ್ಯವಸ್ಥೆ ಸಹ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಕೃಷಿ ಉತ್ಪನ್ನಗಳ ನಿಯಂತ್ರಿತ ಮಾರುಕಟ್ಟೆ ಯೋಜನೆ ಕಾರ್ಯರೂಪಕ್ಕೆ ಬರುವ ಪೂರ್ವದಲ್ಲಿ ಬಹುಪಾಲು ಕೃಷಿ ಉತ್ಪನ್ನಗಳ ಮಾರಾಟವು ಸ್ಥಳೀಯ ವಾರದ ಸಂತೆ ಅಥವಾ ಮಾರುಕಟ್ಟೆಗಳಲ್ಲಿ ನೇರವಾಗಿ ಅಥವಾ ಮಧ್ಯವರ್ತಿಗಳ ಮೂಲಕ ನಡೆಯುತ್ತಿತ್ತು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಸಾಂಸ್ಥಿಕ ಸಾಲಸೌಲಭ್ಯದ ಅಭಾವ, ನಿಯಂತ್ರಿತ ಮಾರುಕಟ್ಟೆಗಳಿಲ್ಲದಿರುವಿಕೆ, ಅಳತೆ-ತೂಕಗಳಲ್ಲಿನ ಅಪ್ರಮಾಣಿಕತೆ, ಉಗ್ರಾಣಗಳ ಅಭಾವ, ಗುಣಮಟ್ಟವಿಲ್ಲದ ಹಾಗೂ ವರ್ಗೀಕರಿಸದ ಸರಕುಗಳು ಇವೇ ಮೊದಲಾದ ನ್ಯೂನತೆಗಳಿಂದ ವ್ಯವಸಾಯಗಾರರಿಗೆ ಶ್ರಮಕ್ಕೆ ಸಮನಾದ ಬೆಲೆ ಸಿಗದೆ ಅವರ ಆರ್ಥಿಕ ಪರಿಸ್ಥಿತಿಯು ತುಂಬಾ ಕಷ್ಟಕರವಾಗಿತ್ತು. ಈ ಶೋಚನೀಯ ಪರಿಸ್ಥಿತಿಯಿಂದ ವ್ಯವಸಾಯಗಾರರನ್ನು

ರಕ್ಷಿಸುವ ಉದ್ದೇಶದಿಂದ ಅಂದಿನ ಕೇಂದ್ರ ಸರ್ಕಾರ ೧೯೨೭ರಲ್ಲಿ ಕೃಷಿಗೆ ಸಂಬಂಧಪಟ್ಟ ರಾಯಲ್ ಆಯೋಗವನ್ನು ನಿಯಮಿಸಿತು. ಆ ಆಯೋಗವು ವ್ಯವಸಾಯಗಾರರ ಪರಿಸ್ಥಿತಿಯನ್ನು ಸುಧಾರಿಸಲು ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿತು.

ಕೃಷಿಕರ ವ್ಯವಸಾಯೋತ್ಪನ್ನಗಳಿಗೆ ಉತ್ತಮ ಬೆಲೆ ಮತ್ತು ಮಾರಾಟದ ಅನುಕೂಲತೆಗಳನ್ನು ಒದಗಿಸಿ ಕೊಡುವ ಉದ್ದೇಶದಿಂದ ಹಿಂದಿನ ಮೈಸೂರು ಸಂಸ್ಥಾನದಲ್ಲೂ ಮೊದಲ ಬಾರಿಗೆ ೧೯೩೯ರಲ್ಲಿ ಮೈಸೂರು ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆಯನ್ನು ರೂಪಿಸಲಾಯಿತು. ನಂತರ ೧೯೪೭ರಲ್ಲಿ ಮೈಸೂರು ವ್ಯವಸಾಯೋತ್ಪನ್ನ ಮಾರುಕಟ್ಟೆ ನಿಯಮಗಳನ್ನುರಚಿಸಲಾಯಿತು. ಇವು ರಾಜ್ಯದಲ್ಲಿ ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟವು. ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಜಿಲ್ಲೆಯ ಮೊದಲ ಮಾರುಕಟ್ಟೆ ಸಮಿತಿಯನ್ನು ೧೯೫೪ರಲ್ಲಿ ಸ್ಥಾಪಿಸಲಾಯಿತು. ನಂತರ ೧೯೬೩ರಲ್ಲಿ ಚಿಕ್ಕಬಳ್ಳಾಪುರ ಮತ್ತು ಮುಳಬಾಗಿಲು ಈ ಸ್ಥಳಗಳಲ್ಲಿ ಮಾರುಕಟ್ಟೆ ಸಮಿತಿಯನ್ನು, ೧೯೬೪ರಲ್ಲಿ ಗೌರಿಬಿದನೂರಿನಲ್ಲಿ ಮತ್ತೊಂದು ಮಾರುಕಟ್ಟೆ ಸಮಿತಿಯನ್ನು ಸ್ಥಾಪಿಸಲಾಯಿತು.

**ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ೧೯೬೬**

ಕೃಷಿ ಉತ್ಪನ್ನಗಳ ಮಾರಾಟಕ್ಕೆ ಇನ್ನೂ ಹೆಚ್ಚಿನ ಸೌಲಭ್ಯ ಮತ್ತು ರಾಜ್ಯಾದ್ಯಂತ ನಿಯಂತ್ರಣ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ರಾಜ್ಯ ಪುನರ್‌ಘಟನೆಯ ನಂತರ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಸಮಗ್ರ ಏಕೀಕೃತ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆಯನ್ನು ೧೯೬೬ರಲ್ಲಿ ರಚಿಸಲಾಯಿತು. ಈ ಕಾಯಿದೆಯನ್ನು ಜಾರಿಗೆ ತರಲು ಅನುಕೂಲವಾಗುವಂತೆ ೧೯೬೮ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಗಳನ್ನು ರೂಪಿಸಲಾಯಿತು. ಕೋಲಾರ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಆಡಳಿತವನ್ನು ನೋಡಿಕೊಳ್ಳಲು ಕೃಷಿ ಮಾರಾಟ ಸಹಾಯಕ ನಿರ್ದೇಶಕರ ಕಚೇರಿಯನ್ನು ಫೆಬ್ರವರಿ ೧೯೬೭ರಲ್ಲಿ ಕೋಲಾರದಲ್ಲಿ ಸ್ಥಾಪಿಸಲಾಯಿತು. ಈ ಇಲಾಖೆ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ೧೯೬೬ ಮತ್ತು ನಿಯಮಾವಳಿ ೧೯೬೮, ಕೇಂದ್ರ ಸರ್ಕಾರದ ಅಗ್‌ಮಾರ್ಕ್ ಕಾಯಿದೆ (ಗ್ರೇಡಿಂಗ್ ಮತ್ತು ಮಾರ್ಕಿಂಗ್) ೧೯೩೭, ಹಾಗೂ ಕರ್ನಾಟಕ ಉಗ್ರಾಣ ಕಾಯಿದೆ ೧೯೬೧ ಮತ್ತು ನಿಯಮಗಳು ೧೯೬೯ (ಲೈಸನ್ಸ್ ಮಂಜೂರಾತಿ ಮಾತ್ರ), ಇವುಗಳನ್ನು ಜಿಲ್ಲೆಯಲ್ಲಿ ಕಾರ್ಯಾಚರಣೆಗೆ ತರುವಲ್ಲಿ ನಿರತವಾಗಿದೆ. ನಿಯಂತ್ರಿತ ಮಾರುಕಟ್ಟೆಯ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳಲು ರೈತರ ಹನ್ನೊಂದು (ಪರಿಶಿಷ್ಟ ವರ್ಗಕ್ಕೆ ಒಂದು, ಪರಿಶಿಷ್ಟ ಜಾತಿಗೆ ಒಂದು, ಮಹಿಳಾ ವರ್ಗಕ್ಕೆ ಒಂದು ಮತ್ತು

**ಕೋಷ್ಟಕ ೬.೧೯ : ೧೯೮೯–೯೦ರ ವರದಿಯಂತೆ ಕೋಲಾರ ಜಿಲ್ಲೆಯ ಪ್ರಮುಖ ಸ್ಥಳಗಳ ಆಮದು, ರಫ್ತು ಹಾಗೂ ಅಲ್ಲಿ ತಯಾರಾಗುವ ಮೂರು ಪ್ರಮುಖ ವಸ್ತುಗಳು**

| ಸ್ಥಳ | ಆಮದಾಗುವ ಮೂರು ಪ್ರಮುಖ ವಸ್ತುಗಳು | | | | ರಫ್ತಾಗುವ ಮೂರು ಪ್ರಮುಖ | |
|---|---|---|---|---|---|---|
| ವಸ್ತುಗಳು | ತಯಾರಾಗುವ ಮೂರು ಪ್ರಮುಖ ವಸ್ತುಗಳು | | | | | |
| **೧ ಬಾಗೇಪಲ್ಲಿ** | ಕಡಲೆಕಾಯಿ | ಕಬ್ಬು | ಮರದ ತೊಲೆ | ಕಡಲೆಕಾಯಿ | ಬೆಲ್ಲ | ಮರದ ತುಂಡು |
| ಕಡಲೆಕಾಯಿ | ಉಕ್ಕಿನ | ಮರದ ತುಂಡು | | | | |
| | | | | ಎಣ್ಣೆ | | |
| ಪೀಠೋಪಕರಣ | | | | | | |
| **೨ ಬಂಗಾರಪೇಟೆ** | ಆಹಾರಧಾನ್ಯ | ಬಟ್ಟೆ | ಕಡಲೆಕಾಯಿ | ಬೆಲ್ಲ | ಕಡಲೆಕಾಯಿ | ಅಕ್ಕಿ |
| ಸ್ಲೇಟ್ ಪೆನ್ಸಿಲ್ | ಸಿಮೆಂಟ್ | ಬಣ್ಣ | | | | |
| | | | | | ಎಣ್ಣೆ | |
| ಕೊಳವೆ | | | | | | |

| | | | | | | |
|---|---|---|---|---|---|---|
| **೩ ಚಿಕ್ಕಬಳ್ಳಾಪುರ** | ಆಹಾರಧಾನ್ಯ | ಕಬ್ಬಿಣ ಮತ್ತು | ರೇಷ್ಮೆ ಮೊಟ್ಟೆ | ರೇಷ್ಮೆ ಎಳೆ | ಬೆತ್ತದ ಬುಟ್ಟಿ | ಉಕ್ಕಿನ |
| ರೇಷ್ಮೆ ಎಳೆ | ಉಕ್ಕಿನ | ಬೆತ್ತದ ಬುಟ್ಟಿ | | | | |
| | | ಉಕ್ಕು | | | | ಪೀಠೋಪಕರಣ |
| ಪೀಠೋಪಕರಣ | | | | | | |
| ಮತ್ತು | | | | | | |
| **೪ ಚಿಂತಾಮಣಿ** | ಕಡಲೆಕಾಯಿ | ಆಹಾರಧಾನ್ಯ | ಬಟ್ಟೆ | ಕಡಲೆಕಾಯಿ ಎಣ್ಣೆ | ಅಗರಬತ್ತಿ | ಮೊರ್ಘೋಕ್ |
| ಪ್ಲೇಟ್ಸ್ | ಕಡಲೆಕಾಯಿ ಎಣ್ಣೆ | | ಮೊರ್ಘೋಕ್ ಪ್ಲೇಟ್ಸ್ | | ಅಗರಬತ್ತಿ | |
| **೫ ಗೌರಿಬಿದನೂರು** | ಬತ್ತ | ಕಡಲೆಕಾಯಿ | ಕಬ್ಬು | ಕಡಲೆಕಾಯಿ ಎಣ್ಣೆ | ಸಕ್ಕರೆ | ಬೇವಿನ ಎಣ್ಣೆ |
| ಸಕ್ಕರೆ | ಕಡಲೆಕಾಯಿ ಎಣ್ಣೆ | | ಉಕ್ಕಿನ | | | |
| ಪೀಠೋಪಕರಣ | | | | | | |
| **೬ ಗುಡಿಬಂಡೆ** | ಆಹಾರಧಾನ್ಯ | ಬಟ್ಟೆ | ಗೊಬ್ಬರ | ಕಡಲೆಕಾಯಿ ಎಣ್ಣೆ | ರೇಷ್ಮೆ ಸೀರೆ | ಬತ್ತ |
| ರೇಷ್ಮೆ ಬಟ್ಟೆ | ಕಡಲೆಕಾಯಿ ಎಣ್ಣೆ | | – | | | |
| **೭ ಕೋಲಾರ** | ಅಕ್ಕಿ | ಬಟ್ಟೆ | ಕಚ್ಚಾರೇಷ್ಮೆ | ರೇಷ್ಮೆ ಹುರಿ | ಅಲ್ಯೂಮಿನಿಯಂ | ಬಳೆ |
| ರೇಷ್ಮೆದಾರ | ಅಲ್ಯೂಮಿನಿಯಂ | | ಬಳೆ | | | |
| | | | | | ಪಾತ್ರೆ | |
| ಪಾತ್ರೆ | | | | | | |
| **೮ ರಾಬರ್ಟ್‌ಸನ್‌ಪೇಟೆ** | ಮೀನು | ಬಟ್ಟೆ | ಸೂರ್ಯಕಾಂತಿ | ಮೊರ್ಘೋಕ್ ಪ್ಲೇಟ್ಸ್ | | ಪಾಲೀಷ್ |
| ಮಾಡಿದ | ಬೆಂಕಿಕಡ್ಡಿ | ಹುಣಸೆಪುಡಿ | ಅಗರಬತ್ತಿ | ಮೇಣದಬತ್ತಿ | | |
| | | | ಎಣ್ಣೆ | | ಕಪ್ಪು ಶಿಲೆ | |
| **೯ ಕೋಲಾರ** | ಆಹಾರಧಾನ್ಯ | ತಂತಿ | ವೈಂಡರ್ | ಚಿನ್ನ | ಬ್ಯಾಟರಿಲೋಕೋಸ್ | |
| ಗಣಿವಾಹನ | ಚಿನ್ನ | ಬಾಟರಿಲೋಕೋಸ್ | | ಗಣಿವಾಹನ | | |
| **ಚಿನ್ನದ ಗಣಿ** | | ಸುರಳಿಹಗ್ಗ | ಸ್ಪೇರ್‌ಪಾರ್ಟ್ಸ್ | | | |
| **ಪ್ರದೇಶ** | | | | | | |
| ೧೦ | **ಬೆಮೆಲ್ ನಗರ** | – | – | – | ಬುಲ್ಡೋಜ಼ರ್ | – |
| – ಬುಲ್ಡೋಜ಼ರ್ | ಮಣ್ಣು ಸಾಗಿಸುವ | | – | | | |
| ಮತ್ತು ಭಾರಿ | ಭಾರಿ ವಾಹನ | | | | | |
| ಯಂತ್ರಗಳು | | | | | | |
| ೧೧ | **ಮಾಲೂರು** | ಆಹಾರಧಾನ್ಯ | ರೇಷ್ಮೆಮೊಟ್ಟೆ | ಪುಡಿ ತಂಬಾಕು | ರೇಷ್ಮೆದಾರ | ಹೆಂಚು |
| ಬೀಡಿ | ಕಚ್ಚಾರೇಷ್ಮೆ | ಬೀಡಿ | ಹೆಂಚು | | | |
| ೧೨ | **ಮಂಚೇನಹಳ್ಳಿ** | ಬಟ್ಟೆ | ಸಕ್ಕರೆ | ಖಾದ್ಯತೈಲ | ಬೆಲ್ಲ | ರೇಷ್ಮೆ ಮೊಟ್ಟೆ |
| ಬತ್ತ | ಬೆಲ್ಲ | ಬೀಡಿ | – | | | |
| **೧೩ಮುಳಬಾಗಿಲು** | ಆಹಾರಧಾನ್ಯ | ಕಡಲೆಕಾಯಿ | ಅಗರಬತ್ತಿಯ | ಅಗರಬತ್ತಿ | ಬೀಡಿ | ಕಡಲೆಕಾಯಿ |
| ಅಗರಬತ್ತಿ | ಬೀಡಿ | ಕಡಲೆಕಾಯಿ | | | | |
| | | | ಬಿದಿರಿನ ಕಡ್ಡಿ | ಮತ್ತು ಬೆಂಕಿ | | ಎಣ್ಣೆ |
| ಮತ್ತು ಬೆಂಕಿ | | ಎಣ್ಣೆ | | | | |
| | | | | ಪೊಟ್ಟಣ | | |
| ಪೊಟ್ಟಣ | | | | | | |
| ೧೪ | **ಶಿಡ್ಲಘಟ್ಟ** | ಆಹಾರಧಾನ್ಯ | ರೇಷ್ಮೆಮೊಟ್ಟೆ | ಬಟ್ಟೆ, ಬೆಂಕಿಕಡ್ಡಿ | ರೇಷ್ಮೆದಾರ | ತರಕಾರಿ |
| ರೇಷ್ಮೆಹುರಿ | ರೇಷ್ಮೆಎಳೆ | – | – | | | |
| ೧೫ | **ಶ್ರೀನಿವಾಸಪುರ** | ಆಹಾರಧಾನ್ಯ | ರೇಷ್ಮೆಮೊಟ್ಟೆ | ಗೋಡಂಬಿ | ಗೋಡಂಬಿ ಬೀಜ | ರೇಷ್ಮೆ ದಾರ |
| ಮರದ ತುಂಡು | ಗೋಡಂಬಿ ಬೀಜ | | ರೇಷ್ಮೆನೂಲು | ಮರದ ತುಂಡು | | |

ಆಧಾರ: ಕೋಲಾರ ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್‌ಬುಕ್ ೧೯೯೧

ಹಿಂದುಳಿದ ವರ್ಗಕ್ಕೆ ಎರಡು ಸ್ಥಾನ ಮೀಸಲು), ಖರೀದಿದಾರರ ಒಂದು, ಸಹಕಾರಿ ಮಾರಾಟ ಸಂಘದ ಒಂದು, ಸಹಕಾರಿ ಸಂಸ್ಕರಣ ಸಂಘದ ಒಂದು, ಸರ್ಕಾರದ (ಮಾರಾಟ ಇಲಾಖೆಯ) ಒಂದು, ಒಟ್ಟು ೧೫ ಚುನಾಯಿತ ಸದಸ್ಯರು ಮತ್ತು ಸರ್ಕಾರದಿಂದ ನಾಮಕರಣಗೊಂಡ ಮೂರು ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ಪ್ರತಿ ಮಾರುಕಟ್ಟೆಯಲ್ಲಿಯೂ ರಚಿಸುವಂತೆ ಕಾಯಿದೆ ಅವಕಾಶ ಕಲ್ಪಿಸಿದೆ. ಚುನಾಯಿತ ಸಮಿತಿಯ ಅವಧಿ ಐದು ವರ್ಷವಾಗಿದ್ದು, ಸಮಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ರೈತರ ಪ್ರತಿನಿಧಿಗಳಾಗಿರುತ್ತಾರೆ. ಮಾರುಕಟ್ಟೆ ಸಮಿತಿ ತನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಮಾರಾಟ ವ್ಯವಸ್ಥೆಯನ್ನು ನಿಯಂತ್ರಿಸುವುದಲ್ಲದೇ, ಮಾರುಕಟ್ಟೆ ಪ್ರಾಂಗಣದಲ್ಲಿ ರಸ್ತೆ, ನೀರು, ದೀಪ, ಹರಾಜುಕಟ್ಟೆ, ಉಪಾಹಾರ ಗೃಹ, ವಿಶ್ರಾಂತಿಗೃಹ, ನೆರಳಿನ ವೃಕ್ಷ ಮುಂತಾದ ಸೌಕರ್ಯಗಳನ್ನು ಮತ್ತು ಕೃಷಿ ಉತ್ಪನ್ನಗಳ ವರ್ಗೀಕರಣ ಸೌಲಭ್ಯವನ್ನು (ಆಯ್ದ ಮಾರುಕಟ್ಟೆಗಳಲ್ಲಿ) ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲಗಳು ಮಾರುಕಟ್ಟೆ ಶುಲ್ಕ ಮತ್ತು ಪರವಾನಿಗಿ ಶುಲ್ಕಗಳು. ಮಾರುಕಟ್ಟೆ ಸಮಿತಿಯ ಎಲ್ಲ ವೆಚ್ಚಗಳನ್ನೂ ಈ ಆದಾಯದಿಂದ ಭರಿಸಲಾಗುತ್ತದೆ. ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯವಹರಿಸುವ ಮಾರುಕಟ್ಟೆ ಕಾರ್ಯಕರ್ತರ ಮೇಲೆ ಪರವಾನಿಗಿ (ಲೈಸನ್ಸ್) ಶುಲ್ಕವನ್ನು ವಿಧಿಸಲಾಗುತ್ತದೆ. ಅಂತೆಯೇ ಕೃಷಿ ಉತ್ಪನ್ನಗಳ ಖರೀದಿದಾರರಿಂದ ಉತ್ಪನ್ನಗಳ ಮೌಲ್ಯದ ಶೇಕಡ (ರೂ.) ಒಂದರಂತೆ ಹಾಗೂ ಜಾನುವಾರುಗಳಿಗೆ ತಲಾ ಎರಡು ರೂ. ಮತ್ತು ಕುರಿ, ಮೇಕೆಗೆ ತಲಾ ಒಂದಕ್ಕೆ ೨೫ ಪೈಸೆಯಂತೆ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಲಾಗುತ್ತದೆ.

**ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು:**

ಕೋಲಾರ ಜಿಲ್ಲೆಯಲ್ಲಿ ೨೦೦೩-೦೪ರಲ್ಲಿದ್ದಂತೆ ಎಂಟು ಮುಖ್ಯ ಮಾರುಕಟ್ಟೆಗಳು ಹಾಗೂ ೧೪ ಉಪ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳ ವಿವರವನ್ನು ಮುಂದಿನ ಕೋಷ್ಟಕಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೦**

| **ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಮತ್ತು ಸ್ಥಾಪನೆಯ ವರ್ಷ** | | **ಮಾರುಕಟ್ಟೆ ಸಮಿತಿಯ ಕಾರ್ಯವ್ಯಾಪ್ತಿ** | **ಮುಖ್ಯ ಮಾರುಕಟ್ಟೆ ಸಮಿತಿಯ ಅಧೀನಕ್ಕೊಳಪಟ್ಟ ಉಪ-ಮಾರುಕಟ್ಟೆಗಳು** |
|---|---|---|---|
| ೧. **ಚಿಂತಾಮಣಿ** | ೧೯೫೪ | ಚಿಂತಾಮಣಿ ತಾಲೂಕು | ೧. ಇರಗಂಪಲ್ಲಿ - ೧೯೯೨ |
| ೨. **ಚಿಕ್ಕಬಳ್ಳಾಪುರ** | ೧೯೬೭ | ಚಿಕ್ಕಬಳ್ಳಾಪುರ ತಾಲೂಕು, ಶಿಡ್ಲಘಟ್ಟ ತಾಲೂಕು ಮತ್ತು ಬಾಗೇಪಲ್ಲಿ ತಾಲೂಕು | ೧ ಶಿಡ್ಲಪಟ್ಟ - ೧೯೭೨,<br>೨. ಬಾಗೇಪಲ್ಲಿ - ೧೯೭೧,<br>೩. ಪೆರೇಸಂದ್ರ - ೧೯೭೨,<br>೪. ಚೇಳೂರು - ೧೯೭೨ |
| ೩. **ಮುಳಬಾಗಿಲು** | ೧೯೬೩ | ಮುಳಬಾಗಿಲು ತಾಲೂಕು | ೧. ತಾಯಲೂರು - ೧೯೯೧,<br>೨. ಎನ್.ವಡ್ಡಹಳ್ಳಿ - ೨೦೦೦ |
| ೪. **ಗೌರಿಬಿದನೂರು** | ೧೯೬೪ | ಗೌರಿಬಿದನೂರು ತಾಲೂಕು ಮತ್ತು ಗುಡಿಬಂಡೆ ತಾಲೂಕು | ೧. ಗುಡಿಬಂಡೆ - ೧೯೮೯,<br>೨. ಮಂಚೇನಹಳ್ಳಿ |
| ೫. **ಬಂಗಾರಪೇಟೆ** | ೧೯೭೦ | ಬಂಗಾರಪೇಟೆ ತಾಲೂಕು | ೧. ಕೆ.ಜಿ.ಎಫ್.- ೧೯೯೧,<br>೨. ಬೇತಮಂಗಲ - ೧೯೯೦ |
| ೬. **ಮಾಲೂರು** | ೧೯೭೮ | ಮಾಲೂರು ತಾಲೂಕು | - |

| | | | |
|---|---|---|---|
| **೭. ಕೋಲಾರ** | ೧೯೭೯ | ಕೋಲಾರ ತಾಲೂಕು | – |
| **೮. ಶ್ರೀನಿವಾಸಪುರ** | ೧೯೮೬ | ಶ್ರೀನಿವಾಸಪುರ ತಾಲೂಕು | ೧. ಗೌನಪಲ್ಲಿ – ೧೯೮೯ |

ಆಧಾರ: ಜಿಲ್ಲಾ ಕೃಷಿ ಮಾರಾಟ ಇಲಾಖೆ, ಕೋಲಾರ

**ನಿಯಂತ್ರಿತ ಸರಕುಗಳು**

ಸಾಮಾನ್ಯವಾಗಿ ಮಾರುಕಟ್ಟೆ ಕ್ಷೇತ್ರದಲ್ಲಿಯ ಕೃಷಿ ಉತ್ಪನ್ನಗಳ ಬಗ್ಗೆ ಸಮೀಕ್ಷೆ ನಡೆಸಿ, ಅವು ಆ ಕ್ಷೇತ್ರದಲ್ಲಿ ಬೆಳೆದಿದ್ದಲ್ಲಿ ಅಥವ ಸಂಗ್ರಹವಾದಲ್ಲಿ ಅಂತಹ ಉತ್ಪನ್ನಗಳು ನಿಯಂತ್ರಿಸಲ್ಪಡುತ್ತವೆ. ಅಲ್ಲದೇ ಕಾಲಕಾಲಕ್ಕೆ ಹೊಸ ಹುಟ್ಟುವಳಿಗಳನ್ನು ನಿಯಂತ್ರಣ ಕಾಯಿದೆಯ ವ್ಯಾಪ್ತಿಗೆ ತರಲಾಗುತ್ತದೆ. ಕೋಲಾರ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ನಿಯಂತ್ರಣಕ್ಕೆ ಒಳಪಡಿಸಿದ ಕೃಷಿ ಉತ್ಪನ್ನಗಳು ಮತ್ತು ಇತರ ಸರಕುಗಳೆಂದರೆ, ಬತ್ತ, ಅಕ್ಕಿ, ರಾಗಿ, ಜೋಳ, ಗೋಧಿ, ಮೆಕ್ಕೆಜೋಳ, ಸಜ್ಜೆ ಮುಂತಾದ ಆಹಾರ ಧಾನ್ಯಗಳು; ತೊಗರಿ, ಹುರುಳಿ, ಉದ್ದು, ಹೆಸರು, ಕಡಲೆ ಮುಂತಾದ ದ್ವಿದಳ ಧಾನ್ಯಗಳು; ಶೇಂಗಾ, ಎಳ್ಳು, ಹುಚ್ಚೆಳ್ಳು, ಕುಸುಮೆ, ಅಗಸೆ, ಹರಳು, ಸೂರ್ಯಕಾಂತಿ, ಮುಂತಾದ ಎಣ್ಣೆಬೀಜಗಳು, ಮೆಣಸಿನಕಾಯಿ, ಧನಿಯ, ಮೆಣಸು ಮುಂತಾದ ಸಾಂಬಾರ ಪದಾರ್ಥಗಳು; ಹತ್ತಿ, ಅರಳೆ ಮುಂತಾದವು; ಈರುಳ್ಳಿ, ಆಲೂಗಡ್ಡೆ, ಸಿಹಿಗೆಣಸು ಮತ್ತು ಇತರ ತರಕಾರಿಗಳು ಮತ್ತು ಹಣ್ಣುಗಳು; ಎಲ್ಲ ತರಹದ ಹೂವುಗಳು; ಬೆಲ್ಲ, ಹುಣಸೇಕಾಯಿ, ತೆಂಗಿನಕಾಯಿ, ಕೊಬ್ಬರಿ, ಅಡಿಕೆ ಹಾಗೂ ಇತರೆ ವಿವಿಧ ಉತ್ಪನ್ನಗಳು ಅಲ್ಲದೇ ಜಾನವಾರುಗಳು, ಕುರಿ, ಮೇಕೆ, ಮುಂತಾದವನ್ನೊಳಗೊಂಡಂತೆ ಒಟ್ಟು ೧೧೩ ಕೃಷಿ ಉತ್ಪನ್ನಗಳು ಮತ್ತು ಇತರ ಸರಕುಗಳಾಗಿವೆ.

ಕೋಲಾರ ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆಗಳ ಮೂಲಕ ಇತ್ತೀಚಿನ ದಶಕದ ಕೆಲವು ವರ್ಷಗಳಲ್ಲಿ ಮಾರಲ್ಪಟ್ಟ ವ್ಯವಸಾಯ ಉತ್ಪನ್ನಗಳ ಹಾಗೂ ಇತರ ಸರಕುಗಳ ಮಾರಾಟ ಮೌಲ್ಯವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೧**

| ನಿಯಂತ್ರಿತ | ವ್ಯವಸಾಯೋತ್ಪನ್ನಗಳ ಹಾಗೂ ಇತರ ಸರಕುಗಳ ಮಾರಾಟ ಮೌಲ್ಯ | | | | | |
|---|---|---|---|---|---|---|
| ಮಾರುಕಟ್ಟೆ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ |
| **ಚಿಕ್ಕಬಳ್ಳಾಪುರ** | ೧೦.೯೮ | ೧೨.೦೬ | ೧೪.೧೯ | ೧೪.೨೫ | ೧೮.೬೬ | ೨೮.೯೩ |
| **ಮುಳಬಾಗಿಲು** | ೨.೯೦ | – | ೫.೮೭ | – | ೭.೭೫ | ೯.೩೬ |
| **ಗೌರಿಬಿದನೂರು** | – | ೧೪.೬೭ | ೧೮.೮೯ | ೧೬.೨೩ | ೨೦.೫೦ | ೨೧.೮೦ |
| **ಬಂಗಾರಪೇಟೆ** | ೧೪.೨೩ | – | ೫೦.೧೭ | – | ೧೧೦.೮೦ | ೧೬೦.೫೯ |
| **ಮಾಲೂರು** | ೫.೬೦ | – | ೧೬.೧೨ | – | ೨೩೦೦೦ | ೧೯.೧೩ |
| **ಶ್ರೀನಿವಾಸಪುರ** | ೦.೨೬ | – | ೧೨.೦೩ | – | ೧೮.೧೮ | ೨೫.೩೫ |
| **ಚಿಂತಾಮಣಿ** | ೧೭.೮೧ | – | – | ೧೯.೨೧ | ೨೩.೧೨ | ೨೨.೫೪ |
| **ಕೋಲಾರ** | – | – | – | – | ೩೯.೩೫ | ೪೨.೨೯ |

ಆಧಾರ: ಜಿಲ್ಲಾ ಕೃಷಿ ಮಾರಾಟ ಇಲಾಖೆ, ಕೋಲಾರ

ನಿಯಂತ್ರಿತ ಮಾರುಕಟ್ಟೆಗಳಲ್ಲಿನ ಎಲ್ಲ ವರ್ಗದ ಮಾರುಕಟ್ಟೆ ಕಾರ್ಯಕರ್ತರ ಸಂಖ್ಯೆಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೨೨**

| ವರ್ಷ | ನಿಯಂತ್ರಿತ ಮಾರುಕಟ್ಟೆಗಳು |
|---|---|

| | ಮುಳ ಬಾಗಿಲು | ಚಿಕ್ಕ ಬಳ್ಳಾಪುರ | ಗೌರಿ ಬಿದನೂರು | ಬಂಗಾರ ಪೇಟೆ | ಮಾಲೂರು | ಶ್ರೀನಿವಾಸ ಪುರ | ಕೋಲಾರ | ಚಿಂತಾ ಮಣಿ |
|---|---|---|---|---|---|---|---|---|
| ೧೯೯೦-೯೧ | ೨೨೯ | ೧೭೧ | ೪೧೪ | ೯೨೬ | ೪೮ | – | ೪೫೯ | ೭೩೩ |
| ೧೯೯೫-೯೬ | ೨೭೫ | ೨೬೩ | ೪೯೭ | ೭೨೦ | ೮೪ | ೧೦೮ | ೪೮೭ | |
| ೧೧೮೪ | | | | | | | | |
| ೨೦೦೦-೦೧ | ೨೮೦ | ೧೮೬ | ೫೭೭ | ೭೨೬ | ೭೫ | ೮೧ | ೮೨೭ | ೧೦೪೭ |
| ೨೦೦೨-೦೩ | ೨೯೦ | ೧೭೩ | ೪೯೪ | ೯೫೩ | ೧೯೫ | ೯೫ | ೭೪೪ | ೧೦೩೬ |
| ೨೦೦೩-೦೪ | ೪೫೨ | ೭೫೧ | ೧೨೪ | ೧೦೧೯ | ೫೨ | ೫೨೧ | ೧೧೧೩ | ೯೩೧ |

ಆಧಾರ: ಜಿಲ್ಲಾ ಕೃಷಿ ಮಾರಾಟ ಇಲಾಖೆ, ಕೋಲಾರ

ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆಗಳ ಇತ್ತೀಚಿನ ದಶಕದ ಕೆಲವು ವರ್ಷಗಳ ಆದಾಯ ಮತ್ತು ವೆಚ್ಚಗಳು ಈ ಮುಂದಿನಂತಿದ್ದವು.

**ಕೋಷ್ಟಕ ೬.೨೩**

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಮುಳಬಾಗಿಲು | | ಚಿಕ್ಕಬಳ್ಳಾಪುರ | | ಗೌರಿಬಿದನೂರು | | ಬಂಗಾರಪೇಟೆ | |
|---|---|---|---|---|---|---|---|---|
| | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ |
| ೧೯೯೦-೯೧ | ೪.೨೯ | ೨.೧೩ | ೧೩.೧೧ | ೯.೯೫ | ೭.೪೯ | ೩.೭೧ | ೧೮.೫೨ | ೮.೮೮ |
| ೧೯೯೫-೯೬ | ೮.೨೪ | ೩.೬೫ | ೭೧.೨೯ | ೬೭.೦೨ | ೧೬.೨೮ | ೬.೯೧ | ೩೦.೯೦ | ೨೦.೧೪ |
| ೨೦೦೦-೦೧ | ೭.೨೫ | ೭.೧೧ | – | – | ೧೯.೫೧ | ೮.೧೫ | ೫೮.೨೯ | ೬೦.೭೦ |
| ೨೦೦೨-೦೩ | ೯.೦೫ | ೪.೯೭ | ೨೫.೮೦ | ೧೯.೧೧ | ೨೩.೬೦ | ೧೪.೯೦ | ೧೨೫.೯೯ | |
| ೪೮.೨೦ | | | | | | | | |
| ೨೦೦೩-೦೪ | ೧೦.೩೮ | ೭.೨೧ | ೨೫.೧೯ | ೧೯.೧೪ | ೨೭.೩೪ | ೨೨.೯೪ | ೧೯೧.೦೫ | |
| ೧೩೨.೬೮ | | | | | | | | |

| ವರ್ಷ | ಮಾಲೂರು | | ಶ್ರೀನಿವಾಸಪುರ | | ಕೋಲಾರ | | ಚಿಂತಾಮಣಿ | |
|---|---|---|---|---|---|---|---|---|
| | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ |
| ೧೯೯೦-೯೧ | ೩.೭೦ | ೨.೦೧ | ೩.೪೯ | ೧.೮೩ | ೫.೭೧ | ೩.೨೨ | ೧೫.೩೪ | ೧೧.೬೩ |
| ೧೯೯೫-೯೬ | ೮.೬೨ | ೪.೭೪ | ೭.೨೨ | ೬.೯೩ | ೧೨.೫೪ | ೫.೬೩ | ೩೦.೭೭ | ೧೨.೭೮ |
| ೨೦೦೦-೦೧ | ೧೭.೯೧ | ೧೪.೯೨ | ೧೪.೩೨ | ೮.೫೯ | ೨೭.೮೪ | ೧೪.೪೯ | ೩೧.೦೪ | ೧೯.೫೧ |
| ೨೦೦೨-೦೩ | ೨೫.೬೬ | ೮.೯೯ | ೨೦.೩೩ | ೧೦.೮೨ | ೪೬.೭೭ | ೨೩.೧೩ | ೪೧.೨೧ | ೧೭.೬೨ |
| ೨೦೦೩-೦೪ | ೨೪.೭೧ | ೯.೫೪ | ೨೬.೩೧ | ೧೨.೩೦ | ೪೮.೦೫ | ೨೬.೭೪ | ೩೯.೨೪ | ೧೫.೪೬ |

ಆಧಾರ : ಜಿಲ್ಲಾ ಕೃಷಿ ಮಾರಾಟ ಇಲಾಖೆ, ಕೋಲಾರ

## ವ್ಯವಸಾಯೋತ್ಪನ್ನಗಳ ಮೇಲೆ ಅಡಮಾನ ಸಾಲ ಯೋಜನೆ

ವ್ಯವಸಾಯೋತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆ ಸಿಗದಿದ್ದಾಗ ಅನಿವಾರ್ಯ ಕಾರಣಗಳಿಂದ ರೈತರು ಬೆಳೆದಂತಹ ಉತ್ಪನ್ನಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವುದನ್ನು ತಪ್ಪಿಸಲು ಸರ್ಕಾರ ರಾಜ್ಯದ ಆಯ್ದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವ್ಯವಸಾಯೋತ್ಪನ್ನಗಳ ಅಡಮಾನ ಸಾಲ ಯೋಜನೆಯನ್ನು ೧೯೭೫ರಿಂದ ಜಾರಿಗೊಳಿಸಿದೆ. ಅದರಂತೆ ಕೋಲಾರ ಜಿಲ್ಲೆಯ ಚಿಂತಾಮಣಿ ಮಾರುಕಟ್ಟೆ ಸಮಿತಿಯಲ್ಲಿ ಕಡಲೇಕಾಯಿ, ಹುರುಳಿ, ರಾಗಿ, ಧನಿಯ; ಬಂಗಾರಪೇಟೆ ಮಾರುಕಟ್ಟೆ ಸಮಿತಿಯಲ್ಲಿ ಅಕ್ಕಿ, ರಾಗಿ, ಈ ವ್ಯವಸಾಯೋತ್ಪನ್ನಗಳನ್ನು ಮುಂಗಡ ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ವ್ಯವಸಾಯೋತ್ಪನ್ನಗಳ ಅಂದಾಜು ಮೌಲ್ಯದ ಶೇಕಡ ೬೦ರಷ್ಟನ್ನು ಅಥವಾ ಗರಿಷ್ಠ ೫೦ ಸಾವಿರ ರೂ.ಗಳು ಇದರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಅಲ್ಪಾವಧಿ (ಗರಿಷ್ಠ ಮೂರು ತಿಂಗಳ ಅವಧಿ) ಸಾಲವಾಗಿ ಕೊಡಲಾಗುತ್ತದೆ.

**ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ**

ರೈತರು ಹಾಗೂ ರೈತ ಕುಟುಂಬದ ಸದಸ್ಯರು (೧೮ ರಿಂದ ೬೦ ವರ್ಷ ವಯಸ್ಸಿನ) ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾರಾಟ ಕಾರ್ಯಗಳಲ್ಲಿ ತೊಡಗಿರುವಾಗ ಅಪಘಾತವಾಗಿ ಸಾವು ಸಂಭವಿಸಿದರೆ ಅಥವಾ ಅಂಗವಿಕಲರಾದರೆ, ಕನಿಷ್ಠ ೧೫೦೦ ರೂ.ಗಳಿಂದ ೨೫,೦೦೦ ರೂ.ಗಳವರೆಗೆ ಪರಿಹಾರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತದೆ.

**ಹಮಾಲರಿಗೆ ಮತ್ತು ತೂಕದವರಿಗೆ ಜೀವ ವಿಮಾ ಯೋಜನೆ**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ಹಮಾಲರು, ಚಕ್ಕಡಿಯವರು ಹಾಗೂ ತೂಕದವರ (೧೮ ರಿಂದ ೬೦ ವರ್ಷ ವಯಸ್ಸಿನ) ಸಾಮಾಜಿಕ ಭದ್ರತೆಗಾಗಿ ಸಮೂಹ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಅದನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಂತೆ ಲೈಸೆನ್ಸ್ ಪಡೆದ ಹಮಾಲರು, ಚಕ್ಕಡಿಯವರು ಹಾಗೂ ತೂಕದವರು ಸ್ವಾಭಾವಿಕ ಮರಣ ಹೊಂದಿದರೆ ೨೫,೦೦೦ ರೂ.ಗಳಷ್ಟು ಹಾಗೂ ಅಪಘಾತದಿಂದ ಮರಣ ಹೊಂದಿದರೆ ೫೦,೦೦೦ ರೂ.ಗಳಷ್ಟು ವಿಮಾ ಪರಿಹಾರವನ್ನು ಪಡೆಯಬಹುದಾಗಿದೆ.

## ಸಂತೆಗಳು

ಹಿಂದಿನ ಕಾಲದಲ್ಲಿ ಸಂತೆ ಪದ್ಧತಿಯು ಸರಕು ವಿನಿಮಯ ವ್ಯವಹಾರಗಳಿಗೆ ಅನುಕೂಲ ಮಾಡಿಕೊಟ್ಟಿತ್ತು. ವಾರದ ಸಂತೆಗಳು ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿವೆ. ಹಿಂದಿನ ಕಾಲದಲ್ಲಿ ಆಳರಸರ ಆದೇಶದಂತೆ ಅಥವ ಸ್ಥಳೀಯ ಸಂಸ್ಥೆಗಳ ತೀರ್ಮಾನದಂತೆ ಇಂತಹ ಸಂತೆಗಳನ್ನು ನಡೆಸಲು ಆರಂಭಿಸಿದ ಉದಾಹರಣೆಗಳಿವೆ. ಅನೇಕ ಶಾಸನಗಳಲ್ಲೂ ಸಂತೆಗಳ ವಿಷಯವನ್ನು ಉಲ್ಲೇಖಿಸಲಾಗಿದೆ. ಕೈವಾರದ ೧೩೬೨ರ ಶಾಸನ ಕಂಪಣನ ಆಳ್ವಿಕೆಯಲ್ಲಿ ಕೈವಾರ ನಾಡಿನ ಸಮಸ್ತ ಉಭಯ ನಾನಾದೇಶಿ, ಗೌಂಡ, ಪ್ರಜೆಗಳ ಸಮ್ಮುಖದಲ್ಲಿ ಸಾಮಂತ ರಾಚಯ್ಯದೇವನು ಕೈವಾರದಲ್ಲಿ ಸಂತೆಯನ್ನು ಆರಂಭಿಸಿ, ಪಟ್ಟಣಸ್ವಾಮಿ ಮಾರಪ್ಪಶೆಟ್ಟಿಯ ತಮ್ಮನನ್ನು ಪಟ್ಟಣಸ್ವಾಮಿಯನ್ನಾಗಿ ಮಾಡಿ ಊರ ದೊಡ್ಡಕೆರೆಯ ಕೆಳಗಿನ ಭೂಮಿಯನ್ನು ದಾನಕೊಟ್ಟ ಅಂಶವನ್ನು ದಾಖಲಿಸುತ್ತದೆ. ಶಿಡ್ಲಘಟ್ಟ ತಾಲೂಕಿನ ರಾಮೇಶ್ವರದ ೧೪೦೮ರ ಶಾಸನ ಮಹಾಮಂಡಲೇಶ್ವರ ದೇಪಣ್ಣ ಒಡೆಯರು ಸಾದಲಿ ನಾಡಿನ ರಾಮೇಶ್ವರ ಗ್ರಾಮದ ಬಯಲಿನಲ್ಲಿ ಸಂತೆಯನ್ನು ಆರಂಭಿಸಿದ ಅಂಶವನ್ನು ತಿಳಿಸುತ್ತದೆ. ಅಲ್ಲದೆ ಸಂತೆಯಿಂದ ಬರುವ ರಾಜಾಯ, ನಾಡಾಯ, ಶೆಟ್ಟರ ಆಯ ಹಾಗೂ ಮಿಂಡಗುಡ್ಡ ಆಯಗಳನ್ನು ಎತ್ತುವ ಹಕ್ಕನ್ನೂ ದಾಖಲಿಸಿದೆ. ಚಿಂತಾಮಣಿ ತಾಲೂಕಿನ ಹಿರಣ್ಯಪಲ್ಲಿಯ ೧೪೨೩ರ ಶಾಸನದಲ್ಲಿ ಗೋಪಿನಾಥ ದೇವರ ಸೇವೆಗೆಂದು ಬಿಟ್ಟಿರುವ ದಾನಗಳಲ್ಲಿ, ಸಂತೆಆಯದ ಉಲ್ಲೇಖವಿರುವುದು ಗಮನಾರ್ಹವಾಗಿದೆ. ಬುಕನನ್ ೧೮೦೦ರಲ್ಲಿ ಮಾಲೂರಿನ ವಾರದ ಸಂತೆಯ ಬಗ್ಗೆ ದಾಖಲಿಸಿ, ಅಲ್ಲಿ ಮಾರಾಟವಾಗುವ ಪ್ರಮುಖ ಸರಕುಗಳಾದ ಕೈಮಗ್ಗದ ಬಟ್ಟೆಗಳು, ಕಂಬಳಿ, ಕಬ್ಬಿಣದ ಸಾಮಾನು ಮುಂತಾದವುಗಳ ಬಗ್ಗೆ ಹೇಳಿದ್ದಾನೆ. ಆಧುನಿಕ ದಿನಗಳಲ್ಲಿಯೂ ಕೂಡ ಸಂತೆಗಳು ಸ್ಥಳೀಯ ಸರಕುಗಳು ಅಥವಾ ಉತ್ಪನ್ನಗಳಿಗೆ ಪ್ರಾಥಮಿಕ ಮಾರುಕಟ್ಟೆಯ ಅವಶ್ಯಕತೆಯನ್ನು ಪೂರೈಸುತ್ತಾ, ಉಪಯುಕ್ತ ಉದ್ದೇಶಗಳನ್ನು ಸಾಧಿಸುತ್ತಿವೆ. ಈ ಸಂತೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಗಾರರು ಮತ್ತು ಉತ್ಪಾದಕರನ್ನೊಳಗೊಂಡು ಸಣ್ಣ-ಪುಟ್ಟ ಚಿಲ್ಲರೆ ವ್ಯಾಪಾರಿಗಳು ತಮ್ಮ ಸರಕುಗಳನ್ನು ಮಾರಾಟಕ್ಕೆ ಇಡುತ್ತಾರೆ. ಬಳಕೆದಾರರು ಮತ್ತು ಮಧ್ಯವರ್ತಿಗಳು ತಮ್ಮ ಅವಶ್ಯಕತೆಗನುಗುಣವಾಗಿ ಸರಕುಗಳನ್ನು ಕೊಂಡುಕೊಳ್ಳುತ್ತಾರೆ. ಸಣ್ಣ ಪ್ರಮಾಣದ ಬೇಸಾಯಗಾರರಿಗೆ ಮತ್ತು

ವಿವಿಧ ಕುಶಲ ಕರ್ಮಿಗಳನ್ನೊಳಗೊಂಡ ಸಣ್ಣ ಪ್ರಮಾಣದ ಉತ್ಪಾದಕರಿಗೆ ಇಂತಹ ಮಾರುಕಟ್ಟೆಗಳು ಸಿದ್ಧಪಡಿಸಿದ ಮಾರುಕಟ್ಟೆಯಂತೆ ಸಹಾಯಕವಾಗಿವೆ. ವ್ಯವಸಾಯ ಕಾರ್ಮಿಕರು, ಗಣಿಕಾರ್ಮಿಕರು ಮತ್ತು ಇತರರಿಗೆ ತಮಗೆ ಬೇಕಾದುದನ್ನು ಕೊಂಡುಕೊಳ್ಳಲು, ಅಂದರೆ ಬಹಳವಾಗಿ ದುರ್ಬಲ ವರ್ಗದವರಿಗೆ ಈ ಮಾರುಕಟ್ಟೆಗಳು ತುಂಬಾ ಅನುಕೂಲಕರವಾಗಿವೆ. ಈ ವಾರದ ಸಂತೆಗಳಲ್ಲಿ ಚಿಕ್ಕಪುಟ್ಟ ಸಂಚಾರಿ ವ್ಯಾಪಾರಿಗಳು (ಹೊತ್ತು ಮಾರುವವರು), ಗಾಡಿಗಳ ಮೇಲೆ ಹೇರಿ ಮಾರುವವರು, ದಾರಿ ಬದಿಯ ಅಂಗಡಿಯವರು, ಗುಜರಿ ವ್ಯಾಪಾರದವರೇ ಮೊದಲಾದವರು ಅಗ್ಗದ ಬೆಲೆಯ ಸರಕುಗಳ ವ್ಯಾಪಾರ ಮಾಡುತ್ತಾ ಕಡಿಮೆ ವರಮಾನದ ವರ್ಗಕ್ಕೆ ಸೇರಿದವರನ್ನು ಹೆಚ್ಚಾಗಿ ಆಕರ್ಷಿಸುತ್ತಾ ಇರುವುದು ಕಂಡುಬರುತ್ತದೆ. ಕೋಲಾರ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ನಡೆಯುವ ಪ್ರಮುಖ ಸಂತೆಗಳ ವಿವರವನ್ನು ಈ ಮುಂದೆ ನೀಡಲಾಗಿದೆ.

**ಕೋಲಾರ ತಾಲೂಕು:** ಕೋಲಾರ (ಗುರುವಾರ), ಪಟ್ನ (ಬುಧವಾರ), ಸುಗುಟೂರು (ಶುಕ್ರವಾರ), ಕ್ಯಾಲನೂರು(ಶನಿವಾರ), ಮುಳ್ಳಹಳ್ಳಿ (ಶನಿವಾರ), ವೇಮಗಲ್(ಬುಧವಾರ), ಮಡಿವಾಳ (ಶುಕ್ರವಾರ), ವಕ್ಕಲೇರಿ (ಮಂಗಳವಾರ), ನರಸಾಪುರ (ಭಾನುವಾರ), ತಂಬಿಹಳ್ಳಿ (ಸೋಮವಾರ).

**ಬಂಗಾರಪೇಟೆ ತಾಲೂಕು:** ಬಂಗಾರಪೇಟೆ (ಶುಕ್ರವಾರ), ಬೂದಿಕೋಟೆ (ಮಂಗಳವಾರ), ಬೇತಮಂಗಲ (ಶುಕ್ರವಾರ), ಕ್ಯಾಸಂಬಳ್ಳಿ (ಸೋಮವಾರ), ಶ್ರೀನಿವಾಸಸಂದ್ರ (ಮಂಗಳವಾರ), ರಾಬರ್ಟ್‌ಸನ್‌ಪೇಟೆ (ಭಾನುವಾರ), ಸುಂದರಪಾಳ್ಯ (ಶುಕ್ರವಾರ), ಗುಟ್ಟಹಳ್ಳಿ (ಶನಿವಾರ), ಕೆಂಪಾಪುರ (ಬುಧವಾರ).

**ಚಿಂತಾಮಣಿ ತಾಲೂಕು:** ಚಿಂತಾಮಣಿ (ಭಾನುವಾರ),ಬಟ್ಲಹಳ್ಳಿ (ಶುಕ್ರವಾರ), ಇರಗಂಪಲ್ಲಿ (ಗುರುವಾರ), ಕೈವಾರ (ಗುರುವಾರ), ಬುರುಡುಗುಂಟೆ (ಶನಿವಾರ), ಕೋರ್ಲಪರ್ತಿ (ಬುಧವಾರ).

**ಶಿಡ್ಲಘಟ್ಟ ತಾಲೂಕು:** ಶಿಡ್ಲಘಟ್ಟ (ಸೋಮವಾರ), ಮೇಲೂರು (ಮಂಗಳವಾರ), ಜಂಗಮಕೋಟೆ (ಗುರುವಾರ), ಬಾಸೆಟ್ಟಿಹಳ್ಳಿ (ಶುಕ್ರವಾರ), ಸಾದಲಿ (ಮಂಗಳವಾರ), ಅಬೊಲೋಡು (ಮಂಗಳವಾರ), ಚೀಮಂಗಲ (ಬುಧವಾರ).

**ಚಿಕ್ಕಬಳ್ಳಾಪುರ ತಾಲೂಕು:** ಚಿಕ್ಕಬಳ್ಳಾಪುರ (ಶನಿವಾರ), ಪೆರೇಸಂದ್ರ (ಸೋಮವಾರ), ನಂದಿ (ಗುರುವಾರ).

**ಗೌರೀಬಿದನೂರು ತಾಲೂಕು:** ಗೌರೀಬಿದನೂರು (ಭಾನುವಾರ), ವಾಟದಹೊಸಹಳ್ಳಿ (ಸೋಮವಾರ), ತೊಂಡೇಬಾವಿ (ಮಂಗಳವಾರ), ಮಂಚೇನಹಳ್ಳಿ (ಶುಕ್ರವಾರ), ದಾರಿನಾಯಕನಪಾಳ್ಯ (ಗುರುವಾರ).

**ಬಾಗೇಪಲ್ಲಿ ತಾಲೂಕು:** ಬಾಗೇಪಲ್ಲಿ (ಸೋಮವಾರ), ಯಲ್ಲಂಪಲ್ಲಿ (ಶನಿವಾರ), ಬಿಲ್ಲೂರು (ಬುಧವಾರ), ಚೇಳೂರು (ಶುಕ್ರವಾರ), ಪುಲಿಗಾಲ (ಮಂಗಳವಾರ), ಪಾತಪಾಳ್ಯ (ಬುಧವಾರ), ಮಿಟ್ಟೇಮರಿ (ಗುರುವಾರ), ಗೂಳೂರು (ಮಂಗಳವಾರ),

**ಗುಡಿಬಂಡೆ ತಾಲೂಕು:** ಗುಡಿಬಂಡೆ (ಭಾನುವಾರ), ಹಂಪಸಂದ್ರ (ಬುಧವಾರ), ಬೀಚಗಾನಹಳ್ಳಿ (ಸೋಮವಾರ), ಸೋಮೇನಹಳ್ಳಿ (ಭಾನುವಾರ).

**ಮಾಲೂರು ತಾಲೂಕು:** ಮಾಲೂರು (ಬುಧವಾರ), ಟೇಕಲ್ (ಸೋಮವಾರ), ಚಿಕ್ಕತಿರುಪತಿ (ಶನಿವಾರ), ಚಿಕ್ಕಕುಂತೂರು (ಶನಿವಾರ), ಕಾವಲಗಿರಿಯನಹಳ್ಳಿ (ಸೋಮವಾರ), ಮಾಸ್ತಿ (ಬುಧವಾರ), ತೋರನಹಳ್ಳಿ (ಬುಧವಾರ)

**ಮುಳಬಾಗಿಲು ತಾಲೂಕು:** ಮುಳಬಾಗಿಲು (ಮಂಗಳವಾರ), ತಾಯಲೂರು (ಬುಧವಾರ), ಬೈರಕೂರು (ಗುರುವಾರ), ನಂಗಲಿ (ಶನಿವಾರ), ಮಲ್ಲನಾಯಕನಹಳ್ಳಿ (ಶುಕ್ರವಾರ), ಆವನಿ (ಗುರುವಾರ), ಹೆಬ್ಬಣಿ (ಬುಧವಾರ)

**ಶ್ರೀನಿವಾಸಪುರ ತಾಲೂಕು:** ಶ್ರೀನಿವಾಸಪುರ (ಶನಿವಾರ), ರಾಜಪಲ್ಲಿ (ಬುಧವಾರ), ಯಲ್ದೂರು (ಶುಕ್ರವಾರ), ಗೌನ್‌ಪಲ್ಲಿ (ಮಂಗಳವಾರ), ಸೋಮಯಾಜಲಪಲ್ಲಿ (ಮಂಗಳವಾರ), ರೋಣೂರು (ಗುರುವಾರ), ರಾಯಲ್ಪಾಡು (ಸೋಮವಾರ)

(ಆಧಾರ: ಜಿಲ್ಲಾ ಕೃಷಿ ಮಾರಾಟ ಇಲಾಖೆ, ಕೋಲಾರ)

**ಜಾನುವಾರು ಜಾತ್ರೆಗಳು**

ಪ್ರತೀವಾರವೂ ಸ್ಥಳೀಯ ಸಂತೆಯ ದಿನ ಅಥವಾ ಬೇರೊಂದು ದಿನ ನಡೆಯುವ ಜಾನುವಾರು ಸಂತೆಯಲ್ಲದೆ ಹಲವು ವಿಶೇಷ ಸಂದರ್ಭಗಳಲ್ಲಿ ಅಂದರೆ ಜಾತ್ರೆ, ಉತ್ಸವ ಇತ್ಯಾದಿ ಸಮಯಗಳಲ್ಲಿ ಜಾನುವಾರು ಜಾತ್ರೆಗಳನ್ನು ನಡೆಸಲಾಗುತ್ತದೆ. ಈ ಜಾತ್ರೆಗಳು, ಉತ್ಸವಗಳು ಮತ್ತು ರಥೋತ್ಸವಗಳು ಜನರಿಗೆ ಮನರಂಜನೆಯನ್ನು ಮತ್ತು ಭಕ್ತಿಯನ್ನು ಪ್ರಚೋದಿಸುವುದರ ಜೊತೆಗೆ ವಿವಿಧ ರೀತಿಯ ವರ್ತಕರಿಗೆ ಲಾಭ ತರುವ ಕೇಂದ್ರಗಳಾಗಿವೆ. ಸಾಮಾನ್ಯವಾಗಿ ಇಂತಹ ಜಾತ್ರೆಗಳನ್ನು ಸುಗ್ಗಿಯ ನಂತರ ಅಥವಾ ಮಳೆಗಾಲ ಪ್ರಾರಂಭವಾಗುವ ಮೊದಲು ಸಂಘಟಿಸುವುದು ವಾಡಿಕೆ. ಕೋಲಾರ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ನಡೆಯುವ ಜಾತ್ರೆಗಳು/ಜಾನುವಾರು ಜಾತ್ರೆಗಳ ವಿವರಗಳಿಗೆ "ಜನತೆ" ಅಧ್ಯಾಯವನ್ನು ನೋಡುವುದು.

## ತೂಕ ಅಳತೆಗಳು

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯನ್ನು ಆಚರಣೆಯಲ್ಲಿ ತರುವುದಕ್ಕಿಂತ ಪೂರ್ವದಲ್ಲಿ ಕೋಲಾರ ಜಿಲ್ಲೆಯಲ್ಲಿ ಒಂದು ಮಣಕ್ಕೆ ೪೦ ಸೇರು, ಒಂದು ಸೇರಿಗೆ ೨೪ ತೊಲೆ, ಐದು ಸೇರು ಎಂದರೆ ಪಂಚೇರು ಅಥವ ವೀಸೆ, ಈ ಮಾನಗಳು ಬಳಕೆಯಲ್ಲಿದ್ದವು. ದ್ರವ್ಯ ಪದಾರ್ಥಗಳನ್ನು ಅಳೆಯಲು ಸ್ಥಳೀಯವಾಗಿ ರೂಢಿಯಲ್ಲಿದ್ದ ತೂಕ, ಮಾಪನಗಳನ್ನು ಬಳಸಲಾಗುತ್ತಿತ್ತು. ಬೆಣ್ಣೆ, ತುಪ್ಪವನ್ನು ವೀಸೆಯಲ್ಲಿ ಮತ್ತು ಎಣ್ಣೆ ಪದಾರ್ಥಗಳನ್ನು ಸೇರಿನಲ್ಲಿ ಅಳೆಯುವ ಪದ್ಧತಿ ಜಾರಿಯಲ್ಲಿತ್ತು. ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟಕ್ಕೆ ಗ್ಯಾಲನ್ ಅಳತೆ ಮಾಪನವನ್ನು ಉಪಯೋಗಿಸಲಾಗುತ್ತಿತ್ತು.

ತೂಕಗಳ ಹಾಗೂ ಅಳತೆಗಳ ಮೆಟ್ರಿಕ್ ಪದ್ಧತಿಯನ್ನೇ ಏಕರೂಪವಾಗಿ ದೇಶಾದ್ಯಂತ ಅನುಸರಿಸಬೇಕೆಂಬ ಭಾರತ ಸರ್ಕಾರದ ತೀರ್ಮಾನಕ್ಕನುಸಾರವಾಗಿ ಕರ್ನಾಟಕ ಸರ್ಕಾರ ಕರ್ನಾಟಕದಾದ್ಯಂತ ಬಳಸಲಾಗುವ ತೂಕಗಳಿಗೆ ಹಾಗೂ ಅಳತೆಗಳಿಗೆ ಸಂಬಂಧಪಟ್ಟ ೧೯೫೮ರ ಕರ್ನಾಟಕ ತೂಕ ಮತ್ತು ಅಳತೆ (ನಿಬಂಧನೆ) ಅಧಿನಿಯಮವನ್ನು ಇಡೀ ರಾಜ್ಯದಲ್ಲಿ ೧೯೬೦ರ ಜೂನ್ ಒಂದರಿಂದ ಜಾರಿಗೆ ತಂದಿತು. ಆರಂಭಕ್ಕೆ ಮೆಟ್ರಿಕ್ ತೂಕಗಳ ಉಪಯೋಗವನ್ನು ರಾಜ್ಯದಲ್ಲಿ ಬೆಂಗಳೂರು, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಮತ್ತು ರಾಜ್ಯದ ಎಲ್ಲಾ ನಿಯಂತ್ರಿತ ಮಾರುಕಟ್ಟೆಗಳು, ಔದ್ಯೋಗಿಕ ಸಂಸ್ಥೆಗಳು ಹಾಗೂ ಕಾರ್ಖಾನೆಗಳಲ್ಲಿ ೧೯೫೮ರ ಅಕ್ಟೋಬರ್ ಒಂದರಿಂದ ಜಾರಿಗೆ ತರಲಾಯಿತು. ಆನಂತರ ೧೯೬೦ರ ಏಪ್ರಿಲ್ ಒಂದರಿಂದ

ರಾಜ್ಯದ ಎಲ್ಲಾ ಪ್ರದೇಶಗಳಿಗೂ ಅದನ್ನು ವಿಸ್ತರಿಸಲಾಯಿತು. ಈ ಹೊಸ ತೂಕಗಳ ಬಳಕೆಯನ್ನು ಇಡೀ ರಾಜ್ಯದಲ್ಲಿ ೧೯೬೨ರ ಏಪ್ರಿಲ್ ಒಂದರಿಂದ ಕಡ್ಡಾಯವಾಗಿ ಜಾರಿಗೆ ತರಲಾಯಿತು. ಮಾರುಕಟ್ಟೆ ಇಲಾಖೆಯ ಅವಿಭಾಜ್ಯ ಅಂಗವಾಗಿದ್ದ ತೂಕ ಮತ್ತು ಅಳತೆ ಇಲಾಖೆಯನ್ನು ೧೯೬೬ರಲ್ಲಿ ಬೇರ್ಪಡಿಸಿ, ಪ್ರತ್ಯೇಕವಾದ ತೂಕ ಮತ್ತು ಅಳತೆ ಇಲಾಖೆಯನ್ನು ಸ್ಥಾಪಿಸಲಾಯಿತು. ಈ ಇಲಾಖೆಯ ಹೆಸರನ್ನು ಕಾನೂನು ಮಾಪನ ಶಾಸ್ತ್ರ ಇಲಾಖೆ ಎಂದು ೧೯೯೦ರಲ್ಲಿ ಪುನರ್‌ನಾಮಕರಣ ಮಾಡಲಾಯಿತು. ಕೋಲಾರ ಜಿಲ್ಲೆಯಲ್ಲಿ ಈ ಇಲಾಖೆಯ ಆಡಳಿತ ನಿರ್ವಹಿಸಲು ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಚೇರಿಯನ್ನು ೧೯೬೨ರಲ್ಲಿ ತೆರೆಯಲಾಯಿತು. ಈ ಕಚೇರಿಯ ಅಧೀನಕ್ಕೊಳಪಟ್ಟಂತೆ ಕಾನೂನು ಮಾಪನಶಾಸ್ತ್ರ ನಿರೀಕ್ಷಕರ ಕಚೇರಿಗಳನ್ನು ೧೯೬೨ರಲ್ಲಿ ಕೋಲಾರ (ಈಗಿನ ವ್ಯಾಪ್ತಿ ಕೋಲಾರ ಮತ್ತು ಬಂಗಾರಪೇಟೆ ತಾಲೂಕುಗಳು) ಮತ್ತು ಚಿಕ್ಕಬಳ್ಳಾಪುರ (ಈಗಿನ ವ್ಯಾಪ್ತಿ ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲೂಕುಗಳು)ಗಳಲ್ಲೂ; ೧೯೮೦ರಲ್ಲಿ ಚಿಂತಾಮಣಿಯನ್ನು (ಈಗಿನ ವ್ಯಾಪ್ತಿ ಚಿಂತಾಮಣಿ, ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲೂಕುಗಳು) ಹಾಗೂ ೧೯೯೬ರಲ್ಲಿ ಕೋಲಾರದ ಆಟೋ ಮತ್ತು ಟ್ಯಾಕ್ಸಿ ಘಟಕವನ್ನೂ (ಈಗಿನ ವ್ಯಾಪ್ತಿ ಮಾಲೂರು ಮತ್ತು ಶಿಡ್ಲಘಟ್ಟ ತಾಲೂಕುಗಳಲ್ಲದೇ, ಆಟೋ ಮತ್ತು ಟ್ಯಾಕ್ಸಿ ಮೀಟರ್‌ನ ಜಿಲ್ಲಾ ವ್ಯಾಪ್ತಿ) ಸ್ಥಾಪಿಸಲಾಯಿತು. ಕಾನೂನು ಮಾಪನ ಶಾಸ್ತ್ರ ಇಲಾಖೆ ಜಿಲ್ಲೆಯಲ್ಲಿ ಇರುವ ಎಲ್ಲಾ ವ್ಯಾಪಾರಿಗಳು, ವರ್ತಕರು, ಕೈಗಾರಿಕೆ, ವಾಣಿಜ್ಯ ಉದ್ಯಮಗಳು, ಪೆಟ್ರೋಲ್ ಬಂಕ್ ಮುಂತಾದೆಡೆಗಳಲ್ಲಿ ಬಳಸಲಾಗುತ್ತಿರುವ ತೂಕ ಮತ್ತು ಅಳತೆಯ ಉಪಕರಣಗಳನ್ನು ಆಗಿಂದಾಗ್ಗೆ ಪರೀಕ್ಷಿಸುವುದು ಜೊತೆಗೆ ಮುದ್ರೆಯೊತ್ತುವ ಕಾರ್ಯವನ್ನು ನಿರ್ವಹಿಸುತ್ತದೆ. ಕೋಲಾರದ ಆಟೋ ಮತ್ತು ಟ್ಯಾಕ್ಸಿ ಘಟಕ ಜಿಲ್ಲೆಯಲ್ಲಿನ ಆಟೋ ಮತ್ತು ಟ್ಯಾಕ್ಸಿ ವಾಹನಗಳ ಮೀಟರುಗಳ ಪರಿವೀಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಜಿಲ್ಲೆಯಲ್ಲಿ ಇಲಾಖೆಯ ಪರಿವೀಕ್ಷಣೆಯ ವ್ಯಾಪ್ತಿಗೆ ಒಳಪಡಿಸಿದ ವಿವಿಧ ಸಂಸ್ಥೆಗಳ ವಿವರವನ್ನು ಮುಂದಿನ ಕೋಷ್ಟಕಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೪**

| ವಿವರ | ವರ್ಷ | | | | |
|---|---|---|---|---|---|
| | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೨-೦೩ | ೨೦೦೩-೦೪ |
| ೧. ಕೈಗಾರಿಕಾ ಸಂಸ್ಥೆಗಳು | ೬೫೦ | ೬೮೦ | ೬೦೦ | ೫೮೦ | ೫೬೯ |
| ೨. ಸರ್ಕಾರಿ ಸಂಸ್ಥೆಗಳು | ೨೫ | ೨೫ | ೩೦ | ೩೦ | ೨೦ |
| ೩. ಇಂಧನ ಪಂಪುಗಳು | ೨೫ | ೨೮ | ೨೮ | ೩೦ | ೨೦ |
| ೪. ವರ್ತಕರ ಸಂಖ್ಯೆ | ೧೧೩೫೯ | ೧೧೪೬೪ | ೧೧೪೫೦ | ೧೧೭೭೦ | ೧೨೫೯೩ |

ಆಧಾರ: ಜಿಲ್ಲಾ ಕಾನೂನು ಮಾಪನಶಾಸ್ತ್ರ ಇಲಾಖೆ, ಕೋಲಾರ

ಇತ್ತೀಚಿನ ಕೆಲವು ವರ್ಷಗಳಲ್ಲಿ ಇಲಾಖೆಯ ಪರಿವೀಕ್ಷಣೆಗೆ ಒಳಪಟ್ಟ ತೂಕಗಳು, ಅಳತೆಗಳು, ತೂಕದ ಸಾಧನಗಳು ಮತ್ತು ಅಳತೆ ಸಾಧನಗಳ ಸಂಖ್ಯೆಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೨೫**

| ವಿವರ | ವರ್ಷ | | | |
|---|---|---|---|---|
| | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೩-೦೪ |
| ೧. ತೂಕಗಳು | ೯೫೧೬೪ | ೮೪೪೭೦ | ೯೦೧೨೬ | ೯೩೪೪೭ |
| ೨. ಅಳತೆಗಳು | ೨೩೭೭೮ | ೨೪೫೨೬ | ೨೮೭೭೫ | ೨೬೬೧೫ |
| ೩. ತೂಕದ ಸಾಧನಗಳು | ೨೧೯೬೫ | ೨೦೩೩೩ | ೧೯೯೯೭ | ೧೯೬೫೩ |

| | | | | |
|---|---|---|---|---|
| **೪. ಅಳತೆ ಸಾಧನಗಳು** | ೪೪೭ | ೪೩೪ | ೪೩೦ | ೩೫೬ |

ಆಧಾರ: ಜಿಲ್ಲಾ ಕಾನೂನು ಮಾಪನಶಾಸ್ತ್ರ ಇಲಾಖೆ, ಕೋಲಾರ

ಇತ್ತೀಚಿನ ಮೂರು ವರ್ಷಗಳಲ್ಲಿ ಇಲಾಖೆ ತೂಕ ಮತ್ತು ಅಳತೆ ಸಾಧನಗಳನ್ನು ಪರೀಕ್ಷಿಸಿ, ಮುದ್ರೆಯೊತ್ತಿ ವಸೂಲು ಮಾಡಿದ ಶುಲ್ಕ (ಸತ್ಯಾಪನೆ ಶುಲ್ಕ), ತನಿಖೆ ನಡೆಸಿ ಪತ್ತೆಹಚ್ಚಿದ ಒಟ್ಟು ಪ್ರಕರಣಗಳು ಮುಂತಾದ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೨೬**

| | ವಿವರ | ವರ್ಷ | | |
|---|---|---|---|---|
| | | ೨೦೦೧-೦೨ | ೨೦೦೨-೦೩ | ೨೦೦೩-೦೪ |
| ೧. | ಸತ್ಯಾಪನೆ ಶುಲ್ಕ (ರೂ.) | ೧೧,೧೪,೬೮೫ | ೨೧,೧೨,೯೭೦ | ೨೧,೧೭,೬೩೧ |
| ೨. | ನಿಯಮ ಉಲ್ಲಂಘನೆ ಸಂಬಂಧ ಹೂಡಲಾದ ಮೊಕದ್ದಮೆಗಳು (ಸಂಖ್ಯೆ) | ೧,೧೧೬ | ೧,೧೧೪ | ೯೭೩ |
| ೩. | ಅಭಿಸಂಧಾನವಾದ ಮೊಕದ್ದಮೆಗಳು (ಸಂಖ್ಯೆ) | ೧,೦೯೦ | ೯೩೬ | ೯೪೭ |
| ೪. | ಅಭಿಸಂಧಾನ ಜುಲ್ಮಾನೆ ವಸೂಲಿ (ರೂ.) | ೪,೭೫,೩೦೫ | ೩,೧೧,೯೭೫ | ೨,೯೧,೭೫೦ |
| ೫. | ನ್ಯಾಯಾಲಯದಲ್ಲಿ ಇತ್ಯರ್ಥವಾದ ಮೊಕದ್ದಮೆಗಳು (ಸಂಖ್ಯೆ) | ೪೫ | ೩೫ | ೧೮ |
| ೬. | ನ್ಯಾಯಾಲಯದಲ್ಲಿ ವಸೂಲಾದ ಜುಲ್ಮಾನೆ (ರೂ.) | ೨೭,೩೦೦ | ೧೬,೬೦೦ | ೧೬,೮೫೦ |

ಆಧಾರ: ಜಿಲ್ಲಾ ಕಾನೂನು ಮಾಪನಶಾಸ್ತ್ರ ಇಲಾಖೆ, ಕೋಲಾರ

## ಆಹಾರ ಮತ್ತು ನಾಗರಿಕ ಸರಬರಾಜು

ಜೀವನಾವಶ್ಯಕ ವಸ್ತುಗಳ ಬೇಡಿಕೆ ಮತ್ತು ಪೂರೈಕೆಗೆ ಇರುವ ಅಂತರವನ್ನು ಗಮನಿಸಿ ಸರ್ಕಾರ ಜೀವನಾವಶ್ಯಕ ವಸ್ತುಗಳ ಸರಬರಾಜು ಮತ್ತು ಹಂಚಿಕೆಯನ್ನು ನಿಯಂತ್ರಿಸುತ್ತಾ ಬಂದಿದೆ. ವಿಶೇಷವಾಗಿ ಆಹಾರ ಧಾನ್ಯಗಳ ನಿಯಂತ್ರಣವನ್ನು ಎರಡನೆಯ ಮಹಾಯುದ್ಧದ ನಂತರ ಜಾರಿಗೊಳಿಸಲಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಿಲ್ಲಾ ಮಟ್ಟದಲ್ಲಿ ಜೀವನಾವಶ್ಯಕ ಕಾಯ್ದೆ ೧೯೬೫ರನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ರೂಪಿಸಲ್ಪಟ್ಟ ೨೮ ವಿವಿಧ ನಿಯಂತ್ರಣ ಆಜ್ಞೆಗಳನ್ನು ಕಾರ್ಯಗತಗೊಳಿಸುತ್ತಿದೆ. ಜೀವನಾವಶ್ಯಕ ವಸ್ತುಗಳ ನ್ಯಾಯ ಸಮ್ಮತ ಹಂಚಿಕೆ ಮತ್ತು ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳುವ ಬಗ್ಗೆ ರಚಿಸಲಾದ ವಿವಿಧ ನಿಯಂತ್ರಣ ಕಾಯ್ದೆಗಳ ಅನುಷ್ಠಾನ ಮತ್ತು ಅನೌಪಚಾರಿಕ ಪಡಿತರ ಪದ್ಧತಿಯ ಕಾರ್ಯಾಚರಣೆ ಮುಂತಾದವು ಇಲಾಖೆಯ ಪ್ರಮುಖ ಕಾರ್ಯಗಳಾಗಿವೆ.

### ಸಾರ್ವಜನಿಕ ವಿತರಣಾ ವ್ಯವಸ್ಥೆ

ಕರ್ನಾಟಕದಲ್ಲಿ ಜೀವನಾವಶ್ಯಕ ಆಹಾರ ಧಾನ್ಯ ಮತ್ತು ಇತರೆ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ಸಾರ್ವಜನಿಕರಿಗೆ ಹಂಚುವ ವ್ಯವಸ್ಥೆಯು ೧೯೪೪ರಲ್ಲಿ ಮೊದಲಿಗೆ ಕೆಲವು ಆಯ್ದ ನಗರಗಳಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಮೈಸೂರು ರಾಜ್ಯದ ಬೆಂಗಳೂರು ನಗರ ಮತ್ತು ಕೋಲಾರ ಚಿನ್ನದ ಗಣಿ ಪ್ರದೇಶಗಳಲ್ಲಿ ಶಾಸನಬದ್ಧ ಪಡಿತರ ಪದ್ಧತಿಯನ್ನು ಪ್ರಾರಂಭಿಸಲಾಯಿತು. ಆನಂತರದ ದಿನಗಳಲ್ಲಿ ರಾಜ್ಯದ ಇನ್ನೂ ಹೆಚ್ಚಿನ ನಗರಗಳನ್ನು ಈ ವ್ಯವಸ್ಥೆಯ ವ್ಯಾಪ್ತಿಗೆ ಒಳಪಡಿಸಲಾಯಿತು. ಸ್ವಾತಂತ್ರ್ಯಾನಂತರ ೧೯೪೮ರಲ್ಲಿ ಈ ವ್ಯವಸ್ಥೆಯನ್ನು ಕೈಬಿಡಲಾಯಿತು. ಆಹಾರ ಸಾಮಗ್ರಿಗಳ ತುರ್ತು ಹಂಚಿಕೆಯ

ಅವಶ್ಯಕತೆಯು ೧೯೬೫ರಲ್ಲಿ ಪುನ: ಉದ್ಭವಿಸಿತು. ಪರಿಸ್ಥಿತಿಯನ್ನು ಸುಧಾರಿಸಲು ಕೂಡಲೇ ಅನೌಪಚಾರಿಕ ಪಡಿತರ ಪದ್ಧತಿಯನ್ನು ಬೆಂಗಳೂರು ಮತ್ತು ಕೈಗಾರಿಕಾ ನಗರ ಕೆ.ಜಿಎಫ್.ಗಳಲ್ಲಿ ಪ್ರಾರಂಭಿಸಲಾಯಿತು. ಈ ವ್ಯವಸ್ಥೆಯನ್ನು ೧೯೭೮ರಲ್ಲಿ ೪೦,೦೦೦ ಮತ್ತು ಆದಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಎಲ್ಲ ನಗರ ಮತ್ತು ಪಟ್ಟಣಗಳಿಗೂ ವಿಸ್ತರಿಸಲಾಯಿತು. ಅದರಂತೆ ಮೊದಲು ಕೋಲಾರ ನಗರ ಪ್ರದೇಶ ಅನಂತರ ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ಪಟ್ಟಣ ಪ್ರದೇಶಗಳಿಗೂ ಹಂತಹಂತವಾಗಿ ಅನೌಪಚಾರಿಕ ಪಡಿತರ ವ್ಯವಸ್ಥೆಯನ್ನು ವಿಸ್ತರಿಸಲಾಯಿತು.

ವಾರ್ಷಿಕ ಆದಾಯ ರೂ.೩೫೦೦ಕ್ಕಿಂತ (ಪ್ರಸ್ತುತ ರೂ.೧೨,೦೦೦) ಕಡಿಮೆ ಇರುವ ರಾಜ್ಯದ ಗ್ರಾಮಾಂತರ ಪ್ರದೇಶದ ಬಡಜನರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನು ೧-೧೧-೧೯೮೫ರಿಂದ ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯ ವ್ಯಾಪ್ತಿಗೆ ಭೂ ರಹಿತ ಕೃಷಿ ಕಾರ್ಮಿಕರು, ಗ್ರಾಮೀಣ ಕುಶಲಕರ್ಮಿಗಳು, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು, ತೋಟಗಾರಿಕೆ ಕಾರ್ಮಿಕರು, ಅಲ್ಲದೇ ಅಂಗವಿಕಲರು, ವೃದ್ಧಾಪ್ಯ ಹಾಗೂ ವಿಧವಾ ಮಾಸಾಶನದ ಫಲಾನುಭವಿಗಳು, ಮುಂತಾದವರನ್ನು ಒಳಪಡಿಸಲಾಯಿತು. ಈ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಿ, ಪ್ರತಿ ಪಡಿತರ ಚೀಟಿಗೆ ತಿಂಗಳಿಗೆ ಐದು ಕಿಲೋ ಅಕ್ಕಿ (ಕಿ.ಗ್ರಾಂ.ಗೆ ೨ರೂ.೫೦ ಪೈಸೆಯಂತೆ) ಮತ್ತು ಐದು ಕಿಲೋ ಗೋಧಿಯನ್ನು (ಕಿ.ಗ್ರಾಂ.ಗೆ ೧ರೂ. ೬೦ ಪೈಸೆಯಂತೆ) ವಿತರಿಸಲಾಗುತ್ತಿತ್ತು. ಈ ಸೌಲಭ್ಯವನ್ನು ೧೯೮೯ರ ಆಗಸ್ಟ್ ೧೫ರಿಂದ ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣ ಪ್ರದೇಶದ ಬಡಜನರಿಗೂ ವಿಸ್ತರಿಸಲಾಯಿತು. ಗ್ರಾಮೀಣ ಪ್ರದೇಶದ ದುರ್ಬಲ ವರ್ಗದವರನ್ನು ಪ್ರತ್ಯೇಕವಾಗಿ ಗುರುತಿಸುವ ಉದ್ದೇಶದಿಂದ ಅಂತಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯನ್ನು ಮತ್ತು ಇತರರಿಗೆ ಕೇಸರಿ ಬಣ್ಣದ ಪಡಿತರ ಚೀಟಿಯನ್ನು ನೀಡಲಾಗಿತ್ತು. ಅಂತೆಯೇ ಪಟ್ಟಣ ಪ್ರದೇಶದ ದುರ್ಬಲ ವರ್ಗದವರಿಗೆ ಹಸಿರು ಪಡಿತರ ಚೀಟಿಯನ್ನೂ ಹಾಗೂ ಇತರರಿಗೆ ಸಾಮಾನ್ಯ ಪಡಿತರ ಚೀಟಿಗಳನ್ನು ವಿತರಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿನ ಕೇಸರಿ ಪಡಿತರ ಚೀಟಿಯನ್ನು ಪಡೆದವರು ಮತ್ತು ಪಟ್ಟಣ ಪ್ರದೇಶಗಳಲ್ಲಿನ ಸಾಮಾನ್ಯ ಪಡಿತರ ಚೀಟಿಯನ್ನು ಹೊಂದಿದವರು ಪರಿಮಿತ ಪ್ರಮಾಣದಲ್ಲಿ ಸಾಮಾನ್ಯ ನೀಡಿಕೆ ಬೆಲೆಗಳಲ್ಲಿ ನಿರ್ಧಿಷ್ಟ ಪ್ರಮಾಣದ ಅವಶ್ಯಕ ಸಾಮಗ್ರಿಗಳನ್ನು ಪಡೆಯುತ್ತಿದ್ದರು.

ರಾಜ್ಯದಲ್ಲಿ ೧೯೯೭ರ ಜೂನ್ ೧ ರಿಂದ ಗುರಿ ಆಧಾರಿತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಆಚರಣೆಗೆ ತರಲಾಗಿದೆ. ದಿನಾಂಕ ೦೧-೧೧-೧೯೮೫ರಿಂದ ರಾಜ್ಯದಲ್ಲಿ ರೂಢಿಯಲ್ಲಿದ್ದ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನೇ ಮುಂದುವರಿಸಲಾಗಿದೆ. ವಾರ್ಷಿಕ ಆದಾಯ ರೂ.೧೭,೦೦೦ಕ್ಕಿಂತ ಹೆಚ್ಚಿಗೆ ಇರುವ ನಗರವಾಸಿ ಕುಟುಂಬಗಳಿಗೆ ಭಾವಚಿತ್ರವಿರುವ ಫೋಟೋ ಪಡಿತರ ಚೀಟಿಯನ್ನೂ, ವಾರ್ಷಿಕ ಆದಾಯ ರೂ.೧೨,೦೦೦ಕ್ಕಿಂತ ಹೆಚ್ಚಿಗೆ ಇರುವ ಗ್ರಾಮಾಂತರ ಪ್ರದೇಶದ ಜನರಿಗೆ ಕೇಸರಿ ಪಡಿತರ ಚೀಟಿಯನ್ನೂ ನೀಡಲಾಗಿದೆ. ವಾರ್ಷಿಕ ಆದಾಯ ರೂ.೧೨,೦೦೦ಕ್ಕಿಂತ ಕಡಿಮೆ ಇರುವ ಗ್ರಾಮಾಂತರ ಪ್ರದೇಶದ ಬಡಜನರಿಗೂ ಹಾಗೂ ವಾರ್ಷಿಕ ಆದಾಯ ರೂ.೧೭,೦೦೦ಕ್ಕಿಂತ ಕಡಿಮೆ ಇರುವ ಪಟ್ಟಣ/ನಗರವಾಸಿ ಬಡಜನರಿಗೂ ಹಸಿರು/ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ (ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇರೆಗೆ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಅಸ್ತಿತ್ವದಲ್ಲಿರುವ ಹಸಿರು ಚೀಟಿಯನ್ನು ಬದಲಿಸಿ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ). ಹಳದಿ ಪಡಿತರ ಚೀಟಿಯನ್ನು ಪಡೆದಿರುವ ಪ್ರತಿ ಕುಟುಂಬಕ್ಕೆ ನ್ಯಾಯಬೆಲೆ ಅಂಗಡಿಗಳ ಮೂಲಕ ತಿಂಗಳಿಗೆ ೨೮ ಕಿ.ಗ್ರಾಂ ಅಕ್ಕಿ (ಕಿಲೋಗೆ ರೂ.೬.೧೫ರಂತೆ) ಮತ್ತು ೭ಕಿ.ಗ್ರಾಂ ಗೋಧಿ (ಕಿಲೋಗೆ ರೂ.೪.೬೫ರಂತೆ) ಯನ್ನು ನೀಡಲಾಗುತ್ತಿತ್ತು. ಈ ಯೋಜನೆಯನ್ನು ದಿನಾಂಕ ೧.೯.೨೦೦೪ರಿಂದ ಪರಿಷ್ಕರಿಸಲಾಗಿದ್ದು, ಅದರಂತೆ ೨೦

ಕಿ.ಗ್ರಾಂ ಅಕ್ಕಿ (ಕಿಲೋಗೆ ೩ ರೂ.) ಹಾಗೂ ಐದು ಕಿ.ಗ್ರಾಂ ಗೋದಿಯನ್ನು (ಕಿಲೋಗೆ ೩ ರೂ.) ನೀಡಲಾಗುತ್ತಿದೆ.

ಭಾರತ ಸರ್ಕಾರ ಕಡುಬಡವರಿಗಾಗಿ "ಅಂತ್ಯೋದಯ ಅನ್ನ ಯೋಜನೆ" ಎಂಬ ಹೊಸ ಯೋಜನೆಯನ್ನು ೨೦೦೧-೦೨ರಲ್ಲಿ ಆರಂಭಿಸಿದೆ. ಈ ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೆ ತಿಂಗಳಿಗೆ ೨೮ ಕಿ.ಗ್ರಾಂ ಅಕ್ಕಿಯನ್ನು ಮತ್ತು ೭ ಕಿ.ಗ್ರಾಂ. ಗೋಧಿಯನ್ನು ಅತಿ ರಿಯಾಯಿತಿ ದರಗಳಲ್ಲಿ ಅಂದರೆ ಅಕ್ಕಿ ಕಿ.ಗ್ರಾಂ.ಗೆ ರೂ.ಮೂರು ಹಾಗೂ ಗೋಧಿ ಕಿ.ಗ್ರಾಂ.ಗೆ ರೂ. ಎರಡರಂತೆ ವಿತರಿಸಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ೨೦೦೨-೦೩ರಲ್ಲಿ ಒಟ್ಟು ೧೧೮೨ ನ್ಯಾಯಬೆಲೆ ಅಂಗಡಿಗಳಿದ್ದು, ಅವುಗಳಲ್ಲಿ ೨೮೧ ನಗರ ಪ್ರದೇಶಗಳಲ್ಲೂ ಮತ್ತು ೯೦೧ ಗ್ರಾಮೀಣ ಪ್ರದೇಶಗಳಲ್ಲೂ ಇದ್ದವು. ಜಿಲ್ಲೆಯಲ್ಲಿ ಒಟ್ಟು ೫,೪೮,೦೨೪ ಪಡಿತರ ಚೀಟಿಗಳಿದ್ದು, ಅವುಗಳಲ್ಲಿ ೧,೧೬,೪೩೩ ಭಾವಚಿತ್ರ ಪಡಿತರ ಚೀಟಿಗಳೂ, ೭೩,೧೯೫ ಕೇಸರಿ ಪಡಿತರ ಚೀಟಿಗಳೂ, ೩,೩೬,೪೨೫ ಹಸಿರು/ಹಳದಿ ಪಡಿತರ ಚೀಟಿಗಳೂ ಹಾಗೂ ೨೧,೯೭೧ ಅಂತ್ಯೋದಯ ಪಡಿತರ ಚೀಟಿಗಳು ಆಗಿದ್ದವು. ವರ್ಷ ೨೦೦೩-೦೪ರಲ್ಲಿ ಜಿಲ್ಲೆಯಲ್ಲಿದ್ದ ಒಟ್ಟು ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ೧,೨೧೧ ಆಗಿದ್ದಿತು. ಭಾವಚಿತ್ರ ಪಡಿತರ ಚೀಟಿಗಳ ಸಂಖ್ಯೆ ೧,೧೪,೫೯೯, ಕೇಸರಿ ಪಡಿತರ ಚೀಟಿಗಳ ಸಂಖ್ಯೆ ೭೧,೪೮೮, ಹಳದಿ ಪಡಿತರ ಚೀಟಿಗಳ ಸಂಖ್ಯೆ ೩,೮೦,೯೫೬ ಹಾಗೂ ಅಂತ್ಯೋದಯ ಪಡಿತರ ಚೀಟಿಗಳ ಸಂಖ್ಯೆ ೩೬,೩೨೦ (೩೨,೧೪೨ ಗ್ರಾಮಾಂತರ ಮತ್ತು ೪,೧೭೮ ನಗರ/ಪಟ್ಟಣ) ಆಗಿದ್ದಿತು.

## ಉಗ್ರಾಣ ವ್ಯವಸ್ಥೆ

ಸುಗ್ಗಿಯ ಕಾಲದಲ್ಲಿ ವ್ಯವಸಾಯ ಉತ್ಪನ್ನಗಳು ರಾಶಿಯಾದ ಮೇಲೆ, ಅವುಗಳನ್ನು ವರ್ಷಪೂರ್ತಿ ಉಪಯೋಗಿಸುವುದಕ್ಕಾಗಿ ರೈತರು ತಮ್ಮ ಮನೆಗಳಲ್ಲೇ ಕಣಜ, ಹಗೇವು ಮುಂತಾದ ಉಗ್ರಾಣಗಳಲ್ಲಿ ಶೇಖರಿಸಿಡುವ ಪದ್ಧತಿ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಈ ರೀತಿಯ ಸಾಂಪ್ರದಾಯಿಕ ಉಗ್ರಾಣಗಳಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುವುದರಿಂದ ಧಾನ್ಯಗಳು ಹಾಳಾಗುವುದೂ ಉಂಟು. ಭೂಮಿಯೊಳಗೆ ಮಾಡುವ ಕಣಜಗಳು ದೋಷಪೂರಿತವಾಗಿರುತ್ತವೆ. ಈ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಉತ್ತಮಪಡಿಸಲು ಸರ್ಕಾರ ಉಗ್ರಾಣಗಳ ನಿರ್ಮಾಣಕ್ಕೆ ಒಂದು ಯೋಜನೆಯನ್ನು ರೂಪಿಸಿತು. ರೈತರಿಗೆ ನೂತನ ಉಗ್ರಾಣಗಳ ನಿರ್ಮಾಣಕ್ಕೆ ಮಾರ್ಗದರ್ಶನ ನೀಡುವುದು ಒಂದು ಅಂಶವಾದರೆ, ಸರ್ಕಾರವೇ ಉಗ್ರಾಣಗಳನ್ನು ಕಟ್ಟಿಸಿ, ರೈತರ ಉತ್ಪನ್ನಗಳನ್ನು ಹಾಳಾಗದಂತೆ ರಕ್ಷಿಸುವುದು ಮತ್ತೊಂದು ಅಂಶ. ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಗ್ರಾಣ ಯೋಜನೆಯನ್ನು ಅಂಗೀಕರಿಸಿದವು. ರಾಷ್ಟ್ರ ಮಟ್ಟದಲ್ಲಿ ಕೇಂದ್ರಿಯ ಉಗ್ರಾಣ ನಿಗಮವನ್ನು ಕೇಂದ್ರ ಸರ್ಕಾರವೂ, ರಾಜ್ಯಗಳ ಮಟ್ಟದಲ್ಲಿ ರಾಜ್ಯ ಉಗ್ರಾಣ ನಿಗಮಗಳನ್ನು ರಾಜ್ಯ ಸರ್ಕಾರಗಳು ಸ್ಥಾಪಿಸಿದವು.

ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ೧೯೫೯ರಲ್ಲಿ ಚಿಂತಾಮಣಿ, ೧೯೬೯ರಲ್ಲಿ ಬಂಗಾರಪೇಟೆ ಮತ್ತು ಗೌರಿಬಿದನೂರು ಹಾಗೂ ೧೯೭೯ರಲ್ಲಿ ಮುಳಬಾಗಿಲುಗಳಲ್ಲಿ ಉಗ್ರಾಣ ಮಳಿಗೆಗಳನ್ನು ನಿರ್ಮಿಸಿತು. ೨೦೦೩-೦೪ರಲ್ಲಿದ್ದಂತೆ ಈ ಉಗ್ರಾಣ ಮಳಿಗೆಗಳ ಸಂಗ್ರಹಣಾ ಸಾಮರ್ಥ್ಯ ಚಿಂತಾಮಣಿ ೪,೯೨೦ ಮೆ.ಟನ್, ಬಂಗಾರಪೇಟೆ ೧೫,೧೨೪ ಮೆ.ಟನ್., ಗೌರಿಬಿದನೂರು ೧೦೦೦ ಮೆ.ಟನ್. ಮತ್ತು ಮುಳಬಾಗಿಲು ೧,೫೦೦ ಮೆ.ಟನ್. ಆಗಿದ್ದಿತು. ಬಂಗಾರಪೇಟೆಯಲ್ಲಿನ ಉಗ್ರಾಣ ಕೇಂದ್ರಕ್ಕೆ ರೈಲ್ವೆ ಗೂಡ್ಸ್‌ಶೆಡ್ಡಿನ ಸೌಲಭ್ಯ ಸಹ ಇರುವುದು. ಉಗ್ರಾಣ ನಿಗಮವು ದಾಸ್ತಾನುಗಾರರಿಗೆ ಸಂಗ್ರಹಣೆ

ಸೌಲಭ್ಯವನ್ನು ಒದಗಿಸುವುದಲ್ಲದೇ ದಾಸ್ತಾನು ಮಾಡಲ್ಪಟ್ಟ ಸರಕುಗಳಿಗೆ ಧೂಮೋಪಚಾರ ಮತ್ತು ಔಷಧಿ ಸಿಂಪರಣೆ ಸೌಲಭ್ಯವನ್ನೂ ಒದಗಿಸುತ್ತದೆ. ದಾಸ್ತಾನುಗಾರರು ಉಗ್ರಾಣ ರಶೀದಿಯ ಆಧಾರದ ಮೇಲೆ ಬ್ಯಾಂಕುಗಳಲ್ಲಿ ಸಾಲವನ್ನೂ ಪಡೆಯಬಹುದಾಗಿದೆ.

## ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆ

ಇಂದಿನ ಸಂಕೀರ್ಣಮಯ ಮತ್ತು ಶೋಷಣೆಯಿಂದ ಕೂಡಿದ ವಾಣಿಜ್ಯ ವ್ಯವಸ್ಥೆಯಲ್ಲಿ ಗ್ರಾಹಕನನ್ನೇ 'ಅಗ್ರಮಾನ್ಯ', 'ಸರ್ವಸ್ವ' ಎಂದು ಹಾಡಿಹೊಗಳಿದರೂ, ಗ್ರಾಹಕನು ಎಷ್ಟೇ ಜಾಗ್ರತನಾಗಿದ್ದರೂ, ಹಲವಾರು ವಿಧದಲ್ಲಿ ವರ್ತಕರಿಂದ, ವಿತರಕರಿಂದ, ಮಧ್ಯವರ್ತಿಗಳಿಂದ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ, ಒಂದಲ್ಲಾ ಒಂದು ಬಗೆಯ ಶೋಷಣೆಗೆ ಒಳಗಾಗುತ್ತಾನೆ. ಈ ನಿರಂತರ ಶೋಷಣೆಯನ್ನು ಕೆಲಮಟ್ಟಿಗೆ ತಪ್ಪಿಸಲು ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಮತ್ತು ವಾಣಿಜ್ಯಕ ಮೌಲ್ಯಗಳನ್ನು, ಸೇವೆಗಳನ್ನು ಸುಧಾರಿಸಲು ಸಹಾಯಕವಾಗುವಂತೆ ಕೇಂದ್ರ ಸರ್ಕಾರವು ೧೯೮೬ರಲ್ಲಿ 'ಗ್ರಾಹಕ ಸಂರಕ್ಷಣಾ ಕಾಯ್ದೆ'ಯನ್ನು ರೂಪಿಸಿತು. ಅದರ ಅನ್ವಯ ಗ್ರಾಹಕರ ಕುಂದುಕೊರತೆಗಳನ್ನು ನಿವಾರಿಸಲು ಕರ್ನಾಟಕ ಸರ್ಕಾರವು ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳ ಕೇಂದ್ರಸ್ಥಾನಗಳಲ್ಲಿ ಗ್ರಾಹಕರ ವೇದಿಕೆಗಳನ್ನು ಸ್ಥಾಪಿಸಿದೆ. ಈ ಕಾಯ್ದೆಯಡಿಯಲ್ಲಿ ದೂರುದಾರನ ವಸ್ತುಗಳ/ಸೇವೆಯ ಮೌಲ್ಯ ರೂ.೫ ಲಕ್ಷಕ್ಕಿಂತ ಕಡಿಮೆ ಇದ್ದಾಗ ಜಿಲ್ಲಾ ವೇದಿಕೆಗಳಲ್ಲೂ, ಮೌಲ್ಯ ರೂ.೫ ಲಕ್ಷದಿಂದ ೨೦ ಲಕ್ಷಗಳಾಗಿದ್ದಾಗ ರಾಜ್ಯ ಮಟ್ಟದ ವೇದಿಕೆಗೂ ಹಾಗೂ ಮೌಲ್ಯವು ರೂ.೨೦ ಲಕ್ಷ ಮೇಲ್ಪಟ್ಟಲ್ಲಿ ರಾಷ್ಟ್ರಮಟ್ಟದ ವೇದಿಕೆ, ಹೊಸ ದೆಹಲಿಗೆ ದೂರು ಸಲ್ಲಿಸಬಹುದಾಗಿರುತ್ತದೆ (೨೦೦೨ರ ಡಿಸೆಂಬರ್‌ನಲ್ಲಿ ಈ ಕಾಯ್ದೆಗೆ ತಿದ್ದುಪಡಿ ಮಾಡಿದ್ದು ಅದರಂತೆ ವಸ್ತುಗಳ/ಸೇವೆಯ ಮೌಲ್ಯ ಐದರಿಂದ ೨೦ ಲಕ್ಷ ರೂ.ಗಳವರೆಗೆ ಇದ್ದಾಗ ಜಿಲ್ಲಾ ವೇದಿಕೆಗಳಲ್ಲೂ, ಮೌಲ್ಯ ೨೦ ಲಕ್ಷ ರೂ.ಗಳಿಂದ ಒಂದು ಕೋಟಿ ರೂ.ಗಳಾಗಿದ್ದಾಗ ರಾಜ್ಯ ಮಟ್ಟದ ವೇದಿಕೆಗೂ ಹಾಗೂ ೨೦ ಲಕ್ಷ ರೂ.ಗಳಿಂದ ಒಂದು ಕೋಟಿ ರೂ.ಗೂ ಮೇಲ್ಪಟ್ಟಲ್ಲಿ ರಾಷ್ಟ್ರಮಟ್ಟದ ವೇದಿಕೆ, ಹೊಸದೆಹಲಿಗೂ ದೂರು ಸಲ್ಲಿಸಬಹುದಾಗಿರುತ್ತದೆ).

ಮೇಲಿನ ಕಾನೂನಿನನ್ವಯ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದಂತೆ 'ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಯು' ಕೋಲಾರದಲ್ಲಿ ೧೯೯೧ರಲ್ಲಿ ಸ್ಥಾಪನೆಯಾಯಿತು. ೧೯೯೧ ರಿಂದ ೨೦೦೫ರ ಮಾರ್ಚ್ ಅಂತ್ಯದವರೆಗೆ ಈ ಗ್ರಾಹಕರ ವೇದಿಕೆಯಲ್ಲಿ ದಾಖಲಾದ ವಿವಿಧ ಬಗೆಯ ದೂರುಗಳ ಸಂಖ್ಯೆ ೧೪೭೦ ಆಗಿದ್ದಿತು. ಈ ಅವಧಿಯಲ್ಲಿ ಗ್ರಾಹಕರ ಪರವಾಗಿ ನಿರ್ಣಯಿಸಲ್ಪಟ್ಟ ವ್ಯಾಜ್ಯಗಳ ಸಂಖ್ಯೆ ೬೨೩ ಆಗಿದ್ದಿತು. ಈ ಅರೆ ನ್ಯಾಯಾಲಯಕ್ಕೆ ಸಲ್ಲಿಸಲಾದ ದೂರುಗಳಲ್ಲಿ ಹೆಚ್ಚಾಗಿ ಜೀವವಿಮಾ ನಿಗಮ ಹಾಗೂ ಇತರೆ ವಿಮಾ ಕಂಪನಿಗಳು, ಬೀಜ ಕಂಪನಿ, ದೂರವಾಣಿ ಇಲಾಖೆ, ಅಂಚೆ ಇಲಾಖೆ, ಸಹಕಾರ ಸಂಘ, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸೇವೆ ಮತ್ತು ಸರಕಿನ ದೋಷ ಇತ್ಯಾದಿಗಳಿಗೆ ಅನ್ವಯಿಸಿದ್ದವು.